ಮಾಪ್ರೋತ್ಸೆ ತುಂಗ

ನಗರಗೆರೆ ರಮೇಶ್



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಮಾವೋ ತ್ಸೆ ತುಂಗ್

ನಗರಗೆರೆ ರಮೇಶ್

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು–೫೬೦೦೦೨

MAVO TSE THUNG—Written by Nagaragere Ramesh and Published by Karnataka Sahitya Akademy, Nrupatunga Road, Bangalore-560002.

First Publication 1994 Pages : viii+64

ಮೊದಲನೇ ಮುದ್ರಣ ೧೯೯೪

ನೆರವು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ಎರಡು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು–೫೬೦ ೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆ ಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸು ವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆ ಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿ ಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ-ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ; ಅಸಮಾನತೆಯನ್ನು

ಒಪ್ಪುವುದಿಲ್ಲ ; ಅವಮಾನವೀಯತೆಯನ್ನು ಘೋಷಿಸುವುದಿಲ್ಲ. ಅದರ ಆದ್ಯತೆಗಳಲ್ಲಿ ಅಂತರವಿರಬಹುದು ; ಚಿಂತನೆಯಲ್ಲಿ ವೈರುಧ್ಯಗಳಿರ ಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒಸ್ತ್ರಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತ ನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇ ಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯು ವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪ — ಬರಗೂರು ರಾಮಚಂದ್ರಪ್ಪ
ಬೆಂಗಳೂರು — ಅಧ್ಯಕ್ಷರು

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ನಗರಗೆರೆ ರಮೇಶ್

ಮಾವೋ ತ್ಸೆ ತುಂಗ್

ಅಧ್ಯಾಯ ೧

ಹಿನ್ನೆಲೆ

ಮಾನವನ ಇತಿಹಾಸದಲ್ಲಿ ಕಂಡು ಬರುವ ಹಲವಾರು ವ್ಯಕ್ತಿಗಳಲ್ಲಿ ಕೆಲವರು ಸಾಮಾಜಿಕ ಚಿಂತಕರಾಗಿಯೂ ಮತ್ತೆ ಕೆಲವರು ತಮ್ಮ ಜನರ ನಾಯಕರಾಗಿಯೂ ನೆನಪಿನಲ್ಲಿ ಉಳಿಯುವುದುಂಟು. ಇನ್ನೂ ಕೆಲವರು ವಿಭಿನ್ನ ಕ್ಷೇತ್ರಗಳಲ್ಲಿ ದುಡಿದು ಮಾನವನ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿರುವುದು ಸಾಮಾನ್ಯವಾಗಿ ತಿಳಿದ ಸಂಗತಿಯೇ ಆಗಿದೆ. ಆದರೆ ಇಂಥವರಿಗಿಂತಲೂ ಕಡಿಮೆ ಸಂಖ್ಯೆಯಲ್ಲಿನ ಕೆಲವರು ಒಂದು ಕಡೆ ಸೈದ್ಧಾಂತಿಕವಾಗಿ ತಮ್ಮ ಯೋಚನಾ ಕ್ರಮವನ್ನು ವೈಜ್ಞಾನಿಕ ತಳಹದಿಯ ಮೇಲೆ ಪ್ರತಿಪಾದಿಸುವುದರ ಜೊತೆಗೆ ತಾವು ನಂಬಿದ್ದ ತತ್ತ್ವದ ಜಾರಿಗಾಗಿ ತಮ್ಮದೇ ನಾಯಕತ್ವದಲ್ಲಿ ಜನರನ್ನು ಒಂದುಗೂಡಿಸಿ, ಮುನ್ನಡೆಸಿ ಕೊನೆಗೆ ಸಮಷ್ಟಿಯ ಒಳಿತಿಗಾಗಿ ತಾವು ಹೊಂದಿದ್ದ ಗುರಿಯನ್ನು ಮುಟ್ಟುವುದರಲ್ಲಿ ಯಶಸ್ವಿಯಾದದ್ದೂ ಉಂಟು. ಈ ವ್ಯಕ್ತಿಗಳು ತಮ್ಮನ್ನು ತಾವು ಚಿಂತನೆಗೆ ಮಾತ್ರ ಸೀಮಿತಗೊಳಿಸಿಕೊಳ್ಳದೆ ಅವರ ಆಚರಣೆಯಲ್ಲಿಯೂ ಪ್ರಮುಖ ಪಾತ್ರ ವಹಿಸುವುದರಿಂದ ಇತಿಹಾಸದಲ್ಲಿ ಅವರ ಪ್ರಾಮುಖ್ಯತೆ ಹೆಚ್ಚಾಗುತ್ತದೆ. ಇಂಥ ಕೆಲವೇ ಜನರ

ಸಾಲಿಗೆ ಸೇರಿದವರು ಆಧುನಿಕ ಚೀನದ ನೇತಾರನಾದ ಮಾವ್ಹೋತ್ಸೇ ತುಂಗ್. ಸಮಾಜವಾದಿ ಚೀನದ ಹರಿಕಾರನಾದ ಮಾವ್ಹೋ ಇಂದು ಕೇವಲ ಚೀನದ ಜನರಿಗೆ ಮಾತ್ರವಲ್ಲದೆ ಜಗತ್ತಿನಾದ್ಯಂತ ಸಮಾಜವಾದಿ ಚಿಂತನೆಯಲ್ಲಿ ನಂಬಿಕೆಯನ್ನು ಇಟ್ಟಿರುವ ಜನರೆಲ್ಲರಿಗೂ ಆದರ್ಶ ಪ್ರಾಯನಾದ ವ್ಯಕ್ತಿ. ಹತ್ತೊಂಬತ್ತನೆಯ ಶತಮಾನದಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸರು ಪ್ರತಿಪಾದಿಸಿದ ಕಮ್ಯುನಿಸ್ಟ್ ಸಿದ್ಧಾಂತವನ್ನು ಮೈಗೂಡಿಸಿಕೊಂಡು ಅದನ್ನು ಚೀನದಂತಹ ಸಂಪ್ರದಾಯ ಶರಣ ಸಮಾಜದಲ್ಲಿ ಆಚರಣೆಗೆ ತರುವಲ್ಲಿ ಮಾವ್ಹೋನ ಪಾತ್ರ ಅತ್ಯಂತ ಹಿರಿದಾದದ್ದು; ಮಾತ್ರವಲ್ಲ ಅತ್ಯಂತ ಆಶ್ಚರ್ಯವನ್ನು ಉಂಟು ಮಾಡುವಂಥದ್ದು. ಮಾರ್ಕ್ಸ್‌ವಾದವನ್ನು ತನ್ನ ದೇಶದ ಸ್ಥಿತಿಗತಿಗಳಿಗೆ ಹೊಂದುವಂತೆ ಅರ್ಥೈಸಿ ಆ ಮೂಲಕ ರಷ್ಯದಲ್ಲಿ ಕ್ರಾಂತಿಯನ್ನು ಸಾಧಿಸಿದ ಲೆನಿನ್‌ನಂತೆಯೇ ಮಾವ್ಹೋ ಸಹ ಚೀನದ ಪರಿಸ್ಥಿತಿಗೆ ಮಾರ್ಕ್ಸ್‌ವಾದವನ್ನು ಅಳವಡಿಸಿಕೊಂಡು ಅಲ್ಲಿಯೂ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳೆಲ್ಲವುಗಳಲ್ಲಿಯು ಕ್ರಾಂತಿಯನ್ನು ಸಾಧಿಸಿದನು. ಹೀಗಾಗಿ ಇಂದು ಸಾಮ್ಯವಾದಿ ಸಿದ್ಧಾಂತದ ಚೌಕಟ್ಟಿನಲ್ಲಿಯೇ ಮಾರ್ಕ್ಸ್‌ವಾದ-ಲೆನಿನ್‌ವಾದ–ಮಾವ್ಹೋವಾದ (MLM Thought)ವೆಂಬ ತತ್ತ್ವಗಳು ಕೇಳಿ ಬರುತ್ತವೆ. ಇವು ಪರಸ್ಪರ ಭಿನ್ನ ತತ್ತ್ವಗಳಲ್ಲ. ಮಾರ್ಕ್ಸ್‌ವಾದವನ್ನು ಮೂಲವಾಗಿಟ್ಟುಕೊಂಡು ಲೆನಿನ್ ಹಾಗೂ ಮಾವ್ಹೋ ತಮ್ಮ ಸಮಾಜಗಳ ಅಗತ್ಯಗಳಿಗೆ ಸರಿಹೊಂದುವಂತೆ ಆ ಸಿದ್ಧಾಂತವನ್ನು ವೈಜ್ಞಾನಿಕ ರೀತಿಯಲ್ಲಿ ಅಳವಡಿಸಿಕೊಂಡಿದ್ದರಿಂದ ತಮ್ಮದೇ ಆದ ಛಾಪು ಹೊಂದಿದ್ದು ಲೆನಿನ್‌ವಾದ ಮತ್ತು ಮಾವ್ಹೋವಾದವೆಂಬ ಹೆಸರು ಪಡೆದಿವೆ. ಮಾರ್ಕ್ಸ್‌ವಾದದಂತಹ ವೈಜ್ಞಾನಿಕ ತಳಹದಿಯುಳ್ಳ ತತ್ತ್ವದ ವಿಷಯದಲ್ಲಿ ಯಾರೂ ಸೂತ್ರಾಂಧರಾಗಿರುವುದು ಸಾಧ್ಯವಿಲ್ಲ. ಈ ಮೌಲಿಕವಾದ ತಿಳುವಳಿಕೆಯಿಂದ ಹೊರಟಿದ್ದರಿಂದಲೇ ಮಾವ್ಹೋ ತನ್ನ ಸಾಮಾಜಿಕ

ಚಿಂತನೆಯನ್ನು ಒಂದು ಸಿದ್ಧಾಂತವೆನ್ನುವ ಮಟ್ಟಿಗೆ ಪರಿಪೂರ್ಣ ಗೊಳಿಸಲು ಸಾಧ್ಯವಾಯಿತು.

ಇಂದು ಜಗತ್ತಿನಲ್ಲಿ ಸಮಾಜವಾದ ಸಾಮ್ಯವಾದಗಳನ್ನು ನಂಬಿ ಅವುಗಳ ಸಾಧನೆಗಾಗಿ ಚಳುವಳಿ ಮತ್ತು ಹೋರಾಟಗಳನ್ನು ನಡೆಸು ತ್ತಿರುವ ಜನರೆಲ್ಲರೂ ಮಾರ್ಕ್ಸ್ ಮತ್ತು ಲೆನಿನ್‌ರ ಚಿಂತನೆಗಳಷ್ಟೇ ಪ್ರಮುಖವಾಗಿ ಮಾವೋನ ವಿಚಾರಗಳನ್ನು ಅಧ್ಯಯನ ಮಾಡುವರು. ಮಾನವನ ಸಾಮಾಜಿಕ ಪ್ರಗತಿ ಅವನ ಹಿಂದಿನ ಚರಿತ್ರೆ ಹಾಗೂ ಅದರಿಂದ ಅವನು ಕಲಿಯುವ ಪಾಠಗಳನ್ನು ಬಹುತೇಕ ಅವಲಂಬಿಸಿರುತ್ತದೆ. ಈ ಕಾರಣದಿಂದಾಗಿಯೇ ರಷ್ಯದ ಲೆನಿನ್, ಚೀನದ ಮಾವೋ, ಚಿಲಿಯ ಚೆಗುವೆರ ಮತ್ತು ವಿಯೆತ್ನಾಮಿನ ಹೋಚಿಮಿನ್–ಇಂಥವರ ಅನುಭವಗಳು, ಸಾಧನೆಗಳು ಮತ್ತು ಸೋಲುಗಳು, ಮುಂದಿನ ಪೀಳಿಗೆಗಳಿಗೆ ಒಂದು ದಿಕ್ಕನ್ನು ತೋರಿಸುವುದರಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ. ಅದರಲ್ಲೂ ಮುಖ್ಯವಾಗಿ ಭಾರತವು ಭೌಗೋಳಿಕವಾಗಿ ಮೊದಲುಗೊಂಡು ಹಲವಾರು ವಿಷಯಗಳಲ್ಲಿ ಚೀನದ ಜೊತೆ ಸಾಮ್ಯವನ್ನು ಹೊಂದಿರುವುದರಿಂದ ಚೀನದ ಈ ನಾಯಕನ ಚಿಂತನೆ ಹಾಗೂ ಅನುಭವಗಳು ಭಾರತದ ಸಾಮಾಜಿಕ ಬದಲಾವಣೆಯ ದಿಕ್ಕನ್ನು ನಿರ್ಧರಿಸುವುದರಲ್ಲಿ ಸಹಕಾರಿಯಾದೀತು.

ಏಷ್ಯದ ಅತ್ಯಂತ ಪ್ರಮುಖ ದೇಶಗಳಾದ ಭಾರತ ಮತ್ತು ಚೀನಗಳೆರಡೂ ಅತಿ ಪ್ರಾಚೀನ ದೇಶಗಳೂ ಹೌದು. ಈ ದೇಶಗಳಿಗೆ ಇವುಗಳವೇ ಆದ ಚರಿತ್ರೆ, ಸಂಸ್ಕೃತಿ ಮತ್ತು ಇವುಗಳ ಪರಿಣಾಮವಾದ ಸಾಮಾಜಿಕ ರಚನೆಗಳೂ ಉಂಟು. ನಾವು ಹಲವು ಸಂದರ್ಭಗಳಲ್ಲಿ ನೋಡುವಂತೆ ಈ ಪ್ರಾಚೀನತೆಯೇ ಈ ದೇಶಗಳ ಸಂಸ್ಕೃತಿಗೆ ಮುಳುವಾದದ್ದೂ ಉಂಟು. ಸಂಸ್ಕೃತಿಯ ಪ್ರಾಚೀನತೆಯನ್ನು ಮಾತ್ರ ಮಾನ್ಯ ಮಾಡಿ ಅದನ್ನು ವೈಭವೀಕರಿಸುವ ಜನರಿಂದಾಗಿ ಬದಲಾಗುವ ಸನ್ನಿವೇಶಕ್ಕೆ ತಕ್ಕಂತೆ ಸ್ಪಂದಿಸುವ ಶಕ್ತಿಯನ್ನು ಇಂಥ ಸಂಸ್ಕೃತಿಗಳು

ಕಳೆದುಕೊಂಡು ಜಡ್ಡುಗಟ್ಟಿ ಬಿಡುತ್ತವೆ. ಭಾರತದಲ್ಲಿ ನಡೆಯುತ್ತಿರುವುದೂ ಚೀನದಲ್ಲಿ ನಡೆದಿದ್ದೂ ಇದೇ ವಿದ್ಯಮಾನ. ಭವ್ಯ ಭಾರತೀಯ ಸಂಸ್ಕೃತಿಯೆಂಬ ಹೆಸರಿನಲ್ಲಿ ಈ ದೇಶದಲ್ಲಿ ಹಳೆಯದೆಲ್ಲವೂ ಅತಿ ಶ್ರೇಷ್ಠವೆಂಬ ಅಂಧಾಭಿಮಾನದಿಂದಲೇ ಆಧುನಿಕ ಸಮಾಜಕ್ಕೆ ಸರಿಹೊಂದದ ಸಂದರ್ಭಗಳು ಹುಟ್ಟಿಕೊಳ್ಳುತ್ತವೆ. ಅದೇ ರೀತಿಯಲ್ಲಿ ಚೀನವೂ ಸಹ ತನ್ನ ಪ್ರಾಚೀನತೆಯ ಗುಂಗಿನಲ್ಲಿಯೇ ಕಳೆದುಹೋಗಿ ಶತಮಾನಗಳ ಕಾಲ ಆತ್ಮರತಿಯಲ್ಲಿ ತೊಡಗಿ ಹೊರಗಿನ ಪ್ರಪಂಚ ಮತ್ತು ಹೊಸ ಚಿಂತನೆಗಳಿಂದ ದೂರವೇ ಉಳಿಯಿತು. ಭೌಗೋಳಿಕವಾಗಿ ವಿಶಾಲವಾಗಿದ್ದರೂ ಭೌದ್ಧಿಕವಾಗಿ ಸೀಮಿತ ಚೌಕಟ್ಟಿನಲ್ಲಿಯೇ ಉಳಿದುಬಿಟ್ಟಿತು. ಹೀಗಾಗಿ ಶತಮಾನಗಳು ಉರುಳಿದರೂ ಅಲ್ಲಿ ಸಾಮಾಜಿಕವಾಗಿ ಯಾವುದೇ ಹೊಸ ಆಲೋಚನೆ ಅಥವಾ ಬದಲಾವಣೆ ಕಂಡು ಬರಲಿಲ್ಲ. ಚೀನ ಮತ್ತು ಹೊರ ಪ್ರಪಂಚಗಳ ನಡುವಿನ ಈ ಅಂತರದಿಂದಾಗಿ ಚೀನದಿಂದ ಪಡೆಯಬಹುದಾಗಿದ್ದ ಜ್ಞಾನದಿಂದಲೂ ಬೇರೆ ಸಮಾಜದ ಜನರು ವಂಚಿತರಾದರು. ಉದಾಹರಣೆಗೆ ಪಾಶ್ಚಾತ್ಯ ದೇಶಗಳಲ್ಲಿ ಗಡಿಯಾರದ ಬಗ್ಗೆ ತಿಳಿವು ಮೂಡುವುದಕ್ಕೆ ಆರು ಶತಮಾನಗಳ ಹಿಂದೆಯೇ ಚೀನದ ಜನರು ಅದನ್ನು ಉಪಯೋಗಿಸುತ್ತಿದ್ದರು. ಜರ್ಮನಿಯ ಜಾನ್ ಗ್ಯುಟೆನ್‌ಬರ್ಗ್‌ಗಿಂತಲೂ ಸುಮಾರು ಐದು ಶತಮಾನಗಳ ಹಿಂದೆ ಚೀನಿಯರು ಮುದ್ರಣ ಪ್ರಕ್ರಿಯೆಯನ್ನು ತಿಳಿದಿದ್ದರು. ಅವರು ತಮ್ಮ ನಾಡಿನ ಬಗ್ಗೆ ಎಷ್ಟು ಸ್ವಾಭಿಮಾನವನ್ನು ಇಟ್ಟುಕೊಂಡಿದ್ದರೆಂದರೆ ತಮ್ಮ ದೇಶವನ್ನು ಅವರು 'ಕೇಂದ್ರ ರಾಜ್ಯ' (Middle Kingdom) ಎಂದು ಕರೆಯುತ್ತಿದ್ದು ಬೇರೆಯವರಿಂದ ತಾವು ಏನನ್ನೂ ತಿಳಿಯಬೇಕಾದ ಅವಶ್ಯಕತೆ ಇಲ್ಲವೆಂಬಂತೆಯೇ ಶತಮಾನಗಳನ್ನು ಕಳೆದರು.

ಭಾರತದಂತೆಯೇ ಚೀನವೂ ಅತಿ ಪ್ರಾಚೀನ ಚರಿತ್ರೆ ಹಾಗೂ ಸಂಸ್ಕೃತಿಗೆ ಹೆಸರಾಗಿದೆ. ಪೌರಾಣಿಕವಾಗಿ ಚೀನದ ಚರಿತ್ರೆಯು ಐದು

ಸಾವಿರ ವರ್ಷಗಳಷ್ಟು ಹಳೆಯದಾದರೂ ಐತಿಹಾಸಿಕವಾಗಿ ಅದು ಕ್ರಿ.ಪೂ. ೧೫೨೩ರಲ್ಲಿ 'ಷಾಂಗ್' ವಂಶದೊಂದಿಗೆ ಆರಂಭವಾಗುತ್ತದೆ. ಕ್ರಿ.ಪೂ. ೧೦೨೭-೨೪೯ರ ಮಧ್ಯ ಕಾಲದಲ್ಲಿ ಆಳ್ವಿಕೆ ನಡೆಸಿದ 'ಚೌ' ವಂಶದ ಕಾಲವನ್ನು ಅಭಿಜಾತ ಕಾಲವೆಂದು ಕರೆಯುವುದುಂಟು. ಆಧುನಿಕ ಕಾಲದವರೆಗೂ ಚೀನದ ಸಮಾಜವನ್ನು ತನ್ನ ಚಿಂತನೆ ಮೂಲಕ ನಿಯಂತ್ರಿಸಿದ ಕನ್ಫ್ಯೂಷಿಯಸ್ ಈ ಕಾಲ ಘಟ್ಟಕ್ಕೆ ಸೇರಿದವನು. ಕ್ರಿ.ಪೂ. ೫೫೧ ರಿಂದ ೪೭೯ ರವರೆಗೆ ಜೀವಿಸಿದ್ದ ಕನ್ಫ್ಯೂಷಿಯಸ್‌ನ ಚಿಂತನೆಗಳಿಗೆ ರಾಜಾದರಣೆ ಸಿಕ್ಕಿದ್ದರಿಂದ ಅವನ ಸಮಕಾಲೀನನಾದ ಲೋಟ್ಸೆಯ ಚಿಂತನೆಗಳಿಗೂ ಮೀರಿ ಹೆಚ್ಚು ಪ್ರಭಾವಶಾಲಿಯಾಗಿ ಅದೇ ಅಧಿಕೃತ ಧರ್ಮ ಎನ್ನುವ ಮಟ್ಟಕ್ಕೂ ಬೆಳೆದು ಇಪ್ಪತ್ತನೆಯ ಶತಮಾನದವರೆಗೂ ಅವನು ಹೇಳಿದ ಮಾರ್ಗದಲ್ಲಿಯೇ ಚೀನೀ ಸಮಾಜವು ನಡೆಯಿತು.

ಕನ್ಫ್ಯೂಷಿಯಸ್‌ನ ಚಿಂತನೆ ಪ್ರಮುಖವಾಗಿ ಸಮಾಜದಲ್ಲಿ ಶಾಂತಿ, ಶಿಸ್ತುಗಳನ್ನು ಕಾಪಾಡುವುದಕ್ಕೆ ರೂಪಿಸಿದ ಕೆಲವು ಮಾರ್ಗದರ್ಶಿ ಸೂತ್ರಗಳ ಕ್ರೋಢೀಕರಣವೇ ಆಗಿದೆ. ಸಾಮಾಜಿಕ ಶಾಂತಿಗಾಗಿ ಎಲ್ಲ ವರ್ಗದ ಜನರೂ ಆ ಹೊತ್ತಿಗಾಗಲೇ ಜಾರಿಯಲ್ಲಿದ್ದ ಕೆಲವು ಕಟ್ಟುಪಾಡುಗಳನ್ನು ಒಪ್ಪಿಕೊಳ್ಳಬೇಕಾಗಿತ್ತು. ಯಜಮಾನನಿಗೆ ಸೇವಕ ಮತ್ತು ಪುರುಷನಿಗೆ ಸ್ತ್ರೀ ಅಧೀನರಾಗಿದ್ದಾಗ ಮಾತ್ರ ಸಮಾಜದ ಶಾಂತಿಯು ಕಲಕದೆ ಇರುವುದೆಂಬ ಕನ್ಫ್ಯೂಷಿಯಸ್‌ನ ಸೂಚನೆಯು ಅಂದಿನ ರಾಜರಿಗೆ, ಅಧಿಕಾರಿಗಳಿಗೆ ಮತ್ತು ಮೇಲ್ವರ್ಗದ ಜನರಿಗೆ ತುಂಬ ಮೆಚ್ಚುಗೆಯಾಗಿ ತಮ್ಮ ನಿಯಂತ್ರಣವನ್ನು ಕಾಪಾಡಿಕೊಳ್ಳಲು ಬಳಸಬಹುದಾದ ಸೂಕ್ತ ಸಾಧನೆಯಾಗಿ ಬಳಕೆಯಾಯಿತು. ಹೊರಗಿನ ಪ್ರಪಂಚದ ಪರಿಚಯವಿಲ್ಲದ್ದರಿಂದ ಜನರಲ್ಲಿಯೂ ಇಂಥ ವ್ಯವಸ್ಥೆಯನ್ನು ವಿರೋಧಿಸಬೇಕೆಂಬ ಯೋಚನೆ ಉಂಟಾಗಲಿಲ್ಲ. ಚೀನದಿಂದ ಹೊರ ದೇಶಗಳಿಗೆ ಹೋಗಿಬಂದ ಪ್ರವಾಸಿಗರು, ಆ ದೇಶದ ವ್ಯಾಪಾರಸ್ಥರು ಹೊರ ಪ್ರಪಂಚದ ಬಗ್ಗೆ ಏನೇ ಹೇಳಿದರು ಚೀನದ ಗೋಡೆಯ ಹಿಂದೆ

ಮುದುಡಿಕೊಂಡಿದ್ದ ಸಮಾಜದ ಮನಸ್ಸು ಪ್ರಭಾವಿತವಾಗಲಿಲ್ಲ. 'ಎಲ್ಲವನ್ನೂ ಪ್ರಶ್ನಿಸಿ ಆಮೇಲೆ ಅದನ್ನು ನಂಬು' ಎಂದು ತಿಳಿಸುವ ಬೌದ್ಧ ಧರ್ಮವು ಚೀನವನ್ನು ಪ್ರವೇಶಿಸದ ಮೇಲೂ ಕನ್ಫ್ಯೂಷಿಯಸ್‌ನ ಚಿಂತನೆಗಳು ಜನರ ಮನಸ್ಸಿನ ಮೇಲೆ ಹೊಂದಿದ್ದ ಹಿಡಿತವು ಅಲುಗಾಡಲಿಲ್ಲ.

ಕೊನೆಗೂ ಹತ್ತೊಂಬತ್ತನೆಯ ಶತಮಾನದಲ್ಲಿ ಯುರೋಪಿನಿಂದ ಬಂದ ಬ್ರಿಟೀಷರು ಹಾಗೂ ಫ್ರೆಂಚರು ತಮ್ಮ ಉತ್ಪನ್ನಗಳಿಗೆ ಹೊಸ ಮಾರುಕಟ್ಟೆಗಳನ್ನು ಹುಡುಕಿಕೊಂಡು ಪೂರ್ವದ ದೇಶಗಳನ್ನು ಹೊಕ್ಕು ಚೀನವನ್ನು ತಲುಪಿದಾಗ ಆ ಜನರಿಗೆ ಹೊರ ಪ್ರಪಂಚದ ಪ್ರತ್ಯಕ್ಷ ಅನುಭವ ಸಿಕ್ಕಂತಾಯಿತು. ತಾವು ಅಜೇಯರೆಂದು ನಂಬಿದ್ದ ಅವರು ಐರೋಪ್ಯ ದೇಶಗಳ ದಾಳಿಗೆ ತುತ್ತಾಗಿ ಸೋಲನ್ನುಂಡು ತಾವು ಅದುವರೆಗೂ ದೂರವಿಟ್ಟಿದ್ದ ಅಫೀಮನ್ನು ಬೆಳೆಯಲು ಒಪ್ಪ ಬೇಕಾಯಿತು. ವಸಾಹತುಶಾಹಿ ದೇಶಗಳ ಆಬ್ಬರಕ್ಕೆ ತತ್ತರಿಸಿದ ಇತರೆ ಹಲವು ಪೌರ್ವಾತ್ಯ ದೇಶಗಳಂತೆಯೇ ಚೀನವು ತನ್ನ ಕೆಲವು ಪ್ರದೇಶಗಳ ಮೇಲೆ ಅಧಿಪತ್ಯವನ್ನೇ ಕಳೆದುಕೊಳ್ಳಬೇಕಾಯಿತು. ಚೀನವು ಹಲವು ದೇಶಗಳ ವಸಾಹತಾಗಿ ಮಾರ್ಪಟ್ಟು ಒಟ್ಟು ದೇಶವೇ ದಾಸ್ಯದಲ್ಲಿ ಮುಳುಗಿತು. ಇದು ಕೇವಲ ಇತರ ದೇಶಗಳ ಬಲ ಪ್ರಯೋಗದಿಂದ ಮಾತ್ರ ಉಂಟಾದ ಪರಿಸ್ಥಿತಿಯಲ್ಲ. ಆ ಸಮಯದಲ್ಲಿ ಚೀನವನ್ನು ಆಳುತ್ತಿದ್ದ 'ಮಂಚು' ವಂಶದ ರಾಜರ ಭ್ರಷ್ಟತೆ ಹಾಗೂ ಅದರ ಪರಿಣಾಮವಾದ ದೌರ್ಬಲ್ಯಗಳು ಚೀನವನ್ನು ದಾಸ್ಯದೆಡೆಗೆ ತಳ್ಳಿದವು. ವಸಾಹತುಶಾಹಿ ಶಕ್ತಿಗಳು ಎಲ್ಲ ಕಡೆ ಮಾಡುವಂತೆ ಚೀನದಲ್ಲಿಯೂ ವ್ಯಾಪರಕ್ಕೆಂದು ಬಂದು ರಾಜಕೀಯ ಅಧಿಕಾರವನ್ನು ಹೊಂದಿದವು.

ಈ ಸಂದರ್ಭದಲ್ಲಿಯೇ ಚೀನವು ಆಧುನಿಕ ಕಾಲದಲ್ಲಿನ ಮೊದಲನೆಯ ದಂಗೆಯನ್ನು ಕಂಡಿತು. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಹುಂಗ್‌ಸಿಯು–ಚುವಾನ್ ಎಂಬ ಚೀನಿ ಕ್ರೈಸ್ತನ

ನಾಯಕತ್ವದಲ್ಲಿ ನಡೆದ ಈ ಘಟನೆಯನ್ನು 'ತೈಪಿಂಗ್ ದಂಗೆ' ಎಂದು ಕರೆಯುವುದುಂಟು. 'ತೈಪಿಂಗ್' ಎಂದರೆ ಸ್ವರ್ಗ ಶಾಂತಿ (Heavenly Peace) ಎಂದರ್ಥ.

ಹುಂಗ್‌ಸಿಯು-ಚುವಾನ್ ತನ್ನನ್ನು ತಾನು ಏಸುಕ್ರಿಸ್ತನ ತಮ್ಮನೆಂದು ಕರೆದುಕೊಂಡ. ಅಧಃಪತನವನ್ನು ಕಂಡಿದ್ದ 'ಮಂಚೂ' ವಂಶದ ಭ್ರಷ್ಟ ಆಳ್ವಿಕೆಯನ್ನು ಕೊನೆಗಾಣಿಸಿ ಚೀನೀ ಸಮಾಜಕ್ಕೆ ಶಾಂತಿಯನ್ನು ತಂದುಕೊಡುವ ಆದರ್ಶವನ್ನಿಟ್ಟುಕೊಂಡ ಚುವಾನ್ ತನ್ನದೇ ಆದ ಸೈನ್ಯವೊಂದನ್ನು ಕಟ್ಟಿ ಬೀಜಿಂಗ್ ನಗರದ ಗೋಡೆಯವರೆಗೂ ಬಂದು ತಲುಪಿದ. ಆದರೆ ಅವನು ರಾಜನ ಅಧಿಕಾರವನ್ನೇ ಪ್ರಶ್ನಿಸುತ್ತಿದ್ದರಿಂದ ಆಗಿನ ಪಾದ್ರಿಗಳೂ ಅವನನ್ನು ಸುಳ್ಳನೆಂದು ಕರೆದರು. ಅದಕ್ಕಿಂತಲೂ ಹೆಚ್ಚಾಗಿ ಅವನ ಕ್ರಿಶ್ಚಿಯನ್ ಸುಧಾರಣೆಗಳು ಅವರಿಗೆ ಆಘಾತವನ್ನು ಉಂಟುಮಾಡಿದವು.

೧೮೬೦ರಷ್ಟು ಹಿಂದೆಯೇ ಚುವಾನ್ ಚೀನೀ ಸಮಾಜದ ಬದಲಾವಣೆಗಾಗಿ ಪ್ರತಿಪಾದಿಸಿದ ಪ್ರಣಾಳಿಕೆಯು ಮಾರ್ಕ್ಸ್‌ವಾದವನ್ನೂ 'ಕಮ್ಯುನಿಸ್ಟ್ ಪ್ರಣಾಳಿಕೆ' (Communist Manifesto) ಯನ್ನೂ ನೆನಪಿಸುವಂಥವಾಗಿತ್ತು. ಕ್ರಿಶ್ಚಿಯನ್ನರ ಕೈಯಲ್ಲೇ ಆಗಲಿ ಒಂದು ಬಲಶಾಲಿಯಾದ ಚೀನಾ ದೇಶವು ಪಾಶ್ಚಾತ್ಯರಿಗೆ ಬೇಡವಾಗಿದ್ದರಿಂದ ಅವರು ಮಂಚೂ ರಾಜನಿಗೆ ಹಣ, ಆಯುಧಗಳು ಹಾಗೂ ಸೈನ್ಯವನ್ನು ಒದಗಿಸಿ ತೈಪಿಂಗ್ ದಂಗೆಯನ್ನು ದಮನಿಸುವಲ್ಲಿ ಸಫಲರಾದರು. ಸಾವಿರಾರು ಸಾಮಾನ್ಯ ಜನರು ಭಾಗವಹಿಸಿದ ದಂಗೆಯ ಸಂದರ್ಭದಲ್ಲಿ ಎರಡೂ ಕಡೆಯೂ ಸುಮಾರು ನಲವತ್ತು ಮಿಲಿಯ ಜನ ಸತ್ತರು.

ಈ ವಿಜಯದ ಜೊತೆಗೆ ಚೀನೀ ರಾಜನ ಅಧಿಕಾರವು ತನ್ನ ಶಕ್ತಿಯನ್ನೆಲ್ಲಾ ಕಳೆದುಕೊಂಡು ಅವನು ಕೇವಲ ನಾಮಮಾತ್ರನಾದ ರಾಜನಾಗಿದ್ದು ವಸಾಹತುಶಾಹಿಗಳ ಆಜ್ಞೆಯಂತೆ ನಡೆದುಕೊಳ್ಳಬೇಕಾಯಿತು. ಅಂತರಿಕವಾದ ದೌರ್ಬಲ್ಯಗಳೇ ಹೆಚ್ಚಾಗಿ ಈ ಪರಿಸ್ಥಿತಿಯ

ನಿರ್ಮಾಣಕ್ಕೆ ಕಾರಣವಾಗಿ ಕೊನೆಗೆ ೧೯೧೨ ರಲ್ಲಿ ಮಂಚೂ ವಂಶವು ತನ್ನ ಅವಸಾನವನ್ನು ಕಂಡಿತು. ಇದರ ಮಧ್ಯೆ ತೈಪಿಂಗ್ ದಂಗೆಯ ಪ್ರಭಾವವು ಇನ್ನೂ ಜನರ ಮಧ್ಯೆ ಸಜೀವವಾಗಿಯೇ ಇದ್ದು ೧೯೦೦ರ ಸುಮಾರಿಗೆ 'ಬಾಕ್ಸರ್ ದಂಗೆಯೆಂಬ ಮತ್ತೊಂದು ಪ್ರತಿರೋಧವನ್ನು ಮಂಚೂ ರಾಜನು ಎದುರಿಸಬೇಕಾಯಿತು. ಈ ದಂಗೆಯನ್ನು ಸಹ ಪಾಶ್ಚಾತ್ಯ ದೇಶಗಳು ದಮನಿಸಿ ಅಂದಿನಿಂದ ಚೀನದಲ್ಲಿ ತಮ್ಮ ಅಧಿಕಾರಕ್ಕೆ ಯಾವುದೇ ಧಕ್ಕೆ ಬರದಂತೆ ಪರಿಸ್ಥಿತಿಯನ್ನು ಭದ್ರಪಡಿಸಿಕೊಂಡರು. ಬೆಲ್ಜಿಯಮ್, ಹಾಲೆಂಡ್, ಪೋರ್ಚುಗಲ್‌ನಂತಹ ಚಿಕ್ಕ ಪುಟ್ಟ ರಾಷ್ಟ್ರಗಳೂ ಸಹ ಚೀನದಲ್ಲಿ ತಮ್ಮ ವಸಾಹತುಗಳನ್ನು ಹೊಂದಲು ಪ್ರಯತ್ನಿಸಿದರು. ಕೊನೆಗೂ ಈ ಎಲ್ಲ ದೇಶಗಳ ಕೈಯಲ್ಲಿ ತಾವು ಸೊರಗುತ್ತಿರುವುದನ್ನು ಅಸಹಾಯಕರಾಗಿ ನೋಡುತ್ತಿರಬೇಕಾದಂಥ ಪರಿಸ್ಥಿತಿಯನ್ನು ಚೀನೀಯರು ಮುಟ್ಟಿದರು. ಈ ಮಧ್ಯೆ ಜಪಾನೀಯರು ಚೀನವನ್ನು ಆಕ್ರಮಿಸುವುದರೊಂದಿಗೆ ಮಂಚೂ ವಂಶದ ಆಡಳಿತವು ಸಂಪೂರ್ಣವಾಗಿ ಪತನವಾಯಿತು.

ಮಂಚೂ ವಂಶದ ಆಡಳಿತ ಕೊನೆಗೊಂಡ ಮೇಲೆ ಡಾ॥ ಸನ್ ಯಟ್ ಸೇನ್ ತನ್ನ ನ್ಯಾಷನಲಿಸ್ಟ್ ಪಾರ್ಟಿ (ಕೊಮಿಂಟಾಂಗ್)ಯ ಮೂಲಕ ದೇಶವನ್ನು ವಿನಾಶದ ಹಾದಿಯಿಂದ ಹೊರ ತರಲು ಪ್ರಾಮಾಣಿಕವಾಗಿಯೇ ಪ್ರಯತ್ನ ನಡೆಸಿದನು. ಸನ್‌ಯಟ್ ಸೇನ್ ಪಾಶ್ಚಾತ್ಯ ದೇಶಗಳಲ್ಲಿ ವಿದ್ಯೆಗಳಿಸಿ ಪ್ರಜಾತಂತ್ರ, ಸಮಾನತೆ ಮುಂತಾದ ಕಲ್ಪನೆಗಳ ಪ್ರಭಾವಕ್ಕೆ ಒಳಗಾಗಿದ್ದವನು. ಆದರೆ ದೇಶದ ವಿವಿಧ ಭಾಗಗಳಲ್ಲಿ ಬಲಶಾಲಿಗಳಾಗಿ ಮುಂದುವರಿಯುತ್ತಿದ್ದ ಯುದ್ಧಕೋರ ನಾಯಕರು (War Lords) ತುಂಬಾ ಪ್ರಭಾವಶಾಲಿಗಳೂ ಆಗಿದ್ದರಿಂದ ಅವರ ಜೊತೆ ಒಪ್ಪಂದ ಮಾಡಿಕೊಂಡೇ ಸನ್‌ಯಟ್ ಸೇನ್ ತನ್ನ ಕೆಲಸವನ್ನು ಮುಂದುವರೆಸಬೇಕಾಯಿತು. ಜಪಾನೀಯರ ಆಕ್ರಮಣವನ್ನು ಎದುರಿಸುವಲ್ಲಿ ತನಗೆ ನೆರವಾಗಬಲ್ಲ ಎಲ್ಲ

ಶಕ್ತಿಗಳೊಂದಿಗೂ ಕೈ ಜೋಡಿಸುವ ತನ್ನ ಪ್ರಯತ್ನದ ಅಂಗವಾಗಿ ಅವನು ಹೀಗೆ ಮಾಡದೆ ವಿಧಿ ಇರಲಿಲ್ಲ. ಅದೇ ಸಮಯದಲ್ಲಿ ರಷ್ಯದಲ್ಲಿ ಅಧಿಕಾರದಲ್ಲಿದ್ದ ಕಮ್ಯುನಿಸ್ಟ್ ಸರಕಾರದ ಬೆಂಬಲ ಹಾಗೂ ಚೀನಾ ಕಮ್ಯುನಿಸ್ ಪಕ್ಷದ ಸಹಕಾರವೂ ಸನ್‌ಯಟ್ ಸೇನ್‌ಗೆ ದೊರಕಿತು.

ಮೊದಲಿನ ಜಾಗತಿಕ ಯುದ್ಧವು ಮುಗಿದ ಮೇಲಾದರೂ ವಿದೇಶಿ ಶಕ್ತಿಗಳು ತಮ್ಮನ್ನು ಸ್ವತಂತ್ರಗೊಳಿಸುವವೆಂಬ ಆಸೆಯಿಂದ ಚೀನವೂ ಸಹ ಆ ಯುದ್ಧದಲ್ಲಿ ಮಿತ್ರರಾಜ್ಯಗಳ ಜೊತೆಗೂಡಿತು. ಆದರೆ ಯುದ್ಧದ ನಂತರದ ವರ್ಸೈಲ್ಸಿನ ಒಪ್ಪಂದದ ಸಮಯದಲ್ಲಿ ತಮಗಾದ ಮೋಸವನ್ನು ಕಂಡು ಚೀನೀಯರು ಭ್ರಮನಿರಸನಗೊಂಡರು. ಚೀನದ ವಿವಿಧ ಪ್ರಾಂತ್ಯಗಳ ಮೇಲಿನ ಹತೋಟಿಯನ್ನು ತಮ್ಮ ತಮ್ಮೊಳಗೇ ಹಂಚಿಕೊಳ್ಳುವ ಮೂಲಕ ಪಾಶ್ಚಾತ್ಯರು ತಮ್ಮ ಅಧಿಕಾರವನ್ನು ಗಟ್ಟಿಗೊಳಿಸಿಕೊಳ್ಳಲು ಯತ್ನಿಸಿದರು. ಜನರ ಈ ಅಸಮಾಧಾನಕ್ಕೆ ಪೂರಕವಾಗಿ ಆಂತರಿಕವಾಗಿ ಚೀನದ ಸಮಾಜವು ತನ್ನ ಒಳಗಿಂದಲೇ ಬಲಹೀನಗೊಳ್ಳುತ್ತಿತ್ತು. ಈ ಸಂದರ್ಭದಲ್ಲಿ ಅಲ್ಲಿನ ಜನರು ಸಹಜವಾಗಿಯೇ ತಮ್ಮ ಸ್ಥಿತಿಯ ಬಗ್ಗೆ ಗಂಭೀರ ಚಿಂತನೆಯಲ್ಲಿ ತೊಡಗಿದರು. ಪಾಶ್ಚಾತ್ಯ ದೇಶಗಳ ಸಂಪರ್ಕದ ಮೂಲಕ ಹೊಸ ಚಿಂತನೆ ಜನರಲ್ಲಿ ಪಸರಿಸಿತ್ತು. ಸಾಂಪ್ರದಾಯಿಕವಾಗಿ ಒಪ್ಪಿತವಾಗಿದ್ದ ಕನ್ಫ್ಯೂಷಿಯಸ್‌ನ ಚಿಂತನೆಗಳ ಮರುವಿಮರ್ಶೆ ನಡೆಯಿತು. ರಷ್ಯದಲ್ಲಿ ನಡೆದಿದ್ದ ಕ್ರಾಂತಿಯ ಕಾರಣದಿಂದಾಗಿ ಯುವಜನರು ಸಾಮ್ಯವಾದದ ಕಡೆ ಆಕರ್ಷಿತರಾದರು ಹಾಗೂ ಅವರಿಗೆ ಬುದ್ಧಿಜೀವಿಗಳ ಬೆಂಬಲವೂ ದೊರೆಯಿತು.

ಇಂಥ ಸಮಯದಲ್ಲಿಯೇ ಮೊಟ್ಟಮೊದಲ ಬಾರಿಗೆ ಮಾವೋತ್ಸೇ ತುಂಗ್ ಚೀನದ ರಾಜಕೀಯ ಜೀವನವನ್ನು ಪ್ರವೇಶಿಸಿದನು. ೧೯೧೯ರ ಮೇ ತಿಂಗಳ–ನಾಲ್ಕನೆಯ ತಾರೀಖಿನಂದು ವಿದ್ಯಾರ್ಥಿಗಳು ಹಾಗೂ ಬುದ್ಧಿಜೀವಿಗಳು ಏರ್ಪಡಿಸಿದ್ದ ಪಾಶ್ಚಾತ್ಯ ದೇಶಗಳನ್ನು ವಿರೋಧಿಸುವ

ಪ್ರದರ್ಶನದಲ್ಲಿ ಮೊವ್ರೋ ಸಹ ಭಾಗವಹಿಸಿದನು. ಈ ಪ್ರದರ್ಶನದೊಂದಿಗೆ ಆರಂಭವಾದ ಚೀನದಲ್ಲಿನ ಕ್ರಾಂತಿಕಾರಿ ಚಳುವಳಿಯು ಹೊರ ಪ್ರಪಂಚದ ಚಿಂತನೆಗಳನ್ನು ಆಹ್ವಾನಿಸಿ (ಸನ್‌ಯಟ್ ಸೆನ್ ಲೆನಿನ್‌ನನ್ನು ಸಂಪರ್ಕಿಸುವುದೂ ಸೇರಿದಂತೆ) ಮುಂದೆ ಘಟಿಸಿದ ಕ್ರಾಂತಿಗೆ ನಾಂದಿಯಾಯಿತು.

ಅಧ್ಯಾಯ ೨

ಕ್ರಾಂತಿಯ ಬೀಜಗಳು

ಮಾವೋತ್ಸೇ ತುಂಗ್ ೧೮೯೩ರಲ್ಲಿ ಮಧ್ಯ ಚೀನದ ಹುನಾನ್ ಪ್ರಾಂತ್ಯದಲ್ಲಿ ಷಾವೋಸನ್ ಚುಂಗ್ ಎಂಬ ಹಳ್ಳಿಯಲ್ಲಿ ಜನಿಸಿದನು. ಮಧ್ಯಮ ವರ್ಗದ ರೈತನಾಗಿದ್ದ ಮಾವೋನ ತಂದೆ ತನ್ನ ಮಗನಿಗೆ ಸಾಕಷ್ಟು ಉತ್ತಮ ವಿದ್ಯಾಭ್ಯಾಸವನ್ನು ಕೊಡಿಸಲು ಯತ್ನಿಸಿದನು. ಸಂಪ್ರದಾಯವಾದಿಯಾದ ತಂದೆ ಹಾಗೂ ಚಿಕ್ಕಂದಿನಿಂದಲೇ ಸ್ವತಂತ್ರ ಮನೋಭಾವವನ್ನು ಬೆಳೆಸಿಕೊಂಡಿದ್ದ ಮಾವೋ–ಇವರ ನಡುವೆ ಸಾಮಾನ್ಯವಾಗಿ ನಡೆಯುತ್ತಿದ್ದ ವಾದ ವಿವಾದಗಳು ಶಾಂತ ಸ್ವಭಾವದ ಮತ್ತು ಬೌದ್ಧಧರ್ಮದ ಅನುಯಾಯಿಯಾಗಿದ್ದ ಮಾವೋನ ತಾಯಿಯ ಮಧ್ಯ ಪ್ರವೇಶದಿಂದ ಶಮನಗೊಳ್ಳುತ್ತಿದ್ದವು. ಮಾವೋ ಜನಿಸಿದ ಹುನಾನ್ ಪ್ರಾಂತ್ಯವು ತೈಪಿಂಗ್ ದಂಗೆಯ ಕಾರ್ಯ ಸ್ಥಾನವಾಗಿತ್ತು. ಈ ಪ್ರಾಂತ್ಯವು ಚೀನದ ಉತ್ತರ, ದಕ್ಷಿಣ ಭಾಗಗಳ ಮಧ್ಯೆ ಕೊಂಡಿಯಂತೆ ಇದ್ದಿದ್ದರಿಂದ ಇಲ್ಲಿನ ಜನಕ್ಕೆ ದೇಶದಲ್ಲಿ ನಡೆಯುತ್ತಿದ್ದ ವಿದ್ಯಮಾನಗಳು ಕಾಲಕಾಲಕ್ಕೆ ತಿಳಿಯುತ್ತಿದ್ದವು. ಮಾವೋ ತನ್ನ ಬಾಲ್ಯದಲ್ಲಿ ಹುನಾನ್ ಪ್ರಾಂತ್ಯದಲ್ಲಿನ ಪರ್ವತಗಳಲ್ಲಿ ವಾಸಿಸುತ್ತಿದ್ದ ಡಕಾಯಿತರ ಬಗ್ಗೆ ಕೇಳಿದ್ದ. ರಾಬಿನ್‌ಹುಡ್ ರೀತಿಯ ಈ ಡಕಾಯಿತರು ತಾವು ಕೊಳ್ಳೆ ಹೊಡೆದ

ಸಂಪತ್ತಿನ ಸ್ವಲ್ಪ ಭಾಗವನ್ನು ಬಡವರಿಗೆ ಹಂಚುತ್ತಿದ್ದು ಬಾಲಕನಾದ ಮಾವೋ ಆ ವಿಷಯದ ಬಗ್ಗೆ ಆಸಕ್ತನಾಗಿದ್ದ. ತನ್ನ ಹಳೆಯ ವರ್ಷದಲ್ಲಿ ನಡೆದ ಬಾಕ್ಸರ್ ದಂಗೆಯ ಬಗ್ಗೆಯೂ ಅವನು ಕೇಳಿ ತಿಳಿದಿದ್ದ. ಈ ಎಲ್ಲ ಕಾರಣಗಳಿಂದಾಗಿ ಬಾಲ್ಯದಲ್ಲಿಯೇ ಮಾವೋನಲ್ಲಿ ಕ್ರಾಂತಿಕಾರಿ ವಿಚಾರಗಳು ಕುಡಿಯೊಡೆದು ಮುಂದೆ ಅವನ ಜೀವನವು ಸಾಗಿದ ರೀತಿಯಿಂದಾಗಿ ಕ್ರಾಂತಿಯೇ ಜೀವನಾದರ್ಶವಾಗಿ, ಕೊನೆಗೂ ತನ್ನ ಗುರಿಯನ್ನು ಮುಟ್ಟಲು ಅವನಿಗೆ ಸಾಧ್ಯವಾಯಿತು.

ಮಾವೋನ ಬಾಲ್ಯದ ಬಗ್ಗೆ ಹೆಚ್ಚಿನ ವಿವರಗಳು ಲಭ್ಯವಿಲ್ಲ. ಆದರೆ ಮುಂದೆ ಮಾವೋ ತನ್ನ ಹಳ್ಳಿಯನ್ನು ಬಿಟ್ಟು ನಗರ ಪ್ರದೇಶಕ್ಕೆ - ಮೊದಲು ಚಾಂಗ್ ಷಾ ಮತ್ತು ಮುಂದೆ ಬೀಜಿಂಗ್‌ಗೆ-ಬಂದ ಮೇಲೆ ಅವನ ಜೀವನದ ಮುಖ್ಯ ಘಟ್ಟಗಳ ವಿವರಗಳು ನಮಗೆ ಸಿಗುತ್ತವೆ. ತನ್ನ ಹೊಸ ಜೀವನದ ಆರಂಭ ಕಾಲದಿಂದ ಕೊನೆಯವರೆಗೂ ಮಾವೋನ ಜೀವನ ಹಾಗೂ ಚೀನದ ಚರಿತ್ರೆ ಬೇರೆಯಾಗಿ ಉಳಿಯುವುದಿಲ್ಲ. ಅವನ ಜೀವನವನ್ನು ಅಧ್ಯಯನ ಮಾಡುವುದೆಂದರೆ ಆ ದೇಶದ ಚರಿತ್ರೆಯನ್ನೇ ಅಭ್ಯಸಿಸುವುದು ಎಂದರ್ಥ.

ಕ್ರಾಂತಿಯ ಬೀಜಗಳು

ಮಾವೋ ತನ್ನ ಇಪ್ಪತ್ತೈದನೆಯ ವಯಸ್ಸಿನಲ್ಲಿ ಚಾಂಗ್ ಷಾ ನಗರದ ಕಾಲೇಜೊಂದರಿಂದ ಪದವಿ ಪಡೆದು ಹೊರ ಬರುವ ಹೊತ್ತಿಗೆ ಚೀನದಲ್ಲಿ ರಾಜಕೀಯವಾಗಿ ಸಾಕಷ್ಟು ಬದಲಾವಣೆಗಳು ಆಗಿ ಹೋಗಿದ್ದವು. ಆದರೆ ಈ ಯಾವ ಬದಲಾವಣೆಯೂ ಆ ದೇಶಕ್ಕೆ ಸ್ಥಿರತೆಯನ್ನು ತಂದುಕೊಟ್ಟಿರಲಿಲ್ಲ. ಡಾ॥ ಸನ್‌ಯಟ್ ಸೆನ್ ನೇತೃತ್ವದ ನ್ಯಾಷನಲಿಸ್ಟ್ ಪಕ್ಷಕ್ಕೂ ಚೀನದ ರಾಜವಂಶ ಹಾಗೂ ಹಲವಾರು ಪ್ರಾಂತ್ಯಗಳಲ್ಲಿ ಅಧಿಕಾರದಲ್ಲಿದ್ದ ಯುದ್ಧಕೋರ ಪಾಳೆಯಗಾರರಿಗೂ ನಡುವೆ ಸತತ ಯುದ್ಧ ನಡೆದಿತ್ತು; ಹಾಗೂ ಚೀನದ ಹಲವಾರು

ಭಾಗಗಳು ರಾಷ್ಟ್ರೀಯವಾದಿಗಳ ಕೈಗೆ ಬಂದೂ ಆಗಿತ್ತು. ಮಾವೋ ಸಹ ಪ್ರಜಾತಂತ್ರಕ್ಕಾಗಿ ಹೋರಾಡುತ್ತಿದ್ದ ಸೈನ್ಯದಲ್ಲಿ ಸ್ವಲ್ಪಕಾಲ ಸೇವೆ ಸಲ್ಲಿಸಿದ. ಮಂಚೂ ರಾಜನ ಸೇನಾಧಿಪತಿ ಹಾಗೂ ಸನ್‌ಯಟ್ ಸೆನ್‌ರ ನಡುವೆ ಏರ್ಪಟ್ಟ ಒಪ್ಪಂದದಿಂದಾಗಿ ತಾತ್ಕಲಿಕವಾಗಿ ಈ ಯುದ್ಧಕ್ಕೆ ತೆರೆ ಬಿದ್ದಿತ್ತು. ಆದರೆ ಮುಂದೆ ೧೯೧೫ರಲ್ಲಿ ಅಳಿಸಿ ಹೋದ ರಾಜರ ಸ್ಥಾನದಲ್ಲಿ ತಾನು ರಾಜನಾಗಲು ಹವಣಿಸಿದ ಈ ಸೇನಾಧಿಪತಿಯು ತನ್ನ ಉದ್ದೇಶ ಸಾಧನೆಗಾಗಿ ದೇಶವನ್ನೇ ಜಪಾನಿಯರ ದಾಸ್ಯಕ್ಕೆ ತಳ್ಳಲು ಯತ್ನಿಸಿದಾಗ ಅವನ ವಿರುದ್ಧ ಮತ್ತೆ ದಂಗೆಯಾಯಿತು. ೧೯೧೬ರಲ್ಲಿ ಯುವಾನ್ ಷಿ ಕೈ ಎಂಬ ಹೆಸರಿನ ಈ ಸೇನಾಧಿಪತಿಯು ಸತ್ತಮೇಲೆ ಚೀನದಲ್ಲಿ ಒಂದು ರೀತಿಯ ರಾಜಕೀಯ ಶೂನ್ಯ ಉಂಟಾಯಿತು. ಈ ಜಾಗವನ್ನು ತುಂಬಲು ಯುದ್ಧಕೋರ ಪಾಳೆಯಗಾರರು ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಯತ್ನಿಸುತ್ತಿದ್ದರು.

ಈ ಬೆಳವಣಿಗೆಗಳ ನಡುವೆ ೧೯೧೮ರಲ್ಲಿ ಮಾವೋ ಬೀಜಿಂಗ್‌ಗೆ ಬಂದು ಸೇರಿದನು. ಆ ಹೊತ್ತಿಗಾಗಲೇ ಮಾವೋ ತನ್ನ ಭವಿಷ್ಯವನ್ನು ದೇಶದ ಭವಿಷ್ಯದ ಜೊತೆ ಗಂಟು ಹಾಕಲು ನಿರ್ಧರಿಸಿದ್ದನು, ಮತ್ತು ದುಡಿಯುವ ವರ್ಗದ ಸಿದ್ಧಾಂತವಾದ ಮಾರ್ಕ್ಸ್‌ವಾದದ ಕಡೆಗೆ ಆಕರ್ಷಿತನಾಗಿದ್ದನು. ಮಾವೋನ ಮಾತುಗಳಲ್ಲೇ ಹೇಳಬೇಕಾದರೆ, "ಒಂದು ಬಾರಿ ನಾನು ಮಾರ್ಕ್ಸ್‌ವಾದವನ್ನು ಚರಿತ್ರೆಯ ಸರಿಯಾದ ವ್ಯಾಖ್ಯಾನವನ್ನು ಒಪ್ಪಿಕೊಂಡಮೇಲೆ ಮುಂದೆ ಎಂದೂ ಅದರ ಬಗ್ಗೆ ಯಾವುದೇ ಸಂದೇಹವು ನನ್ನನ್ನು ಕಾಡಲಿಲ್ಲ". ಮಾರ್ಕ್ಸ್‌ವಾದದಲ್ಲಿ ಮಾವೋ ಆಸಕ್ತನಾಗಿದ್ದು ಮುಖ್ಯವಾಗಿ ಇಬ್ಬರು ವ್ಯಕ್ತಿಗಳ ಪ್ರಭಾವದಿಂದಾಗಿ–ಒಬ್ಬರು, ಸಾಹಿತಿಯಾದ ಚೆನ್ ಡ್ಯು ಮತ್ತು ಇನ್ನೊಬ್ಬರು ವಿಶ್ವವಿದ್ಯಾಲಯದ ಗ್ರಂಥಾಲಯಾಧಿಕಾರಿಯಾಗಿದ್ದ ಲಿಡಾ ಷಾವೋ. ಚೀನದ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆ ಹಾಗೂ ಅದರ ಪ್ರಭಾವಯುಕ್ತ ಬೆಳವಣಿಗೆಗಳಲ್ಲಿ ಈ ಇಬ್ಬರು ನಿರ್ಣಾಯಕ ಪಾತ್ರವನ್ನು

ವಹಿಸಿದರು. ಈ ಸಮಯದಲ್ಲೇ ಬೀಜಿಂಗ್‌ನಲ್ಲಿ ೧೯೧೯, ಮೇ ತಿಂಗಳ ನಾಲ್ಕನೆಂದು ವಿದೇಶೀ ವಿರೋಧಿ ಪ್ರದರ್ಶನಗಳು ನಡೆದವು.

ಹುನಾನ್ ಪ್ರಾಂತ್ಯದ ಚಾಂಗ್ ಷಾನಲ್ಲಿ ಜಪಾನಿಯರ ವಿರುದ್ಧ ಜನರನ್ನು ಸಂಘಟಿಸಲು ಬೀಜಿಂಗ್ ನಗರವನ್ನು ಬಿಟ್ಟು ಬಂದಿದ್ದ ಮಾವ್ರೋ, ಅಲ್ಲಿಯ ಪಾಳೆಯಗಾರನೊಬ್ಬನ ಸೈನಿಕರಿಂದ ಬಂಧನಕ್ಕೊಳಗಾಗುವುದನ್ನು ತಪ್ಪಿಸಿಕೊಳ್ಳಲು ೧೯೨೦ರಲ್ಲಿ ಮತ್ತೆ ಬೀಜಿಂಗ್‌ಗೆ ಮರಳಬೇಕಾಯಿತು. ಮುಂದೆ ಹುನಾನ್‌ನಲ್ಲಿ ಸರಕಾರ ಬದಲಾದ ನಂತರ ಅಲ್ಲಿಯ ಒಂದು ಪ್ರಾಥಮಿಕ ಶಾಲೆಯ ಮುಖ್ಯಸ್ಥನಾಗಿ ಮತ್ತೆ ಚಾಂಗ್ ಷಾಗೆ ಹಿಂದಿರುಗಿದ ಮಾವ್ರೋ ಆ ಪ್ರದೇಶದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸಲು ದುಡಿದನು. ಇಲ್ಲಿಯೇ ಅವನು ಒಬ್ಬ ಕಮ್ಯುನಿಸ್ಟ್ ಕ್ರಾಂತಿಕಾರಿಣಿಯನ್ನು ಪ್ರೀತಿಸಿ ಕೆಲಕಾಲದ ನಂತರ ಆಕೆಯನ್ನು ಮದುವೆಯಾದನು. ೧೯೨೨ರಲ್ಲಿ ಬೀಜಿಂಗ್‌ನಲ್ಲಿನ ಸರ್ವಾಧಿಕಾರಿ ಸರಕಾರದ ವಿರುದ್ಧದ ಹೋರಾಟದಲ್ಲಿ ರಾಷ್ಟ್ರೀಯವಾದಿ ಪಕ್ಷದ ಜೊತೆ ಕಮ್ಯುನಿಸ್ಟ್ ಪಕ್ಷವು ಸೇರಿಕೊಂಡಿತು. ಈ ಸಂದರ್ಭದಲ್ಲಿ ಮತ್ತೆ ಜನರನ್ನು ಸಂಘಟಿಸಲು ಉದ್ಯೋಗವನ್ನು ಬಿಟ್ಟ ಮಾವ್ರೋ ಮತ್ತೆ ಯಾವ ಕೆಲಸವನ್ನೂ ಹುಡುಕದೇ ಪೂರ್ತಿಯಾಗಿ ಪಕ್ಷದ ಕೆಲಸದಲ್ಲಿ ಮಗ್ನನಾದನು, ಮತ್ತು ಅಂದಿನಿಂದ ಪೂರ್ಣಾವಧಿ ಕಮ್ಯುನಿಸ್ಟ್ ಕಾರ್ಯಕರ್ತನಾದನು.

ಚೀನದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯಾದ ಕೆಲ ವರ್ಷಗಳ ಕಾಲ ಅದು ರಷ್ಯದ ಕಮ್ಯುನಿಸ್ಟ್ ಪಕ್ಷ ಹಾಗೂ ಸರಕಾರಗಳ ನೆರಳಿನಲ್ಲಿಯೇ ನಡೆಯಬೇಕಾಗಿತ್ತು. ಈ ಪ್ರಭಾವದಿಂದಾಗಿ ಚೀನದ ಕಮ್ಯುನಿಸ್ಟ್ ಪಕ್ಷದ ವರಿಷ್ಠರು ಯಾವುದೇ ದೇಶದಲ್ಲಿ ಕ್ರಾಂತಿ ಯಶಸ್ವಿಗೊಳ್ಳಬೇಕಾದರೆ ಅದು ನಗರ ಪ್ರಾಂತ್ಯಗಳಲ್ಲಿರುವ ಕಾರ್ಮಿಕರ ಚಳುವಳಿಗಳಿಂದ ಮಾತ್ರ ಸಾಧ್ಯವೆಂದು ನಂಬಿದ್ದರು. ಕಾರ್ಲ್ ಮಾರ್ಕ್ಸ್ ಯೂರೋಪಿನ ದೇಶಗಳಲ್ಲಿ ಔದ್ಯೋಗಿಕ ಕ್ರಾಂತಿಯ ನಂತರ ಕಂಡು

ಬಂದ ಪರಿಸ್ಥಿತಿಗೆ ಸಂಬಂಧಪಟ್ಟಂತೆ ಹೇಳಿದ ಮಾತನ್ನು ಇವರು ಕಣ್ಣು ಮುಚ್ಚಿಕೊಂಡು ಒಪ್ಪಿ ಯೂರೋಪಿಗಿಂತ ಸಂಪೂರ್ಣವಾಗಿ ಭಿನ್ನವಾಗಿದ್ದ ಚೀನದ ಸಂದರ್ಭಕ್ಕೂ ಅನ್ವಯಿಸಲು ಯತ್ನಿಸಿದರು. ಹೀಗಾಗಿ ಆ ದೇಶದ ಬಹುಸಂಖ್ಯಾತ ದುಡಿಯುವ ವರ್ಗವಾದ ಕೃಷಿಕಾರ್ಮಿಕರನ್ನು ಪೂರ್ತಿಯಾಗಿ ನಿರ್ಲಕ್ಷಿಸಿದ ಈ ನಾಯಕರು ನಗರ ಪ್ರಾಂತ್ಯಗಳ ಕಾರ್ಮಿಕರನ್ನೇ ನೆಚ್ಚಿಕೊಂಡಿದ್ದರು. ಆದರೆ ಮಾವೋನ ಅನುಭವ ಹಾಗೂ ಯೋಚನೆಗಳು ಬೇರೆ ರೀತಿಯಾಗಿದ್ದವು. ಹಾವ್ರೋ ಹಾನ್‌ನಲ್ಲಿ ವಿಶ್ರಾಂತಿಗಾಗಿ ಕೆಲ ಕಾಲವಿದ್ದಾಗ ಅಲ್ಲಿನ ರೈತ ಕಾರ್ಮಿಕರು ಪಟ್ಟಣ ಪ್ರದೇಶದ ಕಾರ್ಮಿಕರಿಗೆ ಒತ್ತಾಸೆಯನ್ನು ನೀಡಲು ಬಹಿರಂಗವಾಗಿ ಪ್ರದರ್ಶನಗಳನ್ನು ನಡೆಸಿದ್ದನ್ನು ಮಾವೋ ಕಣ್ಣಾರೆ ಕಂಡಿದ್ದನು; ಹಾಗೂ ಚೀನದಂತಹ ಕೃಷಿ ಪ್ರಧಾನ ದೇಶದಲ್ಲಿ ಕೃಷಿ ಕಾರ್ಮಿಕರ ಪಾತ್ರವಿಲ್ಲದೆ ಯಾವ ಚಳುವಳಿಯು ಸಫಲವಾಗಲಾರದೆಂದು ನಂಬಿದ್ದನು. ಮಾವೋನ ಯೋಚನೆಯು ಕಮ್ಯುನಿಸ್ಟ್ ಪಕ್ಷದ ನಾಯಕರಲ್ಲಿ ಹೆಚ್ಚಿನ ಜನಕ್ಕೆ ಒಪ್ಪಿಗೆಯಾಗದಿದ್ದರೂ ಸಹ ಅವನು ಕೃಷಿ ಕಾರ್ಮಿಕರನ್ನು ಸಂಘಟಿಸುವಲ್ಲಿ ತನ್ನನ್ನು ತಾನು ಪೂರ್ತಿಯಾಗಿ ತೊಡಗಿಸಿಕೊಂಡನು; ಮತ್ತು ಅವರ ಶಕ್ತಿಯಿಂದಲೇ ತನ್ನ ದೇಶಕ್ಕೆ ನಿಜವಾದ ಸ್ವಾತಂತ್ರ್ಯವು ಸಿಗುವುದೆಂಬ ನಂಬಿಕೆಯನ್ನಿಟ್ಟುಕೊಂಡು ಮುನ್ನುಗ್ಗಿದನು.

ಕಮ್ಯುನಿಸ್ಟ್ ಕ್ರಾಂತಿಯು ಚೀನಕ್ಕೆ ಕೇವಲ ರಾಜಕೀಯ ಅರ್ಥದಲ್ಲಿ ಮಾತ್ರ ಅವಶ್ಯಕವಾಗಿರಲಿಲ್ಲ. ಊಳಿಗಮಾನ್ಯ ಪದ್ಧತಿಯ ಗುಂಗಿನಿಂದ ಇನ್ನೂ ಎಚ್ಚರವಾಗದಿರುವ ಚೀನದ ಸಮಾಜಕ್ಕೆ ಸರಿಯಾದ ದಾರಿಯನ್ನು ತೋರಿಸಲು ಒಂದು ಕ್ರಾಂತಿಕಾರಿ ಸಿದ್ಧಾಂತ ಬೇಕಿತ್ತು. ಸಮಾಜದ ಎಲ್ಲ ಸ್ತರಗಳಲ್ಲಿಯೂ ಸಮಗ್ರ ಬದಲಾವಣೆಯನ್ನು ತರುವಂಥ ಸಾಮ್ಯವಾದವೇ ಅಂತಹ ಸಿದ್ಧಾಂತವೆಂಬುದರಲ್ಲಿ ಮಾವೋ ಮತ್ತು ಅವನ ಪಕ್ಷದವರ ಖಚಿತವಾದ ನಂಬಿಕೆಯಾಗಿತ್ತು. ಕಮ್ಯುನಿಸ್ಟ್ ಕ್ರಾಂತಿಯೇ ಘಟಿಸಿದಲ್ಲಿ ಆ ರೀತಿಯ ಬದಲಾವಣೆ ಅನಿವಾರ್ಯವೆಂಬುದು

ಕಮ್ಯುನಿಸ್ಟ್ ವಿರೋಧಿಗಳಿಗೂ ತಿಳಿದಿತ್ತು. ಆದ್ದರಿಂದಲೇ ಇಂತಹ ಕ್ರಾಂತಿಯನ್ನು ತಡೆಯಲು ಅವರು ಎಲ್ಲ ಪ್ರಯತ್ನಗಳನ್ನೂ ನಡೆಸಿದರು. ಡಾ॥ ಸನ್‌ಯಟ್ ಸೇನ್ ನಂತರ ರಾಷ್ಟ್ರೀಯವಾದಿ ಪಕ್ಷದ ನಾಯಕತ್ವವನ್ನು ವಹಿಸಿಕೊಂಡ ಚಿಯಾಂಗ್ ಕೈ ಷೇಕ್, ಪ್ರಾರಂಭದಲ್ಲಿ ಕಮ್ಯುನಿಸ್ಟರ ಸಹಕಾರದೊಂದಿಗೆ ಬೀಜಿಂಗ್ ಸರಕಾರವನ್ನು ಎದುರಿಸಿದರೂ ಬರಬರುತ್ತಾ ತಾನು ಎಂತಹ ಕಮ್ಯುನಿಸ್ಟ್ ವಿರೋಧಿ ಎಂಬುದನ್ನು ಸಾಬೀತುಪಡಿಸಿದನು. ೧೯೨೭ರ ಮಾರ್ಚ್ ತಿಂಗಳಲ್ಲಿ ಪ್ರಮುಖ ಬಂದರು ನಗರವಾದ ಷಾಂಘೈಯನ್ನು ಅಲ್ಲಿನ ಕಮ್ಯುನಿಸ್ಟರ ಸಹಕಾರದಿಂದ ಅತಿ ಸುಲಭವಾಗಿ ಆಕ್ರಮಿಸಿದ ತಕ್ಷಣವೇ ಅಲ್ಲಿನ ಬಂಡವಾಳಶಾಹಿಗಳ–ಚೀನಿ ಹಾಗೂ ವಿದೇಶೀ–ಜೊತೆಗೆ ಸೇರಿ ಕಮ್ಯುನಿಸ್ಟರ ವಿರುದ್ಧ ಸಮರ ಸಾರಿದನು. ಷಾಂಘೈ ನಗರ ಮತ್ತು ಹುನಾನ್ ಪ್ರಾಂತ್ಯಗಳಲ್ಲಿ ಸುಮಾರು ಮೂವತ್ತು ಸಾವಿರಕ್ಕಿಂತಲೂ ಹೆಚ್ಚು ಜನ ಕಮ್ಯುನಿಸ್ಟರ ವಧೆಯಾಯಿತು. ಅಲ್ಲದೇ ದೇಶದ ಉದ್ದಗಲಕ್ಕೂ ಕಮ್ಯುನಿಸ್ಟರ ಬೇಟೆ ನಡೆಯುತ್ತಿತ್ತು. ಇಂಥ ಸಮಯದಲ್ಲಿ ಚೀನಾದ ಹಲವರು ಕಮ್ಯುನಿಸ್ಟ್ ನಾಯಕರು ಭೂಗತರಾಗಿ ರಹಸ್ಯ ಜೀವನವನ್ನು ನಡೆಸುವ ತುರ್ತು ಉಂಟಾಯಿತು. ಮಾವೋ ಸಹ ಹುನಾನ್ ಪ್ರಾಂತ್ಯದಲ್ಲಿನ ಪರ್ವತ ಪ್ರದೇಶಕ್ಕೆ ಹೋಗಿ ಅಲ್ಲಿಂದ ಚಿಯಾಂಗ್ ಕೈಷೇಕನ ವಿರುದ್ಧ ಗೆರಿಲ್ಲಾ ಯುದ್ಧವನ್ನು ಸಾರಿದನು. ಆಗ ಮಾವೋನ ಜೀವನದ ಒಂದು ಹೊಸ ಅಧ್ಯಾಯವು ಆರಂಭವಾಯಿತೆಂದು ಹೇಳಬಹುದು.

ಅಧ್ಯಾಯ ೩

ಗೆರಿಲ್ಲಾ

ಪರ್ವತಗಳ ನಡುವಿನಿಂದ ಮಾವೋ ನಡೆಸಿದ ಹೋರಾಟವು ಚೀನದ ಚರಿತ್ರೆಯಲ್ಲಿ ಮಾತ್ರವಲ್ಲ, ಇಡೀ ಜಗತ್ತಿನ ಇತಿಹಾಸದಲ್ಲಿಯೇ ಮಾನವನು ಸ್ವಾತಂತ್ರ್ಯ ಹಾಗೂ ಸ್ವಾಭಿಮಾನಗಳನ್ನು ಉಳಿಸಿಕೊಳ್ಳಲು ನಡೆಸಿದ ಪ್ರಮುಖ ಹೋರಾಟಗಳ ಮುಂಚೂಣಿಯಲ್ಲಿ ನಿಲ್ಲುತ್ತದೆ. ಇಂಥ ಕೆಲವು ಹೋರಾಟಗಳು ಕೊನೆಗೂ ರಾಷ್ಟ್ರೀಯ, ಅಂತರರಾಷ್ಟ್ರೀಯ ಕುತಂತ್ರಗಳಿಗೆ ತುತ್ತಾಗಿ ಸೋಲನ್ನೊಪ್ಪಿದ್ದರೆ, ಮತ್ತೆ ಕೆಲವು ಎಲ್ಲ ಅಡ್ಡಿ ಆತಂಕಗಳನ್ನು ಬದಿಗೆ ಸರಿಸಿ ತಮ್ಮ ಗಮ್ಯವನ್ನು ಮುಟ್ಟಿವೆ. ಚೀನದಲ್ಲಿ ಮಾವೋನ ನಾಯಕತ್ವದಲ್ಲಿ ನಡೆದ ಗೆರಿಲ್ಲಾ ಹೋರಾಟವು ಈ ಎರಡನೆಯ ರೀತಿಯದು.

ಚೀನದ ಕಮ್ಯುನಿಸ್ಟ್ ಪಕ್ಷವು ನಗರ ಪ್ರದೇಶಗಳ ಕಾರ್ಮಿಕ ವರ್ಗವನ್ನು ಮಾತ್ರ ನೆಚ್ಚಿಕೊಂಡಿದ್ದು ಅವರ ಮೂಲಕವೇ ದೇಶದಲ್ಲಿ ಕ್ರಾಂತಿಯನ್ನು ಸಾಧಿಸಬಹುದೆಂದು ನಂಬಿತ್ತು. ಆದರೆ ಮಾವೋನ ಅನುಭವ ಬೇರೆಯಾಗಿದ್ದು, ಪರಿಣಾಮವಾಗಿ ಗ್ರಾಮೀಣ ಕೃಷಿ ಕಾರ್ಮಿಕರನ್ನು ಒಳಗೊಂಡಾಗ ಮಾತ್ರವೇ ಕ್ರಾಂತಿಕಾರಿ ಹೋರಾಟವು ನಿಜವಾದ ಸತ್ವವನ್ನು ಹೊಂದಲು ಸಾಧ್ಯವೆಂದು ತಿಳಿದಿದ್ದ. ಹುನಾನ್

ಪ್ರಾಂತ್ಯದ ಬೆಟ್ಟಗಳ ನಡುವೆ ಮಾವೋ ಸೈನಿಕ ಸ್ಥಾವರಗಳನ್ನು ನೆಲೆಗೊಳಿಸಿದಾಗ ಅವನನ್ನು ಹಿಂಬಾಲಿಸಿದ್ದು ಈ ಅಸಂಖ್ಯಾತ ಗ್ರಾಮೀಣ ಜನರೇ ಆಗಿದ್ದರು. ಅವರ ಮೂಲಕವೇ ಸರಕಾರದ ಸೈನ್ಯಗಳ ಮೇಲೆ ಹಠಾತ್ ದಾಳಿಗಳನ್ನು ನಡೆಸಿದ ಮಾವೋ ನಿಧಾನವಾಗಿಯಾದರೂ ತನ್ನ ಕೈ ಮೇಲೆಂಬುದನ್ನು ಸ್ಪಷ್ಟಪಡಿಸಿದ. ಸಂಖ್ಯೆಯಲ್ಲಿ, ಧನ ಹಾಗೂ ಶಸ್ತ್ರ ಬಲಗಳಲ್ಲಿ ಮಾವೋನ ಸೈನ್ಯವನ್ನು ಮೀರಿಸಿದ್ದ ಸರಕಾರದ ಸೈನ್ಯದೊಂದಿಗೆ ಹೋರಾಡಲು ಈ ಗೆರಿಲ್ಲಾ ವಿಧಾನವಲ್ಲದೆ ಬೇರೆ ರೀತಿಯಲ್ಲಿ ಸಾಧ್ಯವಿರಲಿಲ್ಲ.

ಮಾವೋನ ಈ ಯತ್ನವು ಅವನ ಮತ್ತು ಕಮ್ಯುನಿಸ್ಟ್ ಪಕ್ಷದ ನಾಯಕರ ಮಧ್ಯೆ ಭಿನ್ನಾಭಿಪ್ರಾಯಗಳನ್ನು ಉಂಟು ಮಾಡಿತು. ಒಂದು ಬಾರಿ ಪಕ್ಷದ ಆದೇಶದ ಮೇರೆಗೆ ತನ್ನ ಸೈನ್ಯವನ್ನು ಪಾಳೆಯಗಾರರ ಸೈನ್ಯದ ವಿರುದ್ಧ ಪ್ರತ್ಯಕ್ಷ ಕದನದಲ್ಲಿ ತೊಡಗಲು ಕಳುಹಿಸಿ ಸೋಲನ್ನು ಅನುಭವಿಸಿದ ಮಾವೋ ಮುಂದೆ ಎಂದಿಗೂ ಆ ತಪ್ಪನ್ನು ಮಾಡಲಿಲ್ಲ. ಕೆಲವು ದಿನಗಳು ಕಳೆದ ಮೇಲೆ ರಾಷ್ಟ್ರೀಯವಾದಿ ಪಕ್ಷದಿಂದ ಹೊರ ಬಂದಿದ್ದ 'ಚೂತೆ' ಎಂಬ ಸೈನ್ಯಾಧಿಕಾರಿಯು ತನ್ನ ಹತ್ತು ಸಾವಿರ ಸೈನಿಕರೊಂದಿಗೆ ಮಾವೋನ ಜೊತೆ ಸೇರಿದನು. ಅಂದಿನಿಂದ ಅವರಿಬ್ಬರ ನಾಯಕತ್ವದಲ್ಲಿ 'ಕೆಂಪು ಸೇನೆ' (Red Army) ಅತ್ಯಂತ ಶಕ್ತಿಯುತವಾಗಿ ಬೆಳೆದು ಈ ನಾಯಕರಿಬ್ಬರೂ ಒಬ್ಬನೇ ಎಂಬಂತೆ 'ಚುಮಾ ವೋ' ಎಂಬ ಹೆಸರಿನಲ್ಲಿ ದಂತ ಕಥೆಯಾಗಿ ಬೆಳೆದರು.

ಈ ಯುದ್ಧದ ಕಾಲದಲ್ಲಿ ಮಾವೋ ತನ್ನ ಹೆಂಡತಿ ಮತ್ತು ತಂಗಿಯರನ್ನು ಕಳೆದುಕೊಂಡನು. ಶತೃಗಳು ಅವರನ್ನು ಬಂಧಿಸಿ ಕೊಂದರು. ಆದರೆ ಈ ರೀತಿಯ ನಷ್ಟಗಳು ಮಾವೋನ ರಾಜಕೀಯ ಜೀವನದಲ್ಲಿ ಯಾವುದೇ ಪರಿಣಾಮವನ್ನು ಉಂಟು ಮಾಡಲಿಲ್ಲ. ತನ್ನ ಹೋರಾಟದ ನೆಲೆಯನ್ನು ಆ ವೇಳೆಗೆ ಹುನಾನ್‌ನಿಂದ ಕಿಯಾಂಗ್‌ಸಿ ಪ್ರಾಂತ್ಯಕ್ಕೆ ಬದಲಾಯಿಸಿದ್ದ ಮಾವೋ, ಚಿಯಾಂಗ್‌ನ ಅಪಾರ ಸೈನ್ಯದ

ವಿರುದ್ಧ ಸತತ ಹೋರಾಟದಲ್ಲಿ ಮುಳುಗಿದ್ದನು. ಪಕ್ಷದ ಪ್ರಮುಖರೂ ಸಹ ಕಾಲಕ್ರಮದಲ್ಲಿ ಗೆರಿಲ್ಲಾ ಯುದ್ಧವೇ ಪರಿಣಾಮಕಾರಿಯಾಗುವುದನ್ನು ಕಂಡು ಮಾವೋನ ಯುದ್ಧತಂತ್ರವನ್ನು ಒಪ್ಪಿಕೊಂಡರು. ಆದರೆ ಚಿಯಾಂಗ್ ಕೈಷೇಕ್ ತನ್ನ ಅಸಂಖ್ಯಾತ ಸೈನಿಕರನ್ನು ಮುನ್ನಡೆಸಿ ಕಿಯಾಂಗ್‌ಸಿಯಲ್ಲಿ ನೆಲೆಯೂರಿದ್ದ ಕೆಂಪು ಸೇನೆಯನ್ನು ಸುತ್ತುಗಟ್ಟಲು ಆರಂಭಿಸಿದ. ಎಲ್ಲ ದಿಕ್ಕುಗಳಿಂದಲೂ ಮುತ್ತುತ್ತಿದ್ದ ಅವನ ಸೈನ್ಯದ ಜೊತೆ ನಡೆದ ಭೀಕರ ಹೋರಾಟಗಳಲ್ಲಿ ಸಾವಿರಾರು ಕೆಂಪು ಸೈನಿಕರು ಸತ್ತರು. ಇಂಥ ವಿಪತ್ತಿನ ಕಾಲದಲ್ಲಿ ಕಮ್ಯುನಿಸ್ಟ್ ಸೈನಿಕರಿಗೆ ಮತ್ತು ಅವರ ನಾಯಕರಿಗೆ ಇದ್ದ ಒಂದೇ ದಾರಿಯೆಂದರೆ ಕಿಯಾಂಗ್‌ಸಿಯಿಂದ ತಪ್ಪಿಸಿಕೊಂಡು ಚಿಯಾಂಗ್‌ನ ಸೈನ್ಯದಿಂದ ದೂರಸರಿಯುವುದು ಮಾತ್ರ. ಈ ನಿರ್ಧಾರವನ್ನು ಕಾರ್ಯಗತಗೊಳಿಸಬೇಕೆಂದು ನಿಶ್ಚಿತವಾದ ಮೇಲೆ ಕೆಲವರು ಸೈನಿಕರು ತಮ್ಮ ನೆಲೆಯನ್ನು ಕಾಪಾಡಲು ಹಿಂದೆ ಉಳಿದರು. ಆದರೆ ಈ ಸೈನಿಕರೆಲ್ಲರೂ ಆಮೇಲೆ ನಡೆದ ಹೋರಾಟದಲ್ಲಿ ಪ್ರಾಣ ತೆತ್ತರು. ಮಾವೋನ ತಮ್ಮನಾದ ಮಾವೋ ಜೆಟಾನ್ ಕೂಡ ಹೀಗೆ ಮೃತರಾದವರಲ್ಲಿ ಒಬ್ಬನಾಗಿದ್ದನು.

ಕೆಂಪು ಸೇನೆಯ ಗೆರಿಲ್ಲಾ ಯುದ್ಧವು ಚೀನದ ಚರಿತ್ರೆಯಲ್ಲಿ ಒಂದು ಪ್ರಮುಖ ಘಟ್ಟವಾಗಿದ್ದರೆ, ಆ ಸೈನಿಕರು ಕಿಯಾಂಗ್‌ಸಿಯಿಂದ ಸಾವಿರಾರು ಮೈಲಿಗಳ ದೂರವನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿ ಯೆ ನಾನ್ ಪ್ರಾಂತ್ಯವನ್ನು ತಲುಪಿದ್ದು ಈ ಪ್ರಮುಖ ಘಟ್ಟದಲ್ಲಿನ ಅತ್ಯಂತ ಮುಖ್ಯ ಅಧ್ಯಾಯವಾಗಿ ನಿಲ್ಲುತ್ತದೆ. ಈ ಘಟನೆಯೇ ಕೆಂಪು ಸೇನೆಯ ಮಹಾಪ್ರಸ್ಥಾನ (The long March) ಎಂದು ಹೆಸರು ವಾಸಿಯಾಗಿದೆ. ಈ ಮಹಾಪ್ರಸ್ಥಾನದ ಕಾಲದಲ್ಲಿ ಕೆಂಪು ಸೈನ್ಯವು ಶತ್ರುಗಳ ಹಾಗೂ ನಿಸರ್ಗದಿಂದ ಏನೇನು ಕಷ್ಟನಷ್ಟಗಳನ್ನು ಅನುಭವಿಸಬಹುದೋ ಅವೆಲ್ಲವುಗಳನ್ನು ಎದುರಿಸಿತು. ಈ ಅಧ್ಯಾಯದ ಅಧ್ಯಯನವು

ಮಾನವನ ಇಚ್ಛಾಶಕ್ತಿ ಮತ್ತು ತಾನು ನಂಬಿದ ತತ್ವಗಳ ಅನುಷ್ಠಾನಕ್ಕೆ ಯಾವ ತ್ಯಾಗಕ್ಕೂ ಸಿದ್ಧನಾಗುವ ಅವನ ಸ್ಥಿರತೆಯನ್ನು ಆಶ್ಚರ್ಯವನ್ನುಂಟು ಮಾಡುವ ರೀತಿಯಲ್ಲಿ ನಮಗೆ ಸಾಬೀತುಪಡಿಸುತ್ತದೆ. ಸಾಮಾನ್ಯ ಸೈನಿಕರಿಂದ ಹಿಡಿದು ನಾಯಕನ ಮಟ್ಟದರೆಗಿನ ಎಲ್ಲ ಹಂತಗಳಲ್ಲಿನ ವ್ಯಕ್ತಿಗಳು ಸಮಾನರು ಹಾಗೂ ಸಮಾನ ಗೌರವಕ್ಕೆ ಪಾತ್ರರು ಎಂಬ ಸೂತ್ರವೇ ಅವರನ್ನು ಒಂದುಗೂಡಿಸಿ ತಾವು ಭವಿಷ್ಯತ್ತಿನಲ್ಲಿ ಕಟ್ಟಬೇಕೆಂದಿದ್ದ ಹೊಸ ಸಮಾಜದ ಬಗ್ಗೆ ನಂಬಿಕೆಯನ್ನು ಮತ್ತು ಉತ್ಸಾಹವನ್ನೂ ಅವರಲ್ಲಿ ತುಂಬಿತ್ತು. ಈ ಧ್ಯೇಯ ಸಾಧನೆಗಾಗಿ ಅವರೆಲ್ಲರು ಪ್ರಾಣತ್ಯಾಗಕ್ಕೂ ಸಿದ್ಧರಿದ್ದರು; ಮತ್ತು ಸಹಸ್ರ ಸಂಖ್ಯೆಯಲ್ಲಿ ಹುತಾತ್ಮರಾದರು. ಹೀಗೆ ಪ್ರಾಣಕಳೆದುಕೊಂಡ ಸೈನಿಕರು ಎಷ್ಟು ಜನ ಎನ್ನುವ ಬಗ್ಗೆ ನಿಖರವಾದ ಲೆಕ್ಕ ಇಂಥ ಸಂದರ್ಭಗಳಲ್ಲಿ ಸಿಗುವುದೇ ಕಷ್ಟ. ಕೆಂಪು ಸೈನ್ಯವು ಕ್ರಮಿಸಿದ ದಾರಿಯುದ್ದಕ್ಕೂ ಆ ಸೈನಿಕರ ಸಮಾಧಿಗಳ ನಿರ್ಮಾಣವಾಯಿತು. ಹಲವರು ಶತೃಗಳ ದಾಳಿಯಿಂದಾಗಿ ಸತ್ತರೆ ಮತ್ತೆಷ್ಟೋ ಜನ ಹಸಿವಿನಿಂದ, ರೋಗದಿಂದ, ಪ್ರತಿಕೂಲ ವಾತಾವರಣದಿಂದ ಸತ್ತರು. ಇಷ್ಟೆಲ್ಲ ಆದರೂ ಕೆಂಪು ಸೈನ್ಯವು ಧೃತಿಗೆಡದೆ, ಕೊನೆಗೂ ಮಾವೋನ ನೇತೃತ್ವದಲ್ಲಿ ಯೆನಾನ್ ಪ್ರಾಂತ್ಯವನ್ನು ಮುಟ್ಟಿ ಚಿಯಾಂಗ್‌ನ ಅಧಿಕಾರಕ್ಕೆ ದೊಡ್ಡ ಸವಾಲನ್ನೇ ಎಸೆಯಿತು. ಮಹಾ ಪ್ರಸ್ಥಾನದ ಈ ವಿಜಯಯೊಂದಿಗೆ ಮಾವೋತ್ಸೆ ತುಂಗ್ ಚೀನದ ಕಮ್ಯುನಿಸ್ಟ್ ಚಳುವಳಿಯ, ಆ ಮೂಲಕ ಕಮ್ಯುನಿಸ್ಟ್ ಪಕ್ಷದ ಪ್ರಶ್ನಾತೀತ ನಾಯಕನಾಗಿ ಬೆಳೆದನು. ಅವನ ನಾಯಕತ್ವದಲ್ಲಿ ಸಂಪೂರ್ಣ ವಿಶ್ವಾಸ ವನ್ನು ಇರಿಸಿಕೊಂಡು ಸಾಮಾನ್ಯ ಸೈನಿಕನಿಂದ ಪಕ್ಷದ ವರಿಷ್ಠರವರೆಗೆ ಎಲ್ಲರೂ ಮಾವೋನನ್ನು ನೇತಾರನಾಗಿ ಒಪ್ಪಿಕೊಳ್ಳಲೇ ಬೇಕಾಯಿತು.

ಮಾವೋ ಪ್ರೀತಿಪಾತ್ರನಾದದ್ದು ಕೇವಲ ಕಮ್ಯುನಿಸ್ಟ್‌ರಿಗೆ ಮಾತ್ರವಲ್ಲ. ದೇಶವು ವಿದೇಶೀಯರ ಆಕ್ರಮಣದಿಂದ ಮುಕ್ತವಾಗ ಬೇಕೆಂದು ಬಯಸಿದ ಎಲ್ಲರೂ ಮಾವೋನನ್ನು ಗೌರವಿಸಿದರು.

ಚಿಯಾಂಗ್ ಕೈಷೇಕ್ ಜಪಾನೀಯರ ಜೊತೆ ಒಪ್ಪಂದ ಮಾಡಿಕೊಂಡು, ಚೀನವ ಹಲವು ಪ್ರದೇಶಗಳನ್ನು ಅವರ ವಶಕ್ಕೆ ಒಪ್ಪಿಸಿ ಅವರ ಸಹಾಯದಿಂದ ತನ್ನ ದೇಶದವರೇ ಆದ ಕಮ್ಯುನಿಸ್ಟರನ್ನು ಕೊಲ್ಲುತ್ತಿದ್ದುದನ್ನು ಜನ ವಿರೋಧಿಸಿದರು. ಚಿಯಾಂಗ್‌ನ ಸೈನ್ಯ ದಲ್ಲಿಯೇ ಹಲವರು ಚಿಯಾಂಗ್‌ಗಿಂತಲೂ ಮಾವೋನನ್ನು ಹೆಚ್ಚು ಇಷ್ಟಪಡುತ್ತಿದ್ದರು. ಚಿಯಾಂಗ್‌ನ ಸೈನ್ಯಾಧಿಕಾರಿಗಳಲ್ಲಿ ಒಬ್ಬನಾಗಿದ್ದ ಚಾಂಗ್‌ಸು–ಲಿಯಾಂಗ್ ಒಂದು ಸಂದರ್ಭದಲ್ಲಿ ಚಿಯಾಂಗ್‌ನನ್ನೇ ಒತ್ತೆಯಾಳಾಗಿ ಇರಿಸಿಕೊಂಡು ಮಾವೋನ ಕೆಲವು ಶರತ್ತುಗಳಿಗೆ ತಲೆಬಾಗುವಂತೆ ಮಾಡಿದ್ದು ಇದಕ್ಕೆ ಒಂದು ಉದಾಹರಣೆ.

೧೯೪೫ರಲ್ಲಿ ಎರಡನೆಯ ಜಾಗತಿಕ ಯುದ್ಧ ಕೊನೆಗೊಳ್ಳುವ ವರೆಗೂ ಜಪಾನೀಯರ ಚೀನಾ ಆಕ್ರಮಣವು ಮುಂದುವರೆದಿತ್ತು. ಅವರನ್ನು ಎದುರಿಸುತ್ತಿದ್ದದ್ದು ಕೆಂಪು ಸೇನೆ ಮಾತ್ರ. ಚಿಯಾಂಗ್‌ನ ರಾಷ್ಟ್ರೀಯವಾದಿ ಪಕ್ಷದ ಸೈನಿಕರು ಹಲವಾರು ಸಲ ಜಪಾನೀಯರ ವಿರುದ್ಧ ನಿಷ್ಕ್ರಿಯರಾಗಿದ್ದರು ಅಥವಾ ಅವರಿಗೇ ಸಹಾಯಮಾಡಿದರು. ಚಿಯಾಂಗ್ ಜಪಾನಿಯರಿಗಿಂತಲೂ ಕಮ್ಯುನಿಸ್ಟರೇ ತನ್ನ ಶತೃಗಳೆಂದು ತಿಳಿದಿದ್ದು ಅವರನ್ನು ಸಂಪೂರ್ಣವಾಗಿ ನಾಶಮಾಡಬೇಕೆಂದು ಹೊರಟಿದ್ದನು. ಆದರೆ ಕೊನೆಗೂ ಅವನಿಗೆ ಅದು ಸಾಧ್ಯವಾಗಲಿಲ್ಲ. ಜಪಾನೀಯರು ಮಿತ್ರ ರಾಜ್ಯಗಳ ಸೇನೆಗೆ ಶರಣಾದ ಮೇಲೆ ಚೀನಾದಲ್ಲಿ ನಡೆದದ್ದು ಅಂತರ್ಯುದ್ಧ. ಚಿಯಾಂಗ್‌ನ ಜೊತೆ ಒಪ್ಪಂದಕ್ಕೆ ಬಂದು ಇನ್ನಾದರು ದೇಶದಲ್ಲಿ ಶಾಂತ ವಾತಾವರಣವನ್ನು ಉಂಟು ಮಾಡೋಣವೆಂಬ ಮಾವೋನ ಯತ್ನ ಚಿಯಾಂಗ್‌ನ ಹಠದಿಂದಾಗಿ ಕೈಗೂಡಲಿಲ್ಲ. ಈ ಅಂತರ್ಯುದ್ಧದಲ್ಲಿಯೂ ಮಾವೋ ತನ್ನ ಗೆರಿಲ್ಲಾ ತಂತ್ರವನ್ನೇ ಅವಲಂಬಿಸಿದನು. ಈ ಹೊತ್ತಿಗೆ ತನ್ನ ರಾಜಕೀಯ, ಸಾಮಾಜಿಕ ಚಿಂತನೆಗೆ ಹೆಸರುವಾಸಿಯಾಗಿದ್ದ ಮಾವೋ ಯುದ್ಧ ತಂತ್ರಜ್ಞನೆಂದೂ ಪ್ರಸಿದ್ಧನಾದನು. ೧೯೪೭ರ ವೇಳೆಗೆ ಕೆಂಪು ಸೈನ್ಯವು

ಚಿಯಾಂಗ್‌ನ ಸೈನ್ಯಕ್ಕಿಂತಲೂ ಸಂಖ್ಯೆ ಹಾಗೂ ಆತ್ಮ ವಿಶ್ವಾಸದಲ್ಲಿ ಮೇಲುಗೈ ಪಡೆದಿತ್ತು. ೧೯೪೯ ರಲ್ಲಿ ಚಿಯಾಂಗ್ ಕಮ್ಯುನಿಸ್ಟ್ ದಾಳಿಯಿಂದ ತಪ್ಪಿಸಿಕೊಳ್ಳಲು ತನ್ನ ರಾಜಧಾನಿಯನ್ನು ಐದು ಸಲ ಬದಲಾಯಿಸಬೇಕಾಯಿತು. ಕೊನೆಗೂ ಅದೇ ವರ್ಷದ ಅಂತ್ಯ ಭಾಗದಲ್ಲಿ ಅವನು ಫಾರ್ಮೋಸಾ ದ್ವೀಪಕ್ಕೆ ಓಡಿಹೋದನು. ಈ ದ್ವೀಪವು ಬಹು ಕಾಲ ಜಪಾನೀಯರ ಆಳ್ವಿಕೆಗೆ ಒಳಪಟ್ಟಿತ್ತು. ಚಿಯಾಂಗ್‌ನ ಜೊತೆ ಕಮ್ಯುನಿಸ್ಟ್ ವಿರೋಧಿಗಳಾಗಿದ್ದ ರಾಷ್ಟ್ರೀಯವಾದೀ ಪಕ್ಷದ ಅಧಿಕಾರಿಗಳು, ವ್ಯಾಪಾರಸ್ಥರು ಹಾಗೂ ಭೂಮಾಲೀಕರು ಫಾರ್ಮೋಸಾ ದ್ವೀಪಕ್ಕೆ ವಲಸೆ ಹೋದರು. ಅಲ್ಲಿನ ನಿವಾಸಿಗಳನ್ನು ಹೆದರಿಸಿ ಚಿಯಾಂಗ್ ಆ ಪ್ರದೇಶದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿದನು. ಅದೇ ಇಂದು ತೈವಾನ್ ಎಂಬ ಹೆಸರಿನ ದೇಶವಾಗಿದೆ. ೧೯೪೯ರ ಅಕ್ಟೋಬರ್ ಒಂದರಂದು ಮಾವೋ ಬೀಜಿಂಗ್ ನಗರದಲ್ಲಿ ತನ್ನ ಪ್ರಮುಖ ಅನುಯಾಯಿಗಳಾದ ಚೌಎನ್‌ಲೇ, ಚೂತೆ ಮತ್ತಿತರರ ಜೊತೆಗೂಡಿ ತಿಯಾನ್ ಅನ್‌ಮೆನ್ ಚೌಕದಲ್ಲಿ ನಡೆದ ಒಂದು ಸರಳ ಸಮಾರಂಭದಲ್ಲಿ ಹೊಸ ನಾಡಿನ–ಚೀನೀ ಗಣತಂತ್ರದ – (People's Republic of China) ಉದಯವನ್ನು ಸಾರಿದನು.

ಅಧ್ಯಾಯ ೪

'ಛೇರ್ಮನ್' ಮಾವೋ

೧೯೪೯ರ ಅಕ್ಟೋಬರ್ ಒಂದರಿಂದ ತನ್ನ ಜೀವನದ ಕೊನೆಯ ದಿನದ (೧೯೭೬ರ ಸೆಪ್ಟೆಂಬರ್ ೧೨)ವರೆಗೂ ಮಾವೋತ್ಸೆ ತುಂಗ್ ಛೇರ್ಮನ್ ಮಾವೋ ಎಂದೇ ತನ್ನ ನಾಡಿನಲ್ಲಿ ಹಾಗೂ ಪ್ರಪಂಚದಲ್ಲೆಡೆಯಲ್ಲಿ ಮಾನ್ಯತೆಯನ್ನು ಪಡೆದಿದ್ದನು. ಈ ಕಾಲ ಘಟ್ಟದಲ್ಲಿ ಚೀನವು ಹಲವು ಬದಲಾವಣೆಗಳನ್ನು ಕಂಡಿತು. ಸಾವಿರಾರು ವರ್ಷದ ಪರಂಪರೆಯ ಹಿಡಿತದಲ್ಲಿರುವ ಒಂದು ದೇಶದ ಜನರನ್ನು ಹೊಸ ಆಲೋಚನಾ ಪದ್ಧತಿಗೆ ಒಗ್ಗುವಂತೆ ಮಾಡುವುದು ಅಷ್ಟು ಸುಲಭದ ಮಾತಲ್ಲ. ಈ ವಿಷಯದಲ್ಲಿ ಮಾವೋ ಆಗಲಿ ಚೀನದ ಕಮ್ಯುನಿಸ್ಟ್ ಪಕ್ಷವಾಗಲೀ ಸಂಪೂರ್ಣ ವಿಜಯಿಗಳಾಗಿದ್ದಾರೆಂದು ಹೇಳಲು ಬರುವುದಿಲ್ಲ. ಮಾವೋ ಛೇರ್ಮನ್ ಆಗಿದ್ದ ಸುಮಾರು ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಆ ದೇಶವು ಆಶ್ಚರ್ಯಕರ ರೀತಿಯಲ್ಲಿ ಎಲ್ಲ ರಂಗಗಳಲ್ಲಿಯೂ ಅಭಿವೃದ್ಧಿಯನ್ನು ಸಾಧಿಸಿತು. ಅದೇ ಸಮಯದಲ್ಲಿ ಹೇಳಬೇಕಾಗಿರುವ ಮತ್ತೊಂದು ಮಾತೆಂದರೆ ಸರಕಾರವು ಹಾಕಿಕೊಂಡಿದ್ದ ಕೆಲವು ಯೋಜನೆಗಳು ಒಂದೊಂದು ಬಾರಿ ಅತಿ ಮಹತ್ವಾಕಾಂಕ್ಷೆಯವೂ ಆಗಿದ್ದವು. ಈ ಕಾಲ ಘಟ್ಟದ ರಾಜಕೀಯ

ವಾತಾವರಣದ ಬಗ್ಗೆಯೂ ಸಾಕಷ್ಟು ವಾದ ವಿವಾದ ನಡೆದಿದೆ. ಉದಾಹರಣೆಗೆ ಮಾವೋನಿಂದಲೇ ಪ್ರೇರಿತರಾದ ಅರವತ್ತನೆಯ ದಶಕದಲ್ಲಿ ನಡೆದ ಸಾಂಸ್ಕೃತಿಕ ಕ್ರಾಂತಿಯ ಸಂದರ್ಭದಲ್ಲಿ ನಡೆದವೆನ್ನಲಾದ ಕೆಲವು ಅತಿರೇಕಗಳಿಂದಾಗಿ ಮಾವೋ ಸ್ವತಃ ಆ ಕ್ರಾಂತಿಗೆ ತಾನು ಕೊಟ್ಟ ಕರೆಯನ್ನು ಹಿಂತೆಗೆದುಕೊಳ್ಳಬೇಕಾಯಿತೆಂದು ಹೇಳಲಾಗುತ್ತಿದೆ. ಆದರೆ ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಚೀನದ ಸಮಾಜವು ಪೂರ್ತಿಯಾಗಿ ಕಮ್ಯುನಿಸ್ಟ್ ಸಮಾಜವಾಗಿ ಪರಿವರ್ತಿತ ವಾಗಲು ಇನ್ನೂ ಸಿದ್ಧವಿರಲಿಲ್ಲವೆಂಬುದನ್ನು ಮಾವೋ ಅರ್ಥ ಮಾಡಿಕೊಂಡಿದ್ದ. ರಾಜಕೀಯ ಹಾಗೂ ಆರ್ಥಿಕ ರಂಗಗಳಲ್ಲಿ ಉಂಟಾಗುವ ಕ್ರಾಂತಿಯ ಜೊತೆಜೊತೆಗೆ ಸಾಂಸ್ಕೃತಿಕ ಕ್ರಾಂತಿಯ ಅವಶ್ಯಕತೆಯೂ ಇದೆ. ಸಾಮ್ಯವಾದಿ ಸಂಸ್ಕೃತಿ ಸಮಾಜದಲ್ಲಿ ನೆಲೆಯೂರಬೇಕಾದರೆ ಜನರು ಸಾಮ್ಯವಾದಿ ಚಿಂತನೆಯನ್ನು ತಮ್ಮ ಅಸ್ತಿತ್ವದ ಅಂಗವನ್ನಾಗಿ ಸ್ವೀಕರಿಸಬೇಕು. ಹೀಗಾದಾಗ ಮಾತ್ರ ಒಂದು ಸಮಾಜ ಮೊದಲು ಸಮಾಜವಾದಿ ಹಂತವನ್ನು ತಲುಪಿ ಮುಂದೆ ಸಾಮ್ಯವಾದಿ ಮಟ್ಟಕ್ಕೆ ಏರಬಹುದು. ಈ ವಾಸ್ತವವನ್ನು ತಿಳಿದಿದ್ದರಿಂದಲೇ ಮಾವೋ ತನ್ನ ಅಧಿಕಾರದ ಅವಧಿಯಲ್ಲಿ ಜನರಲ್ಲಿ ಹೊಸ ಹೊಸ ಯೋಚನೆಗಳನ್ನು ಹರಡುತ್ತಿದ್ದ. "ನೂರು ಹೂಗಳು ಅರಳಲಿ, ನೂರು ಯೋಚನೆಗಳು ಮೊಳಗಲಿ" ಎನ್ನುವ ಚಳುವಳಿಯು ಮಾವೋನ ಈ ಆಲೋಚನಾ ಶೈಲಿಯನ್ನು ಪ್ರತಿಫಲಿಸುತ್ತದೆ. ಜನರಲ್ಲಿ ಸ್ವತಂತ್ರವಾಗಿ ಯೋಚಿಸಬಲ್ಲ ಶಕ್ತಿಯು ಹೆಚ್ಚಲೆಂದು ಅವರು ತಮ್ಮ ಅನಿಸಿಕೆಗಳನ್ನು ನಿರ್ಭಯವಾಗಿ ವ್ಯಕ್ತಪಡಿಸುವ ಅವಕಾಶವನ್ನು ಕಲ್ಪಿಸಿಕೊಡಲಾಯಿತು. ಆದರೆ ಇಂಥ ಅವಕಾಶವನ್ನು ಉಪಯೋಗಿಸಿಕೊಂಡು ಸಾಮ್ಯವಾದೀ ವಿರೋಧಿಗಳು ಸರಕಾರವನ್ನು, ಅವರ ಸಾಧನೆಗಳನ್ನು ಟೀಕಿಸಿ ಚೀನವನ್ನು ಮತ್ತೆ ಬಂಡವಾಳಶಾಹಿಯ ತೆಕ್ಕೆಗೆ ತರುವ ಪ್ರಯತ್ನಗಳನ್ನು ನಡೆಸಿದ್ದರಿಂದ "ನೂರು ಹೂಗಳು'

ಯೋಜನೆಯನ್ನು ಅರ್ಥಕ್ಕೆ ನಿಲ್ಲಿಸಬೇಕಾಯಿತು. ಸಾಮಾನ್ಯವಾಗಿ ಹಲವು ಕಡೆ ನಡೆಯುವಂತೆ ಸಮಾಜದ ಪ್ರಮುಖ ವ್ಯಕ್ತಿಯಾಗಿ ಹಾಗೂ ಅವರ ನೇತಾರನಾಗಿದ್ದವನು, ತನ್ನ ಜನರ ಯೋಚನಾ ಮಟ್ಟಕ್ಕಿಂತಲೂ ಹೆಚ್ಚಿನ ಮಟ್ಟವನ್ನು ಹೊಂದಿದ್ದರೆ, ಅದನ್ನು ಜನರು ಸರಿಯಾದ ರೀತಿಯಲ್ಲಿ ಅರ್ಥೈಸದೇ ಹೋದಾಗ ನಡೆಯುವ ಅನಾಹುತವೇ ಚೀನದಲ್ಲೂ ನಡೆಯಿತೆಂದು ಹೇಳಬಹುದು. ಕ್ರಾಂತಿಯ ಹೊಸದರಲ್ಲಿ ಮತ್ತೆ ಹಲವು ವರ್ಷಗಳ ಕಾಲ ಚೀನದಲ್ಲಿ ಏನು ನಡೆಯಿತೆನ್ನುವುದರ ಬಗ್ಗೆ ಭಿನ್ನಾಭಿಪ್ರಾಯಗಳು ಮೂಡಿಬಂದಿವೆ. ಬಂಡವಾಳಶಾಹಿ ಮನೋಧರ್ಮದವರು ಆಗಿನ ವಿದ್ಯಮಾನಗಳನ್ನು ಸಂದೇಹದಿಂದ ನೋಡಿದರೆ, ಸಾಮ್ಯವಾದಿಗಳು ಅವುಗಳನ್ನು ಇತ್ಯಾತ್ಮಕವಾದ ಬೆಳವಣಿಗೆಗಳೆಂದೇ ತಿಳಿಯುತ್ತಾರೆ. ಮಾವೋನ ನಂತರದ ಕಾಲದಲ್ಲಿ, ಮುಖ್ಯವಾಗಿ ಈಗ ಚೀನದ ಸಮಾಜದಲ್ಲಿ ಕಂಡುಬರುತ್ತಿರುವ ಹೊಸ ಆಗುಹೋಗುಗಳನ್ನು ಮುಂದೆ ಬರುವ ಇತಿಹಾಸಕಾರರು ಅಧ್ಯಯನ ಮಾಡುವಾಗ ಚೀನದ ಸಮಾಜದ ಮೇಲೆ ಮಾವೋನ ಪ್ರಭಾವವನ್ನು ಗಣನೆಗೆ ತೆಗೆದುಕೊಳ್ಳಲೇ ಬೇಕು. ಆಗ ಮಾತ್ರ ಆ ಅಧ್ಯಯನವು ಪರಿಪೂರ್ಣವಾಗುತ್ತದೆ.

●

ಅಧ್ಯಾಯ ೫

ಮಾವೋ ಮತ್ತು ಮಾರ್ಕ್ಸ್‌ವಾದ

ಮಾರ್ಕ್ಸ್‌ವಾದ ಹಾಗೂ ಮಾರ್ಕ್ಸ್‌ವಾದಿಗಳ ಬಗ್ಗೆ ಜನರಲ್ಲಿ ಹರಡಿರುವ ಪೂರ್ವಗ್ರಹದಿಂದಾಗಿ ಸಾಧಾರಣವಾಗಿ ಮಾರ್ಕ್ಸ್‌ವಾದಿಗಳನ್ನು ಸೂತ್ರಾಂಧರೆಂದು ಕರೆಯುವುದುಂಟು. ಮಾರ್ಕ್ಸ್‌ನ ಗತಿತಾರ್ಕಿಕವಾದ ಹಾಗೂ ಚಾರಿತ್ರಿಕ ಭೌತವಾದಗಳನ್ನು ಮಾನವನ ಚರಿತ್ರೆಯನ್ನು ವೈಜ್ಞಾನಿಕವಾಗಿ ಅರ್ಥೈಸಲು ಬಳಸಬಹುದಾದ ಸಾಧನೆಗಳನ್ನಾಗಿ ಸ್ವೀಕರಿಸುವ ಬದಲು ಮಾರ್ಕ್ಸ್ ಹೇಳಿದ ಮಾತುಗಳನ್ನೇ ಅಂತಿಮ ಸತ್ಯಗಳನ್ನಾಗಿ ಒಪ್ಪಿಕೊಳ್ಳುತ್ತಾರೆಂದು ಮಾರ್ಕ್ಸ್‌ವಾದಿಗಳನ್ನು ದೂರುವುದುಂಟು. ಆದರೆ ಇಂಥ ಟೀಕೆ ಮಾವೋನ ವಿಚಾರದಲ್ಲಿ ಸಾಧ್ಯವೇ ಇಲ್ಲ. ಅವನ ವೈಚಾರಿಕತೆಯನ್ನು ಪರಿಶೀಲಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ಮಾರ್ಕ್ಸ್‌ನ ವೈಜ್ಞಾನಿಕ ಚಿಂತನೆಯನ್ನು ಚೀನದ ಸ್ಥಿತಿಗತಿಗಳಿಗೆ ಅನುಸಾರವಾಗಿ ಹೊಂದಿಸಿಕೊಂಡು ತನ್ನ ಸಮಾಜದ ಆಗುಹೋಗುಗಳಲ್ಲಿನ ಗತಿತಾರ್ಕಿಕತೆಯನ್ನು ಗಮನಿಸಿ ಆ ಮೂಲಕ ಆ ಸಮಾಜವನ್ನು ಅರ್ಥ ಮಾಡಿಕೊಳ್ಳಲು ನಡೆಸಿದ ಪ್ರಯತ್ನ ಮಾವೋನ ಹೆಗ್ಗಳಿಕೆ. ಮಾರ್ಕ್ಸ್‌ವಾದವೆಂದರೆ ಏನೆಂಬುದನ್ನು ತನ್ನ ಜನರಿಗೆ, ಮುಖ್ಯವಾಗಿ ಕಮ್ಯುನಿಸ್ಟ್ ಕಾರ್ಯಕರ್ತರಿಗೆ ತಿಳಿಯಪಡಿಸಲು ಮಾವೋ

ಹಲವಾರು ಬರಹಗಳ ಮೂಲಕ ಯತ್ನಿಸಿದ್ದಾನೆ. ಅವುಗಳಲ್ಲಿ ಪ್ರಮುಖವಾದ 'ಚೀನ ಸಮಾಜದಲ್ಲಿ ವರ್ಗಗಳ ವಿಶ್ಲೇಷಣೆ' 'ನೂತನ ಪ್ರಜಾಪ್ರಭುತ್ವ', 'ವೈರುಧ್ಯಗಳನ್ನು ಕುರಿತು' ಮುಂತಾದ ಲೇಖನಗಳು ಮಾರ್ಕ್ಸ್‌ವಾದಕ್ಕೆ ಮಾವೋನ ಬದ್ಧತೆ ಹಾಗೂ ಅದೇ ಸಮಯದಲ್ಲಿ ಅವನು ತನ್ನ ಸಮಾಜದ ಬಗೆಗೆ ಹೊಂದಿದ್ದ ಮುಕ್ತ ಮನಸ್ಸನ್ನು ಸ್ಫುಟವಾಗಿ ಪ್ರದರ್ಶಿಸುತ್ತವೆ.

'ಚೀನಾ ಸಮಾಜದಲ್ಲಿ ವರ್ಗಗಳ ವಿಶ್ಲೇಷಣೆ' ಎನ್ನುವ ಲೇಖನವು ೧೯೨೬ರಲ್ಲಿ ಚೀನಾ ಕಮ್ಯುನಿಸ್ಟ್ ಪಾರ್ಟಿಯ ಸದಸ್ಯರಿಗಾಗಿ ಬರೆದದ್ದಾಗಿದೆ. ಈ ಲೇಖನದಲ್ಲಿ ಮಾವೋ ಚೀನದ ಸಮಾಜವನ್ನು ವಿಂಗಡಿಸಿ ಎಲ್ಲ ವರ್ಗಗಳ ಲಕ್ಷಣಗಳನ್ನು ವಿವರಿಸಿದ್ದಾನೆ. ಇಂಥ ಪ್ರಯತ್ನವು ಅಂದಿನ ದಿನಗಳಲ್ಲಿ ಅತಿ ಅಗತ್ಯವಾಗಿತ್ತು ಹಾಗೂ ಆ ದಿಕ್ಕಿನಲ್ಲಿ ಮೊದಲ ಹೆಜ್ಜೆಯೂ ಆಗಿತ್ತು. ಚೀನದ ಕಮ್ಯುನಿಸ್ಟರಿಗೆ ತಮ್ಮ ಮಿತ್ರರಾರು ಅಥವಾ ಶತೃಗಳಾರು ಎಂಬುದು ಅರ್ಥವಾಗಬೇಕಾದರೆ ಈ ರೀತಿಯ ವರ್ಗ ವಿಭಜನೆಯ ಅಗತ್ಯವಿತ್ತು. ಭೂಮಾಲೀಕ ದಲ್ಲಾಳಿವರ್ಗ, ಮಧ್ಯಮ ಬಂಡವಾಳಶಾಹಿ, ಚಿಲ್ಲರೆ ಬಂಡವಾಳಶಾಹಿ, ಅರೆಶ್ರಮಜೀವಿ ಮತ್ತು ಶ್ರಮಜೀವಿ–ಹೀಗೆ ಮಾವೋ ತನ್ನ ಸಮಕಾಲೀನ ಸಮಾಜವನ್ನು ವಿಂಗಡಿಸಿದ್ದಾನೆ. ಚೀನದಲ್ಲಿ ಕ್ರಾಂತಿಗಾಗಿ ಕಮ್ಯುನಿಸ್ಟ್ ಪಕ್ಷವು ರಾಷ್ಟ್ರೀಯವಾದಿ ಪಕ್ಷದ ಜೊತೆ ಮೈತ್ರಿಯನ್ನು ಬೆಳಿಸಲು ಸಿದ್ಧವಿದ್ದ ಕಾಲವದು. ಇಂಥ ಸಂದರ್ಭದಲ್ಲಿ ತನ್ನ ಪಕ್ಷದ ಜನರನ್ನು ಸರಿಯಾದ ಮಾರ್ಗದಲ್ಲಿ ನಡೆಸಲು, ಅವರಲ್ಲಿ ಅಗತ್ಯ ಸಾಮಾಜಿಕ ಅರಿವನ್ನು ಮೂಡಿಸಲು ಮಾವೋ ಈ ಲೇಖನವನ್ನು ಬರೆದನು. ಆದರೆ ಮುಂದೆ ಈ ಪುಟ್ಟ ಲೇಖನವೇ ದಿಕ್ಸೂಚಿಯಂತಾಗಿ ಚೀನದ ಕ್ರಾಂತಿಕಾರಿಗಳನ್ನು ಸರಿಯಾದ ದಾರಿಯಲ್ಲಿ ನಡೆಯುವಂತೆ ಮಾಡಿತು. ಅರೆಶ್ರಮಜೀವಿ ವರ್ಗ ಹಾಗೂ ಶ್ರಮಜೀವಿ ವರ್ಗಗಳು ಹೇಗೆ ಕ್ರಾಂತಿಯ ಎಲ್ಲ ಹಂತಗಳಲ್ಲಿಯೂ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತವೆ

ಮತ್ತು ಹೇಗೆ ಈ ವರ್ಗಗಳು ಒಂದು ಮಿತಿಯೊಳಗೆ ಬೇರೆ ವರ್ಗಗಳ ಸಹಕಾರವನ್ನು ಪಡೆಯಬೇಕೆಂಬ ವಿಷಯಗಳನ್ನು ವಿವರವಾದ ಚರ್ಚೆಗೆ ಒಳಪಡಿಸಲಾಗಿದೆ. ಚೀನಾಕ್ರಾಂತಿಯ ವಿವಿಧ ಹಂತಗಳ ಅಧ್ಯಯನವಲ್ಲಿ ಈ ಲೇಖನವು ಅತ್ಯಂತ ಮಹತ್ವವನ್ನು ಪಡೆಯುತ್ತವೆ.

'ನೂತನ ಪ್ರಜಾಪ್ರಭುತ್ವ'ವೆಂಬ ಮತ್ತೊಂದು ಲೇಖನವು ಚೀನವ ಭವಿಷ್ಯದ ಬಗ್ಗೆ ಮಾವೋ ಹೊಂದಿದ್ದ ಯೋಜನೆಯ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ. ೧೯೨೬ರಲ್ಲಿ ಮಾವೋ ಬರೆದ 'ಚೀನ ಸಮಾಜದಲ್ಲಿ ವರ್ಗಗಳ ವಿಶೇಷಣೆ'ಯ ಹಂತದಿಂದ ೧೯೪೦ರ 'ನೂತನ ಪ್ರಜಾಪ್ರಭುತ್ವದ ವರೆಗೆ' ಮಾವೋ ಮತ್ತು ಅವನ ಪಕ್ಷ ಹಲವು ಮಜಲುಗಳನ್ನು ದಾಟಿ ಬಂದಿತ್ತು. ಮುಖ್ಯವಾಗಿ ಈ ಹೊತ್ತಿಗೆ ಕಮ್ಯುನಿಸ್ಟ್ ಪಕ್ಷವು ಬೇರೆಯವರ ಅವಲಂಬನೆಯಿಲ್ಲದೆ ತನ್ನ ಶಕ್ತಿಯನ್ನೇ ಆಧರಿಸಿ ಚೀನದಲ್ಲಿ ಕ್ರಾಂತಿಯನ್ನು ವಾಸ್ತವವನ್ನಾಗಿಸುವ ಸಾಧ್ಯತೆಗಳನ್ನು ಕಾಣುವ ಹಂತವನ್ನು ತಲುಪಿತ್ತು. ಹೀಗಾಗಿ 'ನೂತನ ಪ್ರಜಾಪ್ರಭುತ್ವ'ದಲ್ಲಿ ಮಾವೋ ತನ್ನ ಚಿಂತನೆಗಳು ಹಾಗೂ ನಿಲುವನ್ನು ಮತ್ತಷ್ಟು ಸ್ಪಷ್ಟವಾಗಿ ಪ್ರಕಟಪಡಿಸುವ ಅಗತ್ಯ ಒದಗಿ ಬಂದಿತ್ತು.

೧೯೪೦ರ ಹೊತ್ತಿಗೆ ಜಗತ್ತಿನಾದ್ಯಂತ ಹೊಸ ಸಂದರ್ಭಗಳು ಸೃಷ್ಟಿಯಾಗಿದ್ದವು. ಆ ಹೊತ್ತಿಗೆ ಜಗತ್ತಿನ ಹಲವು ದೇಶಗಳಲ್ಲಿ ಸಮಾಜವಾದಿ ಚಳುವಳಿ ಹಾಗೂ ಕ್ರಾಂತಿ ಘಟಿಸಿತ್ತು. ಚೀನಾದ ಸಮಾಜವೂ ಸಹ ಸಮಾಜವಾದಿ ಚಳುವಳಿಯ ಹಾದಿಯಲ್ಲಿ ನಡೆಯುತ್ತಿದ್ದು ಹಲವು ಅಡಚಣೆಗಳ ನಡುವೆ ಕ್ರಾಂತಿಯ ದಿಕ್ಕಿನಲ್ಲಿ ಸ್ಪಷ್ಟ ಹೆಜ್ಜೆಗಳನ್ನು ಇಡಲಾರಂಭಿಸಿತ್ತು. ಇಂಥ ಸನ್ನಿವೇಶದಲ್ಲಿ ಪ್ರಪಂಚದ ಹಾಗೂ ಚೀನಾದ ಸ್ಥಿತಿಗತಿಗಳನ್ನು ವಿಶ್ಲೇಷಿಸಿ ಜನತೆಗೆ ಸ್ಪಷ್ಟವಾದ ಹಾದಿಯನ್ನು ತೋರಿಸುವ ಜವಾಬ್ದಾರಿ ಮಾವೋನ ಮೇಲಿತ್ತು. ಪ್ರಪಂಚದ ರಾಜಕೀಯ ಆರ್ಥಿಕ ಬೆಳವಣಿಗೆಗಳ ಭಾಗವಾಗಿಯೇ ಚೀನವಲ್ಲಿಯೂ ಹಲವು ಘಟನೆಗಳು ನಡೆದವೆಂದು ವಾದಿಸುವ ಮಾವೋ

ಜಪಾನೀಯರು ಚೀನವನ್ನು ಆಕ್ರಮಿಸಿದ್ದನ್ನು ಈ ದೃಷ್ಟಿಯಿಂದಲೇ ನೋಡುತ್ತಾನೆ. ಜಾಗತಿಕ ಬಂಡವಾಳಶಾಹಿ ಹಾಗೂ ಪಸಾಹತುಶಾಹಿ ಶಕ್ತಿಗಳಲ್ಲಿ ಒಂದಾಗಿದ್ದ ಜಪಾನಿನ ಜೊತೆ ಚೀನದಲ್ಲಿನ ಕೆಲವರು ಬಂಡವಾಳಶಾಹಿಗಳು ಸೇರಿ ಚೀನದ ಸಮಾಜವನ್ನು ಲೂಟಿ ಮಾಡಲು ಪ್ರಯತ್ನಿಸುತ್ತಿದ್ದರು. ಇಂಥ ಲೂಟಿಯನ್ನು ತಡೆಯಲು ಕ್ರಾಂತಿಕಾರಿಗಳು ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಈ ಶೋಷಕ ಶಕ್ತಿಗಳಿಗೆ ವಿರೋಧವನ್ನು ಒಡ್ಡುತ್ತಿದ್ದರು. ಮಾವೋ ಈ ಲೇಖನದಲ್ಲಿ ಬಂಡವಾಳಶಾಹಿಗಳು ಮತ್ತು ಕಮ್ಯುನಿಸ್ಟರ ನಡುವಿನ ವೈರುಧ್ಯಗಳನ್ನು ವಿವರವಾದ ವಿಶ್ಲೇಷಣೆಗೆ ಒಳಪಡಿಸುತ್ತಾನೆ. ಈ ಲೇಖನ ಪ್ರಕಟವಾಗುವ ವೇಳೆಗೆ ಚೀನಾದ ಬಹುಪಾಲು ಪ್ರದೇಶವು ಕಮ್ಯುನಿಸ್ಟರ ಪ್ರಭಾವಕ್ಕೆ ಒಳಪಟ್ಟಿತ್ತು. ಆದರೆ ಈ ವಿಷಯದಲ್ಲಿ ತುಂಬ ಜಾಗರೂಕರಾಗಿರುವಂತೆ ತನ್ನ ಸಹಚರರಿಗೆ ಮಾವೋ ಸೂಚನೆ ನೀಡುತ್ತಾನೆ. ಚೀನಾದಲ್ಲಿ ನಡೆದಿರುವುದು ಸಮಾಜ ವಾದಿ ಕ್ರಾಂತಿಯೆಂದು ತಿಳಿಯುವುದು ಕೇವಲ ಅತ್ಯುತ್ಸಾಹ ಅಥವಾ 'ಅತಿವಾದ'ವಾಗುತ್ತದೆಂಬುದು ಮಾವೋನ ತಿಳುವಳಿಕೆಯಾಗಿದೆ.

ಸಮಾಜವಾದಿ ಕ್ರಾಂತಿಯು ಸಾಧ್ಯವಾಗುವುದಕ್ಕೂ ಮೊದಲು ಪ್ರಜಾತಾಂತ್ರಿಕ ಕ್ರಾಂತಿ ನಡೆಯಬೇಕಾದ್ದು ಚೀನದಂತಹ ಸಮಾಜಗಳಲ್ಲಿ ಅಗತ್ಯವಾಗುತ್ತದೆಂಬುದು ಮಾವೋನ ಸಿದ್ಧಾಂತ. ಸಮಾಜವಾದಿ ಕ್ರಾಂತಿಗಳಲ್ಲಿ ಕಾರ್ಮಿಕ ವರ್ಗವು ಪ್ರಮುಖ ಪಾತ್ರವನ್ನು ವಹಿಸಬೇಕಾಗುತ್ತದೆ. ಆದರೆ ಪ್ರಜಾತಾಂತ್ರಿಕ ಕ್ರಾಂತಿಯಲ್ಲಿ ರಾಷ್ಟ್ರೀಯ ಬಂಡವಾಳಶಾಹಿ ಮತ್ತು ಮಧ್ಯಮ ವರ್ಗಗಳೂ ಸಹ ಮುಖ್ಯ ಪಾತ್ರವನ್ನು ಪಡೆಯುವ ಸಾಧ್ಯತೆಯಿದೆ. ಚೀನದಲ್ಲಿ ಅಲ್ಲಿಯವರೆಗೂ ಘಟಿಸಿದ್ದ ವಿಷಯಗಳನ್ನು ಗಮನದಲ್ಲಿಟ್ಟುಕೊಂಡಿರುವ ಮಾವೋ ಬಾಹ್ಯಶಕ್ತಿಗಳನ್ನು, ಅದರಲ್ಲೂ ಜಪಾನಿನಂತಹ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಸೋಲಿಸಲು ರೈತ ಕಾರ್ಮಿಕ ವರ್ಗವು ಆಂತರಿಕವಾಗಿ ತನ್ನ

ಜೊತೆ ವೈರುಧ್ಯಗಳನ್ನು ಹೊಂದಿರುವ ಮಧ್ಯಮ ವರ್ಗ ಹಾಗೂ ರಾಷ್ಟ್ರೀಯ ಬಂಡವಾಳಶಾಹಿಗಳ ಸಹಕಾರವನ್ನು ಪಡೆಯಬೇಕಾಗಬಹುದೆಂದು ಹೇಳುತ್ತಾನೆ. ಆದರೆ ಈ ಚಳುವಳಿಯು ಇಲ್ಲಿಗೇ ನಿಲ್ಲದೆ ಮುಂದೆ ನಡೆದು ಸಮಾಜವಾದಿ ಕ್ರಾಂತಿಯಾಗಿ ಪರಿವರ್ತನೆಗೊಳ್ಳಬೇಕೆಂಬುದು ಮಾವೋನ ವಾದ. ಚೀನದ ಅಂದಿನ ಚರಿತ್ರೆಯನ್ನು ಗಮನಿಸಿದಾಗ ಮಾವೋ ಮಾರ್ಕ್ಸ್‌ವಾದಿ ನಿಲುವಿನಿಂದ ಮಾಡಿದ ಈ ವಿಶ್ಲೇಷಣೆಯು ಅರ್ಥಪೂರ್ಣವಾಗುತ್ತದೆ.

ಸಮಾಜವಾದಿ ಕ್ರಾಂತಿಯು ಸಾಧ್ಯವಾದ ಮೇಲೆ ಕಮ್ಯುನಿಸ್ಟರು ತಮ್ಮ ನಿಷ್ಠೆಯನ್ನು ಇನ್ನೂ ಗಟ್ಟಿಗೊಳಿಸಿ ಸಾಮ್ಯವಾದೀ ಸಮಾಜವನ್ನು ಸ್ಥಾಪಿಸುವ ದಿಸೆಯಲ್ಲಿ ಎಲ್ಲ ಪ್ರಯತ್ನಗಳನ್ನು ನಡೆಸಬೇಕಾಗುತ್ತದೆ. ಆದರೆ ಅದಕ್ಕೂ ಮೊದಲು ಸ್ಥಾಪಿತವಾಗುವ ಸೀಮಿತ ಸಾಧ್ಯತೆಗಳಿರುವ ನೂತನ ಪ್ರಜಾತಾಂತ್ರಿಕ ಕ್ರಾಂತಿಯ ಲಕ್ಷಣಗಳನ್ನೂ ಹಾಗೂ ಪ್ರಜಾತಾಂತ್ರಿಕ ಸಮಾಜದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ವಿವರಗಳನ್ನು ಅರ್ಥ ಮಾಡಿಕೊಂಡಾಗ ಮಾತ್ರ ಈ ನಿರ್ದಿಷ್ಟ ಗುರಿಯ ಕಡೆಗೆ ನಡೆಯುವುದು ಸಾಧ್ಯವಾಗುತ್ತದೆ. 'ನೂತನ ಪ್ರಜಾಪ್ರಭುತ್ವ'ದಲ್ಲಿ ಮಾವೋ ಈ ದೃಷ್ಟಿಯಿಂದಲೇ ತನ್ನ ಸಮಕಾಲೀನ ಸಮಾಜದ ಎಲ್ಲ ಆಯಾಮಗಳನ್ನು ವಿಶ್ಲೇಷಿಸಿ, ಕಮ್ಯುನಿಸ್ಟರು ನಡೆಯಬೇಕಾದ ದಾರಿಯನ್ನು ಸೂಚಿಸಿದ್ದಾನೆ.

ಇನ್ನು 'ವೈರುಧ್ಯಗಳನ್ನು ಕುರಿತು' ಎನ್ನುವ ಲೇಖನವು ಮಾರ್ಕ್ಸ್‌ವಾದದ ನಿಲುವು ಮೂಲ ಸಿದ್ಧಾಂತವನ್ನು ಕುರಿತಾದದ್ದು. ಸಮಾಜದಲ್ಲಿ ಹಾಗೂ ಚರಿತ್ರೆಯಲ್ಲಿ ಹಲವು ಶಕ್ತಿಗಳ ನಡುವೆ ತುಂಬ ಸ್ಪಷ್ಟವಾಗಿ ಕಂಡುಬರುವ ವೈರುಧ್ಯಗಳ ಅಧ್ಯಯನದ ಮೂಲಕವೇ ಮಾರ್ಕ್ಸ್ ಗತಿತಾರ್ಕಿಕ ಭೌತವಾದವನ್ನು ಪ್ರತಿಪಾದಿಸಿದನು. ಮುಂದೆ ಲೆನಿನ್ ಮತ್ತು ಸ್ಟಾಲಿನ್ ಸಹ ತಮ್ಮ ಕೃತಿಗಳಲ್ಲಿ ಮಾರ್ಕ್ಸ್‌ವಾದದ ಮೂಲಬಿಂದುವಾದ ಈ ಅಂಶವನ್ನು ಸಾಕಷ್ಟು ವಿವರವಾಗಿ

ಪರಿಶೀಲಿಸಿದ್ದಾನೆ. ಮಾವೋ ಸಹ ೧೯೩೭ರಲ್ಲಿ ಬರೆದ ತನ್ನ ಈ ಲೇಖನದಲ್ಲಿ ಇಂಥದೇ ಪ್ರಯತ್ನವನ್ನು ಮುಂದುವರೆಸಿದ್ದಾನೆ.

ಈ ಲೇಖನದ ಪ್ರಾರಂಭದಲ್ಲಿಯೇ ಮಾವೋ ಸ್ಪಷ್ಟಪಡಿಸುವಂತೆ ಆ ಹೊತ್ತಿಗೆ ಚೀನದ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಲ್ಲಿ ತಲೆದೋರಿದ್ದ ಸೂತ್ರಾಂಧತೆಯ ವಿರುದ್ಧ ಅವರನ್ನು ಎಚ್ಚರಿಸುವುದು ಇಲ್ಲಿನ ಪ್ರಮುಖ ಆಶಯವಾಗಿದೆ. ಮಾರ್ಕ್ಸ್‌ವಾದವನ್ನು ವೈಜ್ಞಾನಿಕವಾಗಿ ಅರ್ಥೈಸುವ ಮತ್ತು ಆಚರಿಸುವ ಪ್ರಕ್ರಿಯೆಯಲ್ಲಿ ಸೂತ್ರಾಂಧತೆಗೆ ಎಡೆಯಿಲ್ಲವೆಂಬುದು ಮಾವೋನ ಸ್ಪಷ್ಟ ನಿಲುವಾಗಿತ್ತು. ವೈರುಧ್ಯಗಳನ್ನು ಕುರಿತು ಮಾತನಾಡುವ ಮೊದಲು ಸಾಮಾನ್ಯವಾಗಿ ಜನರ ನಡುವೆ ಚಾಲ್ತಿಯಲ್ಲಿದ್ದ ಭಾವವಾದಿ ಲೋಕ ದೃಷ್ಟಿಯನ್ನು ಪ್ರಸ್ತಾಪಿಸಿ ಈ ದೃಷ್ಟಿಯು ಭೌತವಾದಿ ಲೋಕ ದೃಷ್ಟಿಯಿಂದ ಹೇಗೆ ಭಿನ್ನವಾಗಿರುತ್ತದೆ ಎಂಬುದನ್ನು ಮಾವೋ ವಿವರಿಸುತ್ತಾನೆ. ಭಾವವಾದೀ ಲೋಕ ದೃಷ್ಟಿಯು ಚರಿತ್ರೆಯಲ್ಲಿ ಕಂಡುಬರುವ ಬದಲಾವಣೆಗಳು ಹಾಗೂ ಬೆಳವಣಿಗೆಗಳಿಗೆ ಕಾರಣಗಳನ್ನು ಸಮಾಜದಲ್ಲಿ, ಜನರ ಮಧ್ಯೆ ಹುಡುಕದೆ ಅವುಗಳಿಂದಾಚೆಗೆ ಭೌಗೋಳಿಕ ಅಂಶಗಳಂತಹ ವಿಷಯಗಳಲ್ಲಿ ಕಂಡುಕೊಳ್ಳುವ ಯತ್ನವನ್ನು ನಡೆಸುತ್ತದೆ. ಆದರೆ ಎಲ್ಲ ರೀತಿಯ ಸಾಮಾಜಿಕ ಘಟನೆಗಳಿಗೂ ಕಾರಣವಿರುವುದು ಸಮಾಜದಲ್ಲಿಯೇ, ಅದರೊಳಗಿನ ವೈರುಧ್ಯಗಳಲ್ಲಿಯೇ ಎನ್ನುವುದು ವಸ್ತುನಿಷ್ಠವಾಗಿ, ವೈಜ್ಞಾನಿಕವಾಗಿ ಸಮಾಜವನ್ನು ಅಭ್ಯಸಿಸಿದಾಗ ಮಾತ್ರ ತಿಳಿಯುವುದು. ಒಂದು ಪದಾರ್ಥದಲ್ಲಿ ಉಂಟಾಗುವ ಮಾರ್ಪಾಡುಗಳಿಗೆ ಆ ಪದಾರ್ಥದ ಹೊರಗಿನ ಶಕ್ತಿಗಳೂ ಕಾರಣವಾದರೂ, ಆ ವಿದ್ಯಮಾನಗಳ ಮೂಲ ಆ ಪದಾರ್ಥದಲ್ಲಿಯೇ ಇದೆ ಎನ್ನುವುದು ಇಂಥ ಅಧ್ಯಯನದ ಮೂಲಕ ಮಾತ್ರ ಸಾಧ್ಯವಾಗುತ್ತದೆ.

ವೈರುಧ್ಯಗಳ ಸಾರ್ವತ್ರಿಕತೆ ಹಾಗೂ ನಿರ್ದಿಷ್ಟತೆಗಳ ರೂಪುರೇಷೆಗಳ ತಿಳುವಳಿಕೆಯಿಂದಾಗಿ ಮಾನವನ ಚರಿತ್ರೆಯನ್ನು ಸರಿಯಾದ ದೃಷ್ಟಿಯಿಂದ

ನೋಡುವುದು ಸಾಧ್ಯವಿದೆ. ಎಲ್ಲ ಆಗುಹೋಗುಗಳಲ್ಲಿಯೂ ಈ ವೈರುಧ್ಯಗಳನ್ನು ಕಾಣಬಹುದು. ವೈರುಧ್ಯಗಳ ವಿವರಗಳಲ್ಲಿ ವ್ಯತ್ಯಾಸವಿರಬಹುದೇ ಹೊರತು, ವೈರುಧ್ಯಗಳು ಇಂಥ ಸಂದರ್ಭಗಳಲ್ಲಿ ಇಲ್ಲ ಎನ್ನುವ ಹಾಗಿಲ್ಲ. ಈ ವಿಷಯಗಳನ್ನು ಪ್ರಸ್ತಾಪಿಸುವಾಗ ಮಾವೋ ಮಾರ್ಕ್ಸ್ ಮತ್ತು ಲೆನಿನ್‌ರ ಅಭಿಪ್ರಾಯಗಳನ್ನು ಹೇರಳವಾಗಿ ಉಲ್ಲೇಖಿಸುತ್ತಾನೆ. ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದಲೇ ವಿವಿಧ ಸಮಾಜಗಳನ್ನು, ಅವುಗಳಲ್ಲಿನ ವೈರುಧ್ಯ ತುಂಬಿದ ಘಟಕಗಳನ್ನು ಪರಿಶೀಲಿಸುತ್ತಾನೆ. ಚೀನದ ಸಮಾಜಕ್ಕೂ ಈ ವೈಜ್ಞಾನಿಕ ಅಧ್ಯಯನ ವನ್ನು ಅನ್ವಯಿಸಿ ಅಂದಿನ ತಮ್ಮ ಸಮಾಜವನ್ನು ಅರ್ಥಮಾಡಿಕೊಳ್ಳಲು ಯತ್ನಿಸುತ್ತಿದ್ದ ಕ್ರಾಂತಿಕಾರಿಗಳಿಗೆ ಒಂದು ಸ್ಪಷ್ಟ ಸೈದ್ಧಾಂತಿಕ ನೆಲೆಯನ್ನು ಒದಗಿಸುತ್ತಾನೆ. ತನ್ನ ಮತ್ತೊಂದು ಲೇಖನವಾದ 'ಆಚರಣೆಯ ಕುರಿತು' ಎಂಬಲ್ಲಿ ಹೇಳಿರುವಂತೆ ಎಲ್ಲ ಆಚರಣೆಗಳು ಹಾಗೂ ಸಿದ್ಧಾಂತಗಳು ನಮ್ಮ ಕಾರ್ಯಶೀಲತೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆಂಬ ಮಾತನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಇವರ ಜೊತೆ ಜೊತೆಗೆ ಕಮ್ಯುನಿಸ್ಟ್ ಕಾರ್ಯಕರ್ತರು ವಸ್ತುನಿಷ್ಠವಾಗಿ, ಎಲ್ಲ ಸೂತ್ರಾಂಧತೆಯಿಂದ ದೂರವಿದ್ದು ಸಮಾಜದ ಅಧ್ಯಯನವನ್ನು ಮಾಡುವ ಅಗತ್ಯವನ್ನು ಮಾವೋ ಒತ್ತಿ ಹೇಳುತ್ತಾನೆ. ಸೂತ್ರಾಂಧನಾದ ವ್ಯಕ್ತಿ ಎಂದಿಗೂ ಮಾರ್ಕ್ಸ್‌ವಾದಿಯಾಗಲಾರೆಂಬುದು ಮಾವೋನ ಖಚಿತವಾದ ಅಭಿಪ್ರಾಯ. ಅಂತಿಮವಾಗಿ ಸಮಾಜದ ವಿವಿಧ ಘಟಕಗಳ ನಡುವೆ ವೈರುಧ್ಯಗಳು ಇಲ್ಲವಾಗಬೇಕಾದರೆ ವರ್ಗರಹಿತ ಸಾಮ್ಯವಾದಿ ವ್ಯವಸ್ಥೆಯ ಸ್ಥಾಪನೆಯಿಂದ ಮಾತ್ರ ಸಾಧ್ಯವೆನ್ನುವುದನ್ನು, ಈ ದಿಕ್ಕಿನಲ್ಲಿ ಮಾರ್ಕ್ಸ್‌ವಾದ–ಲೆನಿನ್‌ವಾದಗಳೇ ಕ್ರಾಂತಿಕಾರಿಗಳಿಗೆ ಉತ್ತಮ ಮಾರ್ಗದರ್ಶಕ ಸೂತ್ರಗಳೆನ್ನುವುದನ್ನು ಮಾವೋ ಸ್ಪಷ್ಟಪಡಿಸುತ್ತಾನೆ.

ಅಧ್ಯಾಯ ೬

ಮಾವೋ ಮತ್ತು ಚೀನಾ ಸಮಾಜ

ಮಾವೋನ ಜೀವನದ ವಿವರಗಳನ್ನು ಕುರಿತು ಬರೆದಿರುವ ಸಂದರ್ಭದಲ್ಲಿ ಚೀನದ ಅಂದಿನ ಸಮಾಜದ ಬಗ್ಗೆಯೂ ಕೆಲವು ಮಾತುಗಳನ್ನು ಹೇಳಲಾಗಿದೆ. ಇಲ್ಲಿ ಮಾವೋನ ಯೋಚನಾ ಕ್ರಮವು ಸಮಕಾಲೀನ ಯೋಚನಾಕ್ರಮಕ್ಕಿಂತ ಹೇಗೆ ಬೇರೆಯಾಗಿತ್ತು ಎಂಬುದನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಚೀನಾದಲ್ಲಿ ಶತಮಾನಗಳ ಕಾಲ ಕನ್ಫ್ಯೂಷಿಯಸ್ ಹಾಗೂ ಲೋಟ್ಸೆ–ಪ್ರಮುಖವಾಗಿ ಕನ್ಫ್ಯೂಷಿಯಸ್–ಇವರ ಚಿಂತನೆಗಳ ಪ್ರಭಾವ ಸಮಾಜದ ಮೇಲೆ ಅನಿರ್ಬಂಧಿತವಾಗಿ ಮುಂದುವರೆದಿತ್ತು. ಆ ಪ್ರಭಾವವು ಹತ್ತೊಂಬತ್ತನೆಯ ಶತಮಾನದಲ್ಲಿಯೂ ಅಚ್ಚಳಿಯದೇ ಕಂಡುಬರುತ್ತಿತ್ತು. ಹೊರಗಿನ ಪ್ರಪಂಚದಿಂದ ಭೌಗೋಳಿಕವಾಗಿ ಹಾಗೂ ಬೌದ್ಧಿಕವಾಗಿ ದೂರವಾಗಿಯೇ ಇರಬೇಕೆಂಬ ಚೀನೀಯರ ಪ್ರಯತ್ನದ ಫಲವಾಗಿ ಅವರು ತಮ್ಮದೇ ಆದ ಲೋಕದಲ್ಲಿ ವಾಸಿಸುತ್ತ ಆಧುನಿಕ ಪ್ರಭಾವಗಳಿಗೆ ತಮ್ಮನ್ನು ತಾವು ಒಡ್ಡಿಕೊಳ್ಳಲೇ ಇಲ್ಲ. ಇಂಥ ಸಂಪ್ರದಾಯ ಶರಣ ಸಮಾಜಕ್ಕೆ ಯಾವುದೇ ಹೊಸ ಯೋಚನೆಯನ್ನು ಪರಿಚಯಿಸುವುದು ಸಾಹಸದ ಮಾತೇ ಆಗಿತ್ತು. ಹತ್ತೊಂಬತ್ತನೆಯ

ಶತಮಾನದಲ್ಲಿ ಪರಕೀಯರ ದಾಳಿಗೆ ಒಳಗಾದ ಚೀನೀಯರು ಎಚ್ಚರಗೊಂಡು ತಮ್ಮ ದೇಶದಿಂದಾಚೆ ನಡೆಯುತ್ತಿದ್ದ ವಿದ್ಯಮಾನಗಳನ್ನು ಆಸಕ್ತಿಯಿಂದ ಗಮನಿಸಲು ಆರಂಭಿಸಿದರು. ಪಾಶ್ಚಾತ್ಯ ದೇಶಗಳಿಗೆ ತೆರಳಿ ಅಲ್ಲಿ ವಿದ್ಯೆ ಮತ್ತು ಅನುಭವಗಳನ್ನು ಪಡೆದವರಲ್ಲಿ ಡಾ॥ ಸನ್‌ಯೆಟ್ ಸೆನ್ ಪ್ರಮುಖನಾಗಿದ್ದನು. ಸ್ವದೇಶಕ್ಕೆ ಮರಳಿದ ಮೇಲೆ ಹೊರ ಜಗತ್ತಿನಲ್ಲಿ ತನ್ನನ್ನು ಆಕರ್ಷಿಸಿದ್ದ ಪ್ರಜಾಪ್ರಭುತ್ವದಂತಹ ತತ್ವಗಳನ್ನು ಆಚರಣೆಗೆ ತರಲು ಅವನು ಪ್ರಾಮಾಣಿಕವಾಗಿ ಪ್ರಯತ್ನಿಸಿದನು. ಇಂಥ ಪ್ರಯತ್ನಗಳ ಪರಿಣಾಮವಾಗಿಯೇ ಕೊಮಿಂಟಾಂಗ್ ಪಕ್ಷದ ಉದಯವಾಯಿತು. ಅದು ಹುಟ್ಟಿದಾಗಿನಿಂದ ೧೯೪೮ರಲ್ಲಿ ಚೀನದಲ್ಲಿ ಕಮ್ಯುನಿಸ್ಟ್ ಸರಕಾರ ಸ್ಥಾಪಿಸಲಾಗುವವರೆಗೂ ಆ ದೇಶದಲ್ಲಿ ಕೊಮಿಂಟಾಂಗ್ ಪಕ್ಷವು ಗಮನಾರ್ಹವಾದ ಪ್ರಭಾವನ್ನೇ ಹೊಂದಿತ್ತು..

ಇಂಥ ಸಂದರ್ಭದಲ್ಲಿಯೇ ಮಾವೋ ಚೀನದ ರಾಜಕೀಯವನ್ನು ಪ್ರವೇಶಿಸಿದನು. ಆ ಹೊತ್ತಿಗೆ ಚೀನದಲ್ಲಿ ಕೆಲವರ ಪ್ರಯತ್ನಗಳ ಪರಿಣಾಮವಾಗಿ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯಾಗಿತ್ತು. ಹುನಾನ್ ಪ್ರಾಂತ್ಯದಲ್ಲಿಯೇ ತನ್ನ ಬಾಲ್ಯವನ್ನೆಲ್ಲಾ ಕಳೆದ ಮಾವೋ ಈ ಮೊದಲೇ ತಿಳಿಸಿರುವಂತೆ, ಅಲ್ಲಿ ನಡೆದ ಕೆಲವು ಘಟನೆಗಳಿಂದಾಗಿ ಕಮ್ಯುನಿಸ್ಟ್ ಸಿದ್ಧಾಂತದ ಕಡೆ ಆಕರ್ಷಿತನಾಗಿದ್ದು ಆ ಸಿದ್ಧಾಂತದ ಆಚರಣೆಯ ಮೂಲಕ ಮಾತ್ರ ಚೀನದಲ್ಲಿ ಸಮಗ್ರ ಬದಲಾವಣೆಯನ್ನು ಸಾಧಿಸಬಹುದೆಂಬ ನಿರ್ಧಾರಕ್ಕೆ ಬಂದಿದ್ದನು. ಅದರ ಫಲವಾಗಿ ಕಮ್ಯುನಿಸ್ಟ್ ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ತನ್ನ ಜೀವನದ ಕೊನೆಯ ಗಳಿಗೆಯವರೆಗೂ ಕಮ್ಯುನಿಸ್ಟ್‌ನಾಗಿಯೇ ಉಳಿದನು.

ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತನಾಗಿ ಹಾಗೂ ಮುಂದೆ ಅದರ ಅಧ್ಯಕ್ಷನಾಗಿ ಆ ತತ್ವದ ತಳಹದಿಯ ಮೇಲೆ ಒಂದು ಹೊಸ ಚೀನವನ್ನು

ಕಟ್ಟಲು ಮಾವೋ ಸಾಕಷ್ಟು ಶ್ರಮಿಸಬೇಕಾಯಿತು. ಸಂಪ್ರದಾಯ ಶರಣ ಜನ ಸಮುದಾಯವು ವೈಜ್ಞಾನಿಕ ಸಮಾಜವಾದವನ್ನು ಒಪ್ಪಿಕೊಳ್ಳುವಂತೆ ಮಾಡುವಲ್ಲಿ ಮಾವೋ ಸಾಕಷ್ಟು ಸಮಸ್ಯೆಗಳನ್ನು ಎದುರಿಸಬೇಕಾಯಿತು.

ಚೀನಾದ ಸಮಾಜದ ಮೇಲಿನ ಪ್ರಮುಖವಾದ ಪ್ರಭಾವವೆಂದರೆ ಕನ್ಫ್ಯೂಷಿಯಸ್‌ನದು. ಕ್ರಿ.ಪೂ. ಐದನೆಯ ಶತಮಾನದಲ್ಲಿ ಚೀನಾವನ್ನಾಳಿದ 'ಜೌ' ವಂಶವು ನಿಧಾನವಾಗಿ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದ ಕಾಲದಲ್ಲಿ ವಾಸವಾಗಿದ್ದನು. ಸಾಮಾಜಿಕ ವಿಘಟನೆಯನ್ನು ತಡೆದು ಜನ ಜೀವನದಲ್ಲಿ ಒಂದು ಕ್ರಮವನ್ನುಂಟು ಮಾಡುವ ಪ್ರಯತ್ನವಾಗಿ ಕನ್ಫ್ಯೂಷಿಯಸ್ ಜನರೆಲ್ಲರೂ ಪಾಲಿಸಬೇಕಾದ ಕೆಲವು ಸೂತ್ರಗಳನ್ನು ಸೂಚಿಸಿದನು. ಈ ಕ್ರಮವನ್ನು ಮೀರಿದರೆ ಶಾಂತಿಗೆ ಭಂಗ ಬರುತ್ತದೆಂಬುದು ಸ್ಪಷ್ಟಪಡಿಸಲಾಗಿ ಜನರು ಆ ಸಾಹಸವನ್ನು ಮಾಡಲಿಲ್ಲ. ಈ ಸೂತ್ರಗಳ ಪ್ರಕಾರ ರಾಜನು ಎಲ್ಲರಿಗಿಂತಲೂ ಶ್ರೇಷ್ಠನು; ಅವನನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ. ಅದೇ ರೀತಿಯಲ್ಲಿ ಕುಟುಂಬದ ಯಜಮಾನನ ಮಾತನ್ನು ಮಿಕ್ಕ ಎಲ್ಲರೂ ಮಾನ್ಯ ಮಾಡಬೇಕು. ಸ್ತ್ರೀಯರು ಪುರುಷರನ್ನು ತಮಗಿಂತಲೂ ಉತ್ತಮರೆಂದು ಒಪ್ಪಬೇಕು. ಸೇವಕ ತನ್ನ ಯಜಮಾನನನ್ನು ಪ್ರಶ್ನಿಸುವ ಹಾಗಿಲ್ಲ. ಈ ರೀತಿಯ ಯೋಜನಾಕ್ರಮವನ್ನು ಒಪ್ಪಿದವರಿಂದಲೇ ಬಹಳಷ್ಟು ಕಾಲ ಚೀನದ ಸಮಾಜದ ಆಳ್ವಿಕೆಯು ನಡೆಯುತ್ತಿತ್ತು. ರಾಜರು ಯಾರೇ ಆಗಿರಲಿ ಯಾವುದೇ ರಾಜ ವಂಶವು ಅಧಿಕಾರದಲ್ಲಿರಲಿ ಕನ್ಫ್ಯೂಷಿಯಸ್‌ನ ಈ ನೀತಿ ಸಂಹಿತೆಯಲ್ಲಿ ನುರಿತ ಕೆಲವರು ಅಧಿಕಾರಿಗಳು ಆಡಳಿತ ಯಂತ್ರವನ್ನು ನಡೆಸುತ್ತಿದ್ದರು. ಈ ಅಧಿಕಾರಿಗಳ ಆಯ್ಕೆಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. ಪರಿಣಾಮವಾಗಿ ಅಧಿಕಾರವು ಸಹ ಸಮಾಜದ ಕೆಲ ವರ್ಗಗಳ ಗುತ್ತಿಗೆಯಾಗಿಯೇ ನಿಂತಿತ್ತು. ತಮ್ಮ ಈ ವ್ಯವಸ್ಥೆಯ ಬಗ್ಗೆ ಚೀನದ

ಜನರಲ್ಲಿ ಎಷ್ಟು ಹೆಮ್ಮೆ ಇತ್ತೆಂದರೆ ಹೊರದೇಶಗಳ ಪರಿಚಯವೂ ಅವರಿಗೆ ಆಗೊಮ್ಮೆ ಈಗೊಮ್ಮೆ ಆದಾಗಲೂ ಸಹ ಆ ಅನುಭವಗಳಿಂದ ಏನನ್ನೂ ಕಲಿಯಲು ಅವರು ಸಿದ್ಧರಿರಲಿಲ್ಲ.

ಈ ರೀತಿಯ ಯೋಚನಾಕ್ರಮವು ಚೀನದ ಆಳುವ ವರ್ಗಗಳಿಗೆ ಅತ್ಯಂತ ಸಹಕಾರಿಯಾಯಿತು. ಈ ನೀತಿ ಸಂಹಿತೆಯ ಫಲವಾಗಿ ಸಾಮಾನ್ಯ ಜನರು ತಮ್ಮನ್ನಾಳುವವರ ವಿರುದ್ಧ ಬಂಡೇಳುವುದಿರಲಿ, ಆ ಯೋಚನೆಯನ್ನು ಹತ್ತಿರದಲ್ಲಿ ಸುಳಿಯಗೊಡುತ್ತಿರಲಿಲ್ಲ. ಹೀಗಾಗಿ ಸಮಾಜದಲ್ಲಿ ಬೇರೂರಿದ್ದ ಅಸಮಾನತೆಯನ್ನು ಪ್ರಶ್ನಿಸುವುದೇ ಅಪರಾಧ ವೆಂದು ತಿಳಿಯಲಾಗುತ್ತಿತ್ತು. ಹತ್ತೊಂಬತ್ತನೆಯ ಶತಮಾನದಲ್ಲಿ ಪಾಶ್ಚಾತ್ಯ ದೇಶಗಳು ಚೀನವನ್ನು ತಮ್ಮ ಹಿತಾಸಕ್ತಿಗಳಿಗಾಗಿ ಉಪಯೋಗಿಸಲು ಆರಂಭಿಸಿದಾಗ ಜನರಲ್ಲಿ ತಮ್ಮ ಸ್ಥಿತಿಗತಿಗಳ ಬಗ್ಗೆ ಅರಿವುಂಟಾಗಿ ಅಲ್ಲಿಂದ ಮುಂದೆ ಚೀನಾದ ಸಾಮಾಜಿಕ ರಚನೆಯಲ್ಲಿಯೂ ಹಲವು ಬದಲಾವಣೆಗಳು ಕಂಡು ಬಂದವು. ಮಂಚೂ ವಂಶದ ಭ್ರಷ್ಟ ಆಡಳಿತವನ್ನು ಕೊನೆಗಾಣಿಸಲು ವಿಫಲ ಪ್ರಯತ್ನ ಮಾಡಿದ ತೈಪಿಂಗ್ ಬಂಡಾಯ, ಸನ್‌ಯಟ್ ಸೆನ್‌ನ ಕೊಮಿಂಟಾಂಗ್ ಪಕ್ಷ ಮತ್ತು ಕಮ್ಯೂನಿಸ್ಟ್ ಪಕ್ಷಗಳು ಈ ಬದಲಾವಣೆಯ ಹಾದಿಯಲ್ಲಿ ನಮಗೆ ಕಂಡುಬರುವ ಕೆಲವು ಹಂತಗಳಾಗಿವೆ. ಸಾಮ್ಯವಾದ ಚೀನಕ್ಕೆ ಕಾಲಿಟ್ಟಿದ್ದು ಸ್ವಲ್ಪ ತಡವಾಗಿಯೇ ಎಂದು ಹೇಳಬಹುದು. ಲೆನಿನ್‌ನ ಬರಹಗಳು ಚೀನೀ ಭಾಷೆಗೆ ಅನುವಾದಗೊಂಡಿದ್ದು ೧೯೧೯ ರಲ್ಲಿ. ಕಮ್ಯೂನಿಸ್ಟ್ ಪ್ರಣಾಳಿಕೆಯ ಚೀನೀ ಅವತರಣಿಕೆ ೧೯೨೦ ರಲ್ಲಿ ಪ್ರಕಟವಾಯಿತು. ಆದರೆ ಅದುವರೆಗಾಗಲೇ ಜನರು ಸಾಕಷ್ಟು ದಬ್ಬಾಳಿಕೆ ಮತ್ತು ಶೋಷಣೆಯ ರುಚಿ ನೋಡಿದ್ದರಿಂದ ಸಾಮ್ಯವಾದಿ ಚಿಂತನೆಯ ಕಡೆ ಒಲವು ತೋರಿದರು.

ಇಷ್ಟಾದರೂ ತನ್ನ ಜನರ ಯೋಚನಾಕ್ರಮವನ್ನು ಬದಲಾಯಿಸಲು ಮಾವೋ ಸಾಕಷ್ಟು ಶ್ರಮಿಸಬೇಕಾಯಿತು. ಮುಖ್ಯವಾಗಿ ಜನರನ್ನು

ಕನ್ಫ್ಯೂಷಿಯಸ್‌ನ ಪ್ರಭಾವದ ಪರಿಧಿಯಿಂದ ಆಚೆಗೆ ತರಬೇಕಾಗಿತ್ತು. ಅದಕ್ಕಾಗಿ ಮಾವೋ ಕನ್ಫ್ಯೂಷಿಯಸ್‌ನ ತತ್ವಗಳನ್ನು ಪ್ರಶ್ನಿಸಿದನು. ಶಾಂತಿಯ ಹೆಸರಿನಲ್ಲಿ ಜನರ ಮಧ್ಯೆ ಅಂತರಗಳನ್ನು ಸೃಷ್ಟಿಸಿ, ಆ ಅಂತರಗಳನ್ನು ಮುಂದುವರೆಸುವಂಥ ಸಿದ್ಧಾಂತ ಮಾರ್ಕ್ಸ್‌ವಾದಿಯಾದ ಮಾವೋಗೆ ಸರಿಕಾಣಲಿಲ್ಲ. ಸಮಾಜವಾದಿ ಸಮಾಜದಲ್ಲಿ ಎಲ್ಲರೂ ಸಮಾನರು ಎಂಬ ಮೂಲಸೂತ್ರವನ್ನು ಒಪ್ಪಿಕೊಳ್ಳುವ ಸಮಾಜದ ಸೃಷ್ಟಿಗೆ ಅಗತ್ಯವಾಗಿದ್ದ ವೈಚಾರಿಕ ಕ್ರಾಂತಿಯನ್ನು ಮಾವೋ ಬಯಸಿದನು. ಆದರೆ ವ್ಯವಸ್ಥೆಯು ಹಳೆಯ ಕಾಲದ್ದಾಗಿದ್ದು ಜನರ ವಿಚಾರ ಮಾತ್ರ ಬದಲಾಗಬೇಕೆಂದು ಬಯಸುವುದು ಅವೈಜ್ಞಾನಿಕವೆಂದು ಮಾರ್ಕ್ಸ್‌ವಾದಿಯಾದ ಮಾವೋಗೆ ಸ್ಪಷ್ಟವಾಗಿಯೇ ತಿಳಿದಿತ್ತು. ಆದ್ದರಿಂದಲೇ ವ್ಯವಸ್ಥೆಯ ಬದಲಾವಣೆ ಹಾಗೂ ವೈಚಾರಿಕ ಕ್ರಾಂತಿ–ಎರಡೂ ಏಕಕಾಲದಲ್ಲಿ ನಡೆಯಬೇಕೆಂದು ಬಯಸಿ ಅದಕ್ಕಾಗಿ ಪ್ರಯತ್ನಪಟ್ಟನು. ಈ ಪ್ರಯತ್ನದ ಅಂಗವಾಗಿ ಮಾವೋ ನೇತೃತ್ವದಲ್ಲಿ ಕಮ್ಯುನಿಸ್ಟ್ ಪಕ್ಷವು ಚೀನದ ಸಮಾಜದಲ್ಲಿ ತಂದ ಕೆಲವು ಬದಲಾವಣೆಗಳು ಜನರಲ್ಲಿ ಸಾಮ್ಯವಾದದ ಬಗ್ಗೆ ನಂಬಿಕೆಯನ್ನುಂಟು ಮಾಡಿದವು. ಶತಮಾನಗಳ ಕಾಲ ಸಮಾಜದ ಕೆಳ ಸ್ತರದಲ್ಲಿಯೇ ಉಳಿದು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಅಸಡ್ಡೆಗೆ ಗುರಿಯಾಗಿದ್ದ ಜನರು ಈ ಹೊಸ ಬೆಳವಣಿಗೆಗಳ ಪರಿಣಾಮವಾಗಿ ತಮ್ಮದೇ ಆದ ಜೀವನವೂ ಒಂದಿದೆ, ಮತ್ತು ತಮ್ಮ ಅಸ್ತಿತ್ವವು ಘನತೆಯಿಂದಲೇ ಕೂಡಿದ್ದು ಎಂಬ ತಿಳುವಳಿಕೆಯನ್ನು ಮಾಡಿಕೊಂಡರು. ಎಲ್ಲ ಕೃಷಿ ಪ್ರಧಾನ ದೇಶಗಳಂತೆಯೇ. ಚೀನದಲ್ಲಿಯೂ ಪ್ರಮುಖ ಸಮಸ್ಯೆಯೆಂದರೆ ಭೂಮಿಯ ಹಂಚಿಕೆಯದು. ಹೊಸ ವ್ಯವಸ್ಥೆಯಲ್ಲಿ ಭೂಮಿಯ ಮರುಹಂಚಿಕೆ ಆದದ್ದರಿಂದ ಸಾಮಾನ್ಯ ಜನರು, ಅದರಲ್ಲೂ ಮುಖ್ಯವಾಗಿ ಯುವಕರು ಮತ್ತು ಸ್ತ್ರೀಯರು ಮಾರ್ಕ್ಸ್‌ವಾದದ ಕಡೆಗೆ ಒಲಿದರು. ಮಾರ್ಕ್ಸ್‌ವಾದದ

ಈ ಆಚರಣೆಯಿಂದಾಗಿ ನಿಧಾನವಾಗಿ ಮಾರ್ಕ್ಸ್‌ವಾದ ಒಂದು ಸಿದ್ಧಾಂತವಾಗಿಯೂ ಗಟ್ಟಿಯಾಗಿ ನೆಲೆಯೂರುವುದು ಸಾಧ್ಯವಾಯಿತು.

ಅಧ್ಯಾಯ ೭

ಮಾವೋ ಮತ್ತು ಸಾಹಿತ್ಯ

ರಾಜಕೀಯ, ಆರ್ಥಿಕ ರಂಗಗಳಲ್ಲಿ ಕೇಳಿಬರುವಷ್ಟು ಹೆಚ್ಚಾಗಿ ಸಾಹಿತ್ಯ ಕ್ಷೇತ್ರದಲ್ಲಿ ಮಾವೋನ ಹೆಸರು ಸಾಮಾನ್ಯವಾಗಿ ಕೇಳಿಬರುವುದಿಲ್ಲ. ಆದರೆ, ವಸ್ತು ಸ್ಥಿತಿಯೆಂದರೆ ಮಾವೋ ಒಬ್ಬ ಕವಿ; ಸಾಹಿತ್ಯ ಮತ್ತು ಸಮಾಜದಲ್ಲಿ ಅದರ ಪಾತ್ರದ ಬಗ್ಗೆ ಗಂಭೀರವಾದ ಚಿಂತನೆಗಳನ್ನು ಉಳ್ಳವನಾಗಿದ್ದನು. ಒಬ್ಬ ಮಾರ್ಕ್ಸ್‌ವಾದಿಯಾಗಿ ಮಾವೋ ಸಹಜವಾಗಿಯೇ ಸಾಹಿತ್ಯ ಮತ್ತು ಸಮಾಜಗಳ ಪರಸ್ಪರ ಸಂಬಂಧ ಹಾಗೂ ಪ್ರಭಾವಗಳ ಬಗ್ಗೆ ಅರ್ಥಪೂರ್ಣವಾದ ಚರ್ಚೆಯಲ್ಲಿ ತೊಡಗಿದ್ದನು.

ಸಾಹಿತ್ಯದ ಬಗ್ಗೆ ಮಾವೋನ ಚಿಂತನೆಯು ೧೯೪೨ರಲ್ಲಿ ಸಾಹಿತ್ಯ ಮತ್ತು ಕಲೆಗಳ ಬಗ್ಗೆ ಏನಾನ್ ವೇದಿಕೆಯಲ್ಲಿ ಅವನು ನೀಡಿದ ಭಾಷಣವಲ್ಲಿ ತುಂಬ ಸ್ಪಷ್ಟವಾಗಿ ವ್ಯಕ್ತವಾಗುವುದು. ಈ ಭಾಷಣವಲ್ಲಿ ಆಧುನಿಕ ಜಗತ್ತಿನಲ್ಲಿ ಹಲವು ಬಾರಿ ಸಾಹಿತ್ಯಾಸಕ್ತರನ್ನು ಕಲಕಿದ ಸಾಹಿತ್ಯದ ಉದ್ದೇಶದ ಕುರಿತಾದ ಪ್ರಶ್ನೆಯನ್ನು ಪ್ರಸ್ತಾಪಿಸಿ, ಆ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಅನುಮಾನಕ್ಕೆಡೆಯಿಲ್ಲದಂತೆ ಪ್ರತಿಪಾದಿಸುತ್ತಾನೆ. ಕಲೆ ಕಲೆಗಾಗಿಯೇ ಅಥವಾ ಮನುಷ್ಯನಿಗಾಗಿಯೇ

ಎನ್ನುವುದೇ ಆ ಪ್ರಶ್ನೆ; ಮತ್ತು ಈ ಪ್ರಶ್ನೆಗೆ ಮಾವೋ ಕಲೆ ಮನುಷ್ಯನಿಗಾಗಿಯೇ ಇದೆ ಎನ್ನುವ ಖಚಿತವಾದ ಉತ್ತರವನ್ನು ನೀಡುತ್ತಾನೆ.

ಮಾವೋನ ಈ ಭಾಷಣವನ್ನು, ಅಂದಿನ ಸಂದರ್ಭದ ಹಿನ್ನೆಲೆಯಲ್ಲಿ ಪರಿಶೀಲಿಸುವುದು ಹೆಚ್ಚು ಅರ್ಥಪೂರ್ಣವಾಗುತ್ತದೆ. ಆ ಕಾಲ ಘಟ್ಟದಲ್ಲಿ ಮಾವೋ ಚೀನಾದ ಜನರ ನಿರ್ಣಾಯಕ ಹೋರಾಟದ ನೇತೃತ್ವವನ್ನು ವಹಿಸಿದ್ದರು. ಒಂದು ಕಡೆ ಪರಕೀಯರಾದ ಜಪಾನ್ ಸಾಮ್ರಾಜ್ಯಶಾಹಿಗಳನ್ನು, ಮತ್ತೊಂದು ಕಡೆ ಕಮ್ಯುನಿಸ್ಟ್ ವಿರೋಧಿಗಳಾದ, ಆದರೆ ತಮ್ಮ ದೇಶದವರೇ ಆದ, ಯುದ್ಧಕೋರ ಪ್ರಾಂತೀಯ ನಾಯಕರನ್ನು–ಒಂದೇ ಸಮಯದಲ್ಲಿ ಎರಡು ಶಕ್ತಿಗಳನ್ನು ಎದುರಿಸಬೇಕಾಗಿದ್ದ ಸಂದರ್ಭವದು. ದೇಶದ ಜನತೆಗಾಗಿ ಒಂದು ಹೊಸ ಜೀವನದ ಹುಡುಕಾಟದಲ್ಲಿ ತೊಡಗಿದ್ದ ಮತ್ತು ಶ್ರೇಷ್ಠ ಆದರ್ಶಗಳನ್ನು ಹೊಂದಿದ್ದ ಮಾವೋ ಮತ್ತು ಅವನ ಸಹಚರರಲ್ಲಿ ತಮ್ಮ ಹೋರಾಟಕ್ಕೆ ಸಂಬಂಧಪಟ್ಟಂತೆ ಸಾಹಿತ್ಯದ ಪಾತ್ರವೇನೆಂಬುದರ ಬಗ್ಗೆ ಸಹಜವಾಗಿಯೇ ಪ್ರಶ್ನೆಗಳು ಉಂಟಾದವು.

ಸಾಹಿತ್ಯ ಸೃಷ್ಟಿಯ ಪ್ರಕ್ರಿಯೆ ಶೂನ್ಯದಲ್ಲಿ ಘಟಿಸುವುದಿಲ್ಲ; ಅದರ ಹಿಂದೆ ನಿರ್ದಿಷ್ಟ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಶಕ್ತಿಗಳು ಕೆಲಸ ಮಾಡಿ ಲೇಖಕನು ನಿರ್ದಿಷ್ಟ ಬಗೆಯ ಸಾಹಿತ್ಯವನ್ನು ಸೃಷ್ಟಿಸುವಲ್ಲಿ ನೆರವಾಗುತ್ತವೆ. ಯಾವುದೇ ಸಮಯದಲ್ಲಿ ರಚನೆಗೆ ತೊಡಗಿರುವ ಲೇಖಕನು ತುಂಬ ಸಹಜವಾಗಿಯೇ ಪರಿಸ್ಥಿತಿಗೆ ಸ್ಪಂದಿಸಿ ಅದಕ್ಕೆ ತಕ್ಕ ಸಾಹಿತ್ಯವನ್ನು ಸೃಷ್ಟಿಸುತ್ತಾನೆ. ಅಲ್ಲಲ್ಲಿ ಕೆಲವರು ಲೇಖಕರು ತಾವು ಸಮಕಾಲೀನ ಪರಿಸ್ಥಿತಿಗಳಿಂದ ಪ್ರಭಾವಿತರಾಗುವುದಿಲ್ಲವೆಂದು ಭುಜತಟ್ಟಿ ಕೊಳ್ಳುವುದುಂಟು. ಆದರೆ ವಾಸ್ತವವಾಗಿ ಇಂಥ ವ್ಯಕ್ತಿಗಳು ತಮ್ಮ ಸಾಹಿತ್ಯ ಕೃತಿಯ ನಿಜವಾದ ಲಕ್ಷಣವನ್ನು ಅರ್ಥಮಾಡಿಕೊಳ್ಳದಿರುತ್ತಾರೆ, ಅಥವಾ ಸತ್ಯವನ್ನು ಮರೆಮಾಚಲು ಯತ್ನಿಸುತ್ತಾರೆ ಎಂದು

ಹೇಳಬಹುದು. ಮಾವೋಗೆ ಈ ವಿಷಯದಲ್ಲಿ ಯಾವುದೇ ಸಂದಿಗ್ಧವಿಲ್ಲ. ಲೇಖಕರು ಆಯುಧಗಳನ್ನು ಹಿಡಿದು ಹೋರಾಟದಲ್ಲಿ ತೊಡಗಬೇಕೆಂದಿಲ್ಲ; ಬದಲಾಗಿ ಹೋರಾಟದಲ್ಲಿ ನಿರತರಾಗಿರುವ ಜನರ ಪಕ್ಷವಹಿಸಿ ಬರೆದರೂ ಅವರು ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಿದಂತಾಗುತ್ತದೆ. ತಾನು ಜನರಿಗಾಗಿ ಬರೆಯುತ್ತಿಲ್ಲ, ಕೇವಲ ಆತ್ಮತೃಪ್ತಿಗಾಗಿ ಮಾತ್ರ ಬರೆಯುತ್ತಿದ್ದೇನೆಂಬ ಬೂರ್ಜ್ವಾ ಮಾತು ಬುಡವಿಲ್ಲದ್ದು. ಇಂಥ ಸಂದರ್ಭಗಳಲ್ಲಿ ಅಲಿಪ್ತತೆ ಎನ್ನುವುದು ಸಾಧ್ಯವಿಲ್ಲದ ಮಾತು; ಅದನ್ನು ಉಪಯೋಗಿಸಿದರೆ ನಮ್ಮನ್ನು ನಾವು ಮೋಸ ಮಾಡಿಕೊಂಡು ಬೇರೆಯವರನ್ನೂ ಮೋಸ ಮಾಡಿದಂತೆ ಆಗುತ್ತದೆ.

ಸಾಹಿತ್ಯವನ್ನು ಗಂಭೀರವಾಗಿ ನೋಡುವ ಲೇಖಕನು ಮೊದಲಿಗೆ ತಾನು ಯಾರಿಗಾಗಿ ಬರೆಯುತ್ತಿದ್ದೇನೆಂಬ ಪ್ರಶ್ನೆಗೆ ಸ್ವತಃ ಉತ್ತರಿಸಿ ಆ ಮೂಲಕ ತನ್ನ ಓದುಗರು ಯಾರು ಎಂಬುದನ್ನು ನಿರ್ಧರಿಸಬೇಕು. ಓದುಗರಿಗೆ ತಿಳಿಯುವಂತೆ ಬರೆಯಬೇಕಾದರೆ ಆ ಜನರ ಜೀವನದ ಆಳವನ್ನು ಹೊಕ್ಕು ಅರ್ಥ ಮಾಡಿಕೊಳ್ಳಬೇಕು, ಅವರ ಭಾಷೆಯನ್ನು ತನ್ನದಾಗಿಸಿಕೊಂಡು ಅದನ್ನು ಸಮರ್ಥವಾಗಿ ಬಳಸಬೇಕು. ಈ ಸಂದರ್ಭದಲ್ಲಿ ಮಾವೋ 'ಜನಪ್ರಿಯಗೊಳಿಸುವುದು' (popularisation) ಮತ್ತು 'ಮಟ್ಟವನ್ನು ಹೆಚ್ಚಿಸುವುದು (raising standards) ಎನ್ನುವ ಮಾತುಗಳನ್ನು ಬಳಸುತ್ತಾನೆ. ಕ್ರಾಂತಿಕಾರಿಗಳಲ್ಲಿ ಅಧಿಕ ಸಂಖ್ಯೆಯ ಜನ ಅವಿದ್ಯಾವಂತರೂ, ಅನಕ್ಷರಸ್ಥರೂ ಆಗಿರುತ್ತಾರೆ. ಅವರಿಗೆ ಪ್ರಿಯವಾಗುವ ಕೃತಿಗಳ ಸಾಹಿತ್ಯಕ ಮಟ್ಟ ಸಾಮಾನ್ಯವಾಗಿ ಹೆಚ್ಚಿನದಾಗಿರುವುದಿಲ್ಲ. ಹಾಗೆಂದು ಎಂದೆಂದಿಗೂ ಅವರ ಸಾಹಿತ್ಯಾಸಕ್ತಿ ಅದೇ ಮಟ್ಟದಲ್ಲಿ ನಿಂತು ಹೋಗುವುದೆಂಬ ಅಭಿಪ್ರಾಯವು ಸರಿಯಲ್ಲ. ಉನ್ನತ ಸಾಹಿತ್ಯಿಕ ಮೌಲ್ಯಗಳುಳ್ಳ ಕೃತಿಗಳನ್ನು ಅವರಿಗೆ ಪರಿಚಯಿಸುವ ಮೂಲಕ ಆ ಕೃತಿಗಳನ್ನು ಜನಪ್ರಿಯಗೊಳಿಸುವುದು ಸಾಧ್ಯ; ಅದೇ ಸಮಯದಲ್ಲಿ

ಇಂಥ ಉತ್ತಮ ಕೃತಿಗಳ ಮೂಲಕ ಸಾಮಾನ್ಯ ಜನರ ಅಭಿರುಚಿಯ ಮಟ್ಟವನ್ನು ಹೆಚ್ಚಿಸಲೂಬಹುದು. ಸಾಧಾರಣವಾಗಿ 'ಜನಪ್ರಿಯ' ಎನ್ನುವ ಪದಕ್ಕೆ ಇರುವ ಅರ್ಥಕ್ಕೂ ಮಾವೋ ಅದನ್ನು ವಿವರಿಸುವುದಕ್ಕೂ ಇರುವ ವ್ಯತ್ಯಾಸವನ್ನು ಇಲ್ಲಿ ಸ್ಪಷ್ಟವಾಗಿ ಕಾಣಬಹುದು. ಶ್ರೇಷ್ಠ ಸಾಹಿತ್ಯವು ಕೇವಲ ಕೆಲವರ ಸ್ವತ್ತು ಎಂದು ಭಾವಿಸುವ ಬುದ್ಧಿಜೀವಿ ವರ್ಗಕ್ಕೆ ಮಾವೋ ಸಾಮಾನ್ಯ ಜನರಲ್ಲಿ ತನಗೆ ಇದ್ದ ನಂಬಿಕೆಯನ್ನು ವ್ಯಕ್ತಪಡಿಸುವ ಮೂಲಕ ಉತ್ತರವನ್ನು ನೀಡಲು ಯತ್ನಿಸಿದ್ದಾನೆ. ಕಲೆ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿರುವವರು ತಮ್ಮ ದಂತ ಗೋಪುರಗಳಿಂದ ಹೊರಬಂದು ಜನರ ಜೊತೆ ಬೆರೆತು ಅವರ ಸಾಹಿತ್ಯ ಹಾಗೂ ಕಲಾ ಪ್ರಕಾರವನ್ನು ಅಳವಡಿಸಿಕೊಂಡು ಉತ್ತಮ ಸೃಜನಶೀಲ ಪ್ರಕ್ರಿಯೆಯಲ್ಲಿ ತೊಡಗು ವುದರ ಅವಶ್ಯಕತೆಯನ್ನು ಮಾವೋ ಇಲ್ಲಿ ಒತ್ತಿ ಹೇಳಿದ್ದಾನೆ.

ಇದೇ ಲೇಖನದಲ್ಲಿ ಮಾವೋ ಸಾಹಿತ್ಯಕ್ಕೂ ರಾಜಕೀಯಕ್ಕೂ ಇರುವ ನಿಕಟ ಸಂಬಂಧವನ್ನು ಕುರಿತು ಕೂಲಂಕುಷವಾಗಿ ಚರ್ಚಿಸುತ್ತಾನೆ. 'ಕಲೆಗಾಗಿ ಕಲೆ' ಎಂಬ ಮಾತನ್ನು ಸ್ಪಷ್ಟವಾಗಿ ಅಲ್ಲಗೆಳೆದು ಎಲ್ಲ ಕಲಾ ಪ್ರಕ್ರಿಯೆಗಳೂ ಜನರ ನಡುವಿನಿಂದ ಹುಟ್ಟಿಬಂದವಾದ್ದರಿಂದ ಅವು ಜನರಿಗಾಗಿಯೇ ಇದ್ದು ಮತ್ತೆ ಅವರೆಡೆಗೆ ಹೋಗಬೇಕೆಂದು ಪ್ರತಿಪಾದಿಸುತ್ತಾನೆ. ರಾಜಕೀಯವಿಲ್ಲದೆ ಜನ ಜೀವನವಿಲ್ಲ. ರಾಜಕೀಯದಿಂದಲೇ ಸಾಹಿತ್ಯ ಮತ್ತು ಕಲೆ ರೂಪುತಳೆದು, ಮತ್ತೆ ಅವುಗಳು ರಾಜಕೀಯವನ್ನು ಪ್ರಭಾವಿತಗೊಳಿಸುತ್ತವೆ. ಇಲ್ಲಿ ರಾಜಕೀಯವೆಂದರೆ ಕೇವಲ ಕೆಲವು ಜನರ ಚಟುವಟಿಕೆಯಾಗಿರದೇ ಒಟ್ಟು ಸಮಾಜದಲ್ಲಿ ವಿವಿಧ ವರ್ಗಗಳ ನಡುವೆ ನಡೆಯುವ ಸಂಘರ್ಷವೆಂದು ಮಾವೋ ವಿವರಿಸುತ್ತಾನೆ. ವರ್ಗ ಸಂಘರ್ಷ ಜೀವನದ ವಾಸ್ತವವಾದಾಗ ಅದರ ಬುನಾದಿಯ ಮೇಲೆ ನಿಂತಿರುವ ರಾಜಕೀಯವೂ ಜನರ ಮನಸ್ಸಿನಲ್ಲಿ ಅವರಿಗೆ ಅರಿವಿಲ್ಲದಂತೆಯೇ ನೆಲೆಯೂರಿ ಅವರ

ಸೃಜನಶೀಲತೆಯ ಮೂಲಕ ಅಭಿವ್ಯಕ್ತಿಯನ್ನು ಪಡೆಯುತ್ತವೆ ಎಂಬುದು ಮಾವೋನ ಖಚಿತವಾದ ಅಭಿಪ್ರಾಯ. ಬದ್ಧ ಸಾಹಿತ್ಯವನ್ನು ಸಾರಾಸಗಟಾಗಿ ಅಲ್ಲಗಳೆಯುವ ವಿಮರ್ಶಕರಿಗೂ ಮಾವೋನ ಉತ್ತರವಿಲ್ಲಿದೆ. ಬದ್ಧತೆಯುಳ್ಳ ಸಾಹಿತ್ಯವೆಂದರೆ ಘೋಷಣೆಗಳಲ್ಲ, ಅದರಲ್ಲಿಯೂ ಸಾಹಿತ್ಯಿಕ ಮೌಲ್ಯಗಳು ಮುಖ್ಯವಾಗುತ್ತವೆ. ಹಾಗೆಂದು ಸೌಂದರ್ಯ ಪ್ರಜ್ಞೆಯೇ ಮುಖ್ಯವಾಗಿ ಒಂದು ಸಾಹಿತ್ಯ ಕೃತಿಯು ಏನು ಹೇಳಿದರೂ ನಡೆಯುತ್ತದೆಂದೂ ಅರ್ಥವಲ್ಲ. ಜನವಿರೋಧಿ ಸಾಹಿತ್ಯ ಎಷ್ಟೇ ಸುಂದರವಾಗಿದ್ದರೂ ಅದನ್ನು ಸ್ವೀಕರಿಸಲು ಸಾಧ್ಯವಿಲ್ಲ. ಘೋಷಣೆಗಳು ಮಾತ್ರ ತುಂಬಿರುವ ಕೃತಿಯೂ ಸಹ ಸಾಹಿತ್ಯವಲ್ಲ. ರೂಪ ಮತ್ತು ವಸ್ತುಗಳ ಸಂಬಂಧದ ಬಗೆಗಿನ ಚರ್ಚೆಗೆ ಮಾವೋನ ಈ ಮಾತುಗಳಲ್ಲಿ ಸಮರ್ಪಕ ಉತ್ತರ ಸಿಗುತ್ತದೆ. ಇದೇ ಸಂದರ್ಭದಲ್ಲಿಯೇ ಮತ್ತೆ ಮಾವೋ ಮಾರ್ಕ್ಸ್‌ವಾದದ ಹೆಸರಿನಲ್ಲಿ ಸೂತ್ರಾಂಧರಾಗುವುದರ ವಿರುದ್ಧವೂ ಎಚ್ಚರಿಕೆ ನೀಡುತ್ತಾನೆ. ಇಂಥ ಮಾರ್ಕ್ಸ್‌ವಾದಿಗಳು ವಾಸ್ತವವಾಗಿ ಮಾರ್ಕ್ಸ್‌ವಾದದ ವಿರೋಧಿಗಳೆಂದು ಮಾವೋನ ಅಭಿಪ್ರಾಯವಾಗಿದೆ.

ಸಮಾಜ, ರಾಜಕೀಯ, ಕ್ರಾಂತಿಕಾರಿ ರಾಜಕೀಯ ಪಕ್ಷ - ಇವುಗಳಿಗೂ ಹಾಗೂ ಸಾಹಿತ್ಯಕ್ಕೂ ಇರುವ ಸಂಬಂಧದ ಬಗ್ಗೆ ಮಾವೋನ ವಿಚಾರವೇನೆಂಬುದನ್ನು ಈ ಲೇಖನವು ಸಾಕಷ್ಟು ವಿವರವಾಗಿ ಪ್ರಸ್ತುತಪಡಿಸುವುದರಿಂದಲೇ ಮಾರ್ಕ್ಸ್‌ವಾದಿ ವಿಮರ್ಶಾ ಜಗತ್ತಿನಲ್ಲಿ ಈ ಲೇಖನವು ಮಹತ್ವಪೂರ್ಣ ಸ್ಥಾನವನ್ನು ಪಡೆದಿದೆ.

ಒಬ್ಬ ಚಿಂತಕನಾಗಿ ಮಾವೋ ಸಾಹಿತ್ಯದ ಬಗ್ಗೆ ಹೇಳುವ ಮಾತುಗಳು ಅವನ ಕವಿತೆಗಳಲ್ಲಿ ಪ್ರತಿಫಲನಗೊಳ್ಳುತ್ತವೆ. ಈ ಕವನಗಳು ಅವನ ಅನುಭವಗಳನ್ನು ಕಾವ್ಯಾತ್ಮಕವಾಗಿ ನಮ್ಮ ಮುಂದಿಡುತ್ತವೆ. ಸಾಮಾನ್ಯವಾಗಿ ಎಲ್ಲ ಕವಿತೆಗಳು ಚೀನದ ಕ್ರಾಂತಿಕಾರಿ ಚಳುವಳಿ ಮತ್ತು ಅವಕ್ಕಾಗಿ ಅವರು ನಡೆಸಿದ ಸಶಸ್ತ್ರ ಮತ್ತು ಅದರಲ್ಲಿ ಭಾಗವಹಿಸಿದ

ಜನರನ್ನು ಕುರಿತಂತೆ ಬರೆವಂಥವಾಗಿವೆ. ಹೀಗಾಗಿ ಮಾವ್ರೋನ ಕವನಗಳು ಒಬ್ಬ ಅಪ್ಪಟ ಕ್ರಾಂತಿಕಾರಿಯು ತನ್ನ ಸುತ್ತಲಿನ ಪರಿಸ್ಥಿತಿಗೆ ಕಾವ್ಯಾತ್ಮಕವಾಗಿ ಸ್ಪಂದಿಸುವ ರೀತಿಗೆ ಸಾಕ್ಷಿಯಾಗಿ ನಿಂತಿವೆ.

ಮಾವ್ರೋ ತನ್ನ ಹಲವಾರು ಪದ್ಯಗಳನ್ನು ಚೀನದಲ್ಲಿ ಸಾಂಪ್ರದಾಯಿಕವಾಗಿ ಜನಪ್ರಿಯವಾಗಿದ್ದ ಹಾಡುಗಳ ಧಾಟಿಗೆ ಹೊಂದಿಸುತ್ತಾನೆ. ಈ ಕವನಗಳ ಶೀರ್ಷಿಕೆಯಡಿಯಲ್ಲಿಯೇ ಅವು ಯಾವ ಹಾಡಿನ ಧಾಟಿಯಲ್ಲಿ ಇರಬೇಕೆನ್ನುವುದನ್ನು ನಿರ್ದಿಷ್ಟಪಡಿಸಲಾಗಿದೆ. ತನ್ನ ನಾಡಿನ ಸಾಹಿತ್ಯ ಪ್ರಕಾರಗಳ ಬಗ್ಗೆ ಹಾಗೂ ಸಾಹಿತ್ಯದ ಬಗ್ಗೆ ಮಾವ್ರೋನ ಕಾಳಜಿಯನ್ನು ಈ ಕವನಗಳು ಸ್ಪಷ್ಟಗೊಳಿಸುತ್ತವೆ. ಜನಪ್ರಿಯ ಕಾವ್ಯದ ರೂಪವನ್ನು ತನ್ನ ಕ್ರಾಂತಿಕಾರಿ ಭಾವನೆಗಳ ಅಭಿವ್ಯಕ್ತಿಗಾಗಿ ಬಳಸುವ ಮೂಲಕ ಮಾವ್ರೋ ತನ್ನ ನಂತರ ಹಲವು ಭಾಷೆಗಳಲ್ಲಿ ಬರವಣಿಗೆಯನ್ನು ನಡೆಸಿದ ತನ್ನಂಥ ಕ್ರಾಂತಿಕಾರಿ ಸಾಹಿತಿಗಳಿಗೆ ಒಂದು ಉತ್ತಮ ಮಾದರಿಯನ್ನು ಒದಗಿಸಿದ್ದಾನೆ.

ಕೇವಲ ಜನಪದ ರೂಪಗಳನ್ನು ಮಾತ್ರವಲ್ಲದೆ ಮಾವ್ರೋ ಜನಪದ ಸಾಹಿತ್ಯದಲ್ಲಿ ಹಾಗೂ ಪುರಾಣಗಳಲ್ಲಿ ಪ್ರಚಲಿತವಾಗಿದ್ದ ಹಲವಾರು ನಂಬಿಕೆಯನ್ನು, ಪೌರಾಣಿಕ ಗಾಥೆ (Myth) ಗಳನ್ನು ತನ್ನ ಕಾವ್ಯವು ಜನರಿಗೆ ಹೆಚ್ಚು ಸ್ಪಷ್ಟವಾಗಲೆಂಬ ಉದ್ದೇಶದಿಂದ ಬಳಸಿಕೊಂಡಿದ್ದಾನೆ. ಇಲ್ಲಿ ನಾವು ಮುಖ್ಯವಾಗಿ ಸಾಮಾನ್ಯ ಜನರನ್ನು ತಲುಪಲು ತವಕ ಪಡುವ ಒಬ್ಬ ಪ್ರಜಾಕವಿಯ ಮನಸ್ಸನ್ನು ಕಾಣಬಹುದು. ಜನರಿಗೆ ಅರ್ಥವಾಗದ ಸಂಕೇತಗಳನ್ನು ಬಳಸಿ ಅವರಿಂದ ಕಾವ್ಯವನ್ನು ದೂರವಿರಿಸುವ ದಂತಗೋಪುರದ ಕವಿಗಳ ವಿಷಯದಲ್ಲಿ ಮಾವ್ರೋನ ಅಭಿಪ್ರಾಯವು ಏನೆಂಬುದು ಈಗಾಗಲೇ ಸ್ಪಷ್ಟವಾಗಿದೆ. ಇಂಥ ಪ್ರಯತ್ನಗಳಿಗೆ ವಿರುದ್ಧವಾಗಿ ಅವನು ತನ್ನ ಕಾವ್ಯದಲ್ಲಿ ರೂಪ ಮತ್ತು ವಸ್ತುಗಳೆರಡರ ಮೂಲಕವೂ ಜನರ ಸನಿಹಕ್ಕೆ ಸರಿದು ಅವರೊಂದಿಗೆ ತಾದ್ಯಾತ್ಮತೆಯನ್ನು ಹೊಂದುವ ಪ್ರಯತ್ನವನ್ನು ನಾವಿಲ್ಲಿ

ಗಮನಿಸಬಹುದು. ರಾಜಕೀಯ, ಆರ್ಥಿಕ ರಂಗಗಳಲ್ಲಿ ತನ್ನ ಸಿದ್ಧಾಂತಕ್ಕೆ ಬದ್ಧನಾಗಿದ್ದು ಅದನ್ನು ಆಚರಣೆಗೆ ತರಲು ಯತ್ನಿಸಿದ ರೀತಿಯಲ್ಲಿಯೇ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ತನ್ನ ಬದ್ಧತೆಯ ಮೂಲಕವೇ ಕ್ರಿಯಾಶೀಲನಾಗುವ ಒಬ್ಬ ಕ್ರಾಂತಿಕಾರಿ ಕವಿಯ ಪರಿಚಯವು ಮಾವೋನ ವ್ಯಕ್ತಿತ್ವದ ಮೂಲಕ ಆಗುತ್ತದೆ. ಇಂಥ ವ್ಯಕ್ತಿತ್ವವನ್ನು ಹೊಂದಿರುವುದರಿಂದಲೇ ತನ್ನ ದೇಶದಲ್ಲಿ ತನ್ನ ನಂತರದ ಬೆಳವಣಿಗೆಗಳು ಯಾವ ದಿಕ್ಕಿನಲ್ಲಿಯೇ ಮುಂದುವರೆದರೂ ಚೀನದ ಮತ್ತು ಜಗತ್ತಿನ ಇತಿಹಾಸದಲ್ಲಿ ಮಾವೋ ವ್ಯಕ್ತಿತ್ವ ಹಾಗೂ ಚಿಂತನೆಗಳು ಪ್ರಾಮುಖ್ಯತೆಯನ್ನು ಪಡೆದಿರುವುದು ಮಾತ್ರವಲ್ಲದೆ ತಮ್ಮ ಪ್ರಸ್ತುತತೆಯನ್ನು ಉಳಿಸಿಕೊಳ್ಳುತ್ತವೆ.

ಅಧ್ಯಾಯ ೮

ಮಾವೋ ನಂತರದ ಚೀನಾ

ಮಾವೋ ಕನಸು ಕಂಡ ಚೀನಾ ಸಮಾಜಕ್ಕೂ ಇಂದು ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿ ನಾವು ಕಾಣುತ್ತಿರುವ ಅಲ್ಲಿನ ಸಮಾಜಕ್ಕೂ ಅಗಾಧವಾದ ಅಂತರವಿದೆ. ಆ ದೇಶದಲ್ಲಿ ಈ ಪರಿಸ್ಥಿತಿಯು ಮಾವೋ ನಂತರ ತಟಾತ್ತನೆ ಸೃಷ್ಟಿಯಾದದ್ದಲ್ಲ. ಮಾವೋ ಜೀವಿಸಿದ್ದ ಕಾಲದಲ್ಲಿಯೇ ಪರಿಷ್ಕರಣವಾದೀ ಹಾಗೂ ಬಂಡವಾಳಶಾಹಿ ಶಕ್ತಿಗಳು ಅಧಿಕಾರದಲ್ಲಿ ಅಥವಾ ಅಧಿಕಾರದ ಸುತ್ತಮುತ್ತ ಕೇಂದ್ರೀಕೃತವಾಗಿದ್ದು ಮಾವೋ ಸಹ ಅವುಗಳನ್ನು ಗುರುತಿಸಿದ್ದುಂಟು. ಅವನ ನಿಕಟವರ್ತಿಗಳಲ್ಲಿಯೇ ಕೆಲವರು ಮಾರ್ಕ್ಸ್‌ವಾದದ ಬಗ್ಗೆ ತಮಗಿದ್ದ ನಂಬಿಕೆ ಹಾಗೂ ಬದ್ಧತೆಯನ್ನು ಕಳೆದುಕೊಂಡು ಮಾರ್ಕ್ಸ್‌ವಾದಿ ವಿರೋಧಿ ನೆಲೆಗಳನ್ನು ಹುಡುಕುತ್ತಿದ್ದರು. ಈ ಬೆಳವಣಿಗೆಗಳನ್ನು ಗಮನಿಸಿದ ಮಾವೋ ಹಲವು ಸಲ ಕಮ್ಯುನಿಸ್ಟ್ ಕಾರ್ಯಕರ್ತರನ್ನು ಇಂಥ ವಿಷಯಗಳು ಮತ್ತು ವ್ಯಕ್ತಿಗಳ ಬಗ್ಗೆ ಜಾಗರೂಕರಾಗಿರಬೇಕೆಂದು ಎಚ್ಚರಿಸುತ್ತಿದ್ದನು. ಕೇವಲ ರಾಜಕೀಯವಾಗಿ ಕಮ್ಯುನಿಸ್ಟ್ ವ್ಯವಸ್ಥೆ ಜಾರಿ ಮಾಡಿ ಕೊಡುವ ನೂತನ ಪ್ರಜಾಸ್ವಾಮಿಕ ವ್ಯವಸ್ಥೆ ಸೃಷ್ಟಿಯಾದರೆ ಸಾಲದು, ಅದರ ಜತೆಗೇ ಜನರು

ಸಾಂಸ್ಕೃತಿಕವಾಗಿಯೂ ಇಂಥ ಒಂದು ವ್ಯವಸ್ಥೆ ತಮ್ಮನ್ನು ತಾವು ಅಣಿಗೊಳಿಸಿಕೊಳ್ಳಬೇಕಾದ ಅನಿವಾರ್ಯತೆಯ ಬಗ್ಗೆ ಮಾವೋ ಹಲವು ಸಲ ಭಾಷಣಗಳು ಮತ್ತು ಬರಹಗಳ ಮೂಲಕ ಹೇಳಿದನು. ವಿಶ್ವದಾದ್ಯಂತವು ಹಲವು ದೇಶಗಳಲ್ಲಿ ಕಮ್ಯುನಿಸ್ಟ್ ಸರ್ಕಾರಗಳು ಕುಸಿದುಬಿದ್ದು ಹೊಸ ಸನ್ನಿವೇಶವೊಂದು ಕಾಣಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಚೀನಾದ ವಿಷಯದಲ್ಲಿ ಮಾವೋ ವ್ಯಕ್ತಪಡಿಸಿದ ಅಭಿಪ್ರಾಯಗಳು ಪ್ರಸ್ತುತವಾಗುತ್ತವೆ. ಅಷ್ಟು ಮಾತ್ರವಲ್ಲ ಜಗತ್ತಿನ ಇನ್ನೊಂದು ಪ್ರಮುಖ ಕಮ್ಯುನಿಸ್ಟ್ ರಾಷ್ಟ್ರವಾಗಿದ್ದ ಸೋವಿಯತ್ ರಷ್ಯಾದ ಬಗ್ಗೆಯೂ ಬಹಳ ಹಿಂದೆಯೇ ಮಾವೋ ತನ್ನದೇ ಆದ ಆಲೋಚನೆಗಳನ್ನು ವ್ಯಕ್ತಪಡಿಸಿದ್ದನು. ಸ್ಟಾಲಿನ್ ನಂತರ ರಷ್ಯಾದ ನಾಯಕತ್ವ ಕೆಲವು ಮೂಲಭೂತ ವಿಷಯಗಳಿಗೆ ಸಂಬಂಧಿಸಿದಂತೆ ತಳೆದ ನಿಲುವುಗಳನ್ನು ಮಾವೋ ಪರಿಷ್ಕರಣವಾದೀ ನಿಲುವುಗಳೆಂದೇ ಕರೆದನು. ಹೀಗಾಗಿ ಮಾವೋ ನಾಯಕತ್ವಕ್ಕೂ ರಷ್ಯಾದ ಕ್ರುಶ್ಚೇವ್ ನಾಯಕತ್ವಕ್ಕೂ ಅಭಿಪ್ರಾಯ ಭೇದಗಳು ಉಂಟಾಗಿ ಎರಡು ದೇಶಗಳ ಸಂಬಂಧಗಳೂ ಸಹ ಹಿಂದಿನಂತೆ ಸ್ನೇಹಪೂರ್ವಕವಾಗಿರಲಿಲ್ಲ. ಅಂದು ಆರಂಭವಾದ ಪರಿಷ್ಕರಣವಾದವು ಮುಂದುವರೆದು ರಷ್ಯಾದ ಆರ್ಥಿಕ, ರಾಜಕೀಯ, ಸಾಮಾಜಿಕ ವ್ಯವಸ್ಥೆಯ ಬೇರುಗಳನ್ನೇ ಅಲುಗಾಡಿಸಿ ಕೊನೆಗೆ ಅಲ್ಲಿ ಬಂಡವಾಳಶಾಹಿಯ ಪ್ರವೇಶಕ್ಕೂ ರಂಗವನ್ನು ಸಿದ್ಧಗೊಳಿಸಿತು. ರಷ್ಯಾದ ಎಲ್ಲ ಬದಲಾವಣೆಗಳಿಗೂ ಕಾರಣಗಳನ್ನು ಗೊರ್ಬಚೆವ್‌ನಲ್ಲಿ ಹುಡುಕುವ ಮೊದಲು ಈ ವಿಷಯಗಳ ಕಡೆಗೆ ಗಮನ ಹರಿಸಿದರೆ ಅರವತ್ತರ ದಶಕದಲ್ಲಿಯೇ ರಷ್ಯಾದ ವ್ಯವಸ್ಥೆಯ ಬಗ್ಗೆ ಮಾವೋ ನೀಡಿದ ಹೇಳಿಕೆಗಳು ಮುಂದೆ ನಿಜವಾದದ್ದು ಸ್ಪಷ್ಟವಾಗುತ್ತದೆ.

ಅದೇ ರೀತಿಯಲ್ಲಿ ತನ್ನ ಸಮಾಜದಲ್ಲಿಯೂ ಬಂಡವಾಳಶಾಹಿ, ಪರಿಷ್ಕರಣವಾದಿ ಒಲವುಗಳನ್ನು ಕಂಡ ಮಾವೋ ಅವುಗಳ ವಿರುದ್ಧ ಜನರಿಗೆ ಎಚ್ಚರಿಕೆ ನೀಡುತ್ತಿದ್ದ. ಇಂದು ಚೀನದ ವೃದ್ಧ ನಾಯಕನೆಂದು

ಕರೆಸಿಕೊಳ್ಳುತ್ತಿರುವ ಡೆಂಗ್ ಷ್ಯೆಯಾವ್ಪೊ ಪಿಂಗ್, ಲಿನ್ ಪಿ ಯಾವ್ಹೋ ಮತ್ತಿತರರ ಸಮಯ ಸಾಧಕತನವು ಅವರ ಬಂಡವಾಳಶಾಹಿ ಧೋರಣೆಗಳ ಜೊತೆಗೂಡಿ ಮುಂದೆ ಸಮಾಜವೆಲ್ಲವನ್ನೂ ಆಕ್ರಮಿಸ ಬಹುದೆಂಬ ಸಂಶಯವಿದ್ದಿದ್ದರಿಂದ, ಮಾವೋ ೧೯೬೬ರಲ್ಲಿ ಚೀನಾದಲ್ಲಿ ಸಾಂಸ್ಕೃತಿಕ ಕ್ರಾಂತಿಗೆ ಕರೆಕೊಟ್ಟ. ಆ ಹೊತ್ತಿಗಾಗಲೇ ರಾಜಕೀಯವಾಗಿ ಕ್ರಾಂತಿಯೊಂದನ್ನು ಕಂಡ ಚೀನಾದಲ್ಲಿನ ಈ ಹೊಸ ಕ್ರಾಂತಿ ಜನರ ಮನೋಭಾವಗಳಿಗೆ ಸಂಬಂಧಪಟ್ಟದ್ದು. ಸಮಾಜವಾದಿ ಕ್ರಾಂತಿ ಎನ್ನುವುದು ಯಾವುದೋ ಒಂದು ಕಾಲ ಘಟ್ಟದಲ್ಲಿ ನಡೆದು ಮತ್ತೆ ನಿಂತು ಬಿಡುವುದಲ್ಲ; ಬದಲಾಗಿ ಅದು ಒಂದು ನಿರಂತರ ಪ್ರಕ್ರಿಯೆ. ಬಂಡವಾಳಶಾಹಿಯ ಮುಖ್ಯ ಪರಿಣಾಮವಾದ ವ್ಯಕ್ತವಾದ ಹಾಗೂ ಲಾಭಕೋರತನಗಳ ವಿರುದ್ಧ ಸಮಾಜದ ಸದಸ್ಯರು ತಮ್ಮನ್ನು ತಾವು ಎಚ್ಚರಿಸಿಕೊಳ್ಳುವುದು ಹಾಗೂ ನಿಜವಾದ ಸಾಮ್ಯವಾದಿ ಕ್ರಾಂತಿಯ ಮೂಲಕ ಸಾಮ್ಯವಾದಿ ವ್ಯವಸ್ಥೆಯ ನಿರ್ಮಾಣಕ್ಕೆ ಸಿದ್ಧರಾಗುವುದು ಇಂಥ ಆಂತರಿಕ ಕ್ರಾಂತಿಗಳ ಗುರಿಯಾಗಿರಬೇಕೆಂಬುದು ಮಾವೋನ ಸ್ಪಷ್ಟ ತಿಳುವಳಿಕೆಯಾಗಿತ್ತು.

೧೯೬೬ ರಿಂದ ಸುಮಾರು ಮೂರು ವರ್ಷಗಳ ಕಾಲ ನಡೆದ ಈ ಸಾಂಸ್ಕೃತಿಕ ಕ್ರಾಂತಿಯ ಸಮಯದಲ್ಲಿ ಮಾವೋ ಹಾಗೂ ಚೌ ಎನ್ ಲೈನ ನೇತೃತ್ವದಲ್ಲಿನ ಸರ್ಕಾರ ಹಲವಾರು ಪ್ರಗತಿಗಾಮಿ ಹೆಜ್ಜೆಗಳನ್ನು ಇಟ್ಟರೂ ಕೆಲವರು ಅತಿ ಉತ್ಸಾಹಿಗಳೂ ಮತ್ತು ಲಿನ್ ಪಿ ಯಾವ್ಹೋನಂಥ ಕೆಲವರು ಸಮಯ ಸಾಧಕರಿಂದಾಗಿ ಹಲವು ಅತಿರೇಕಗಳೂ ಸಹ ಸಂಭವಿಸಿದವು. 'ಮಹಾ ಮುನ್ನಡೆ' (Great Leap)ಯ ಕಾಲದಲ್ಲಿ ಚೀನವು ಕಂಡಿದ್ದ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳು ಮೂಲೆಗೆ ಬಿದ್ದವು; ಒಂದೊಂದು ಸಲ ವೈಯಕ್ತಿಕ ದ್ವೇಷ ಸಾಧನೆಗೂ ಸಾಂಸ್ಕೃತಿಕ ಕ್ರಾಂತಿಯನ್ನು ನೆಪವನ್ನಾಗಿ ಮಾಡಿಕೊಳ್ಳಲಾಯಿತು. ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ತಪ್ಪಿಸಲು ನಾಯಕತ್ವವೇ ಈ

ಕ್ರಾಂತಿಯಲ್ಲಿ ಭಾಗವಹಿಸುತ್ತಿದ್ದ ಯುವಕರನ್ನು ತಮ್ಮ ಕೆಲಸಗಳಿಗೆ ಹಿಂದಿರುಗಿರೆಂದು ಹೇಳಬೇಕಾಯಿತು. ಇಂಥ ಸಂದರ್ಭದಲ್ಲಿಯೂ ಮೂರು ವರ್ಷಗಳ ಕಾಲ ಚೀನಾವನ್ನು ಆವರಿಸಿದ್ದ ಕ್ರಾಂತಿಪೂರಿತ ವಾತಾವರಣವು ಜನತೆಯು ತನಗಿರುವ ಅಧಿಕಾರದ ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಸಹಕಾರಿಯಾಯಿತು ಎಂಬುದರಲ್ಲಿ ಸಂದೇಹವಿಲ್ಲ.

೧೯೭೬ರ ಸೆಪ್ಟೆಂಬರ್ ೬ ರಂದು ಮಾವೋ ನಿಧನನಾದ ನಂತರ ಚೀನದ ನಾಯಕತ್ವದಲ್ಲಿನ ಬಂಡವಾಳಶಾಹಿ, ಪರಿಷ್ಕರಣವಾದಿ ಶಕ್ತಿಗಳು ತಲೆ ಎತ್ತುವುದು ಇನ್ನೂ ಸುಲಭವಾಯಿತು. ಚೀನದ ಕ್ರಾಂತಿಯ ಬಗ್ಗೆ ಸಹಾನುಭೂತಿ ಹೊಂದಿರುವ ಅಮೆರಿಕದ ಪತ್ರಕರ್ತ ವಿಲಿಯಂ ಹಿಂಟನ್ ತನ್ನ 'The Great Reversal' ಎಂಬ ಪುಸ್ತಕದಲ್ಲಿ ೧೯೭೮–೮೯ರ ಮಧ್ಯ ಕಾಲದಲ್ಲಿ ಚೀನಾದ ಆಳುವ ವರ್ಗವು ಹೇಗೆ ಕ್ರಾಂತಿ ವಿರೋಧಿಯಾಗಿ ಮಾರ್ಪಟ್ಟು, ಸಮಾಜವಾದಿ ಹಾದಿಯಿಂದ ಹೇಗೆ ದೂರ ಸರಿಯಿತೆನ್ನುವುದರ ವಿವರಗಳನ್ನು ನೀಡುತ್ತಾನೆ. ಕ್ರಾಂತಿಯ ಸಮಯದಲ್ಲಿ ಮತ್ತು ಆಮೇಲೆ ಚೀನಾದ ಸಾಮಾನ್ಯ ಜನರೂ ಪಾಲ್ಗೊಳ್ಳಬಹುದಾಗಿದ್ದ ವ್ಯವಸ್ಥೆ ಅದೃಶ್ಯವಾಗಿ ರಾಜಕೀಯವಾಗಿ ಮಾತ್ರ ಕಮ್ಯುನಿಸ್ಟ್ ಎಂದು ತನ್ನನ್ನು ತಾನು ಕರೆದುಕೊಳ್ಳುವ ಸರ್ಕಾರ ಇನ್ನೆಲ್ಲ ವಿಷಯಗಳಲ್ಲಿಯೂ–ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗಗಳಿಗೆ ಸಂಬಂಧಿಸಿದಂತೆ–ಬಂಡವಾಳಶಾಹಿ ಮಾರ್ಗವನ್ನೇ ಹಿಡಿದಿರುವುದನ್ನು ಇಂದು ಚೀನಾದಲ್ಲಿ ಕಾಣಬಹುದು. ೧೯೮೯, ಜೂನ್ ತಿಂಗಳ ೪ರಂದು ಟಿಯಾನ ನ್ಮೆನ್ ಚೌಕದಲ್ಲಿ ಸರ್ಕಾರಿ ಸೈನಿಕರಿಂದ 'ಪ್ರಜಾಪ್ರಭುತ್ವವಾದಿ' ಪ್ರದರ್ಶನಕಾರರ ಮೇಲೆ ನಡೆದ ಹಲ್ಲೆ ಹಾಗೂ ನರಮೇಧ ಈ ಆಂತರಿಕ ವೈರುಧ್ಯದ ಪರಿಣಾಮವೇ ಆಗಿದೆ. ದೇಶದ ಆರ್ಥಿಕ ಕ್ಷೇತ್ರದ ಹಲವು ರಂಗಗಳಲ್ಲಿ ಮುಕ್ತ ಮಾರುಕಟ್ಟೆ ನೀತಿಯನ್ನು ಬಹಿರಂಗವಾಗಿಯೇ ಇಂದು ಚೀನಾ ಸರ್ಕಾರ ಅನುಸರಿಸುತ್ತಿದೆ. ಆರ್ಥಿಕ ರಂಗದಲ್ಲಿ

ಕಾಣಿಸಿಕೊಂಡಿರುವ ಈ ಬದಲಾವಣೆಯ ಪರಿಣಾಮವಾಗಿ ಸಾಂಸ್ಕೃತಿಕವಾಗಿಯೂ ಚೀನೀಯರು ನಿಧಾನವಾಗಿಯಾದರೂ ಪಾಶ್ಚಾತ್ಯ ಸಂಸ್ಕೃತಿಯ ಕಡೆಗೆ ಆಕರ್ಷಿತರಾಗುತ್ತಿದ್ದಾರೆ. ತಮ್ಮ ಅಧಿಕಾರಕ್ಕಾಗಿ ಮಾತ್ರ ಮಾರ್ಕ್ಸ್‌ವಾದ -ಲೆನಿನ್‌ವಾದ-ಮಾವೋ ವಾದಗಳ ಮಾತನ್ನಾಡುವ ಚೀನಾ ಆಳುವವರ್ಗದಆಚರಣೆ ಈ ವಾದಗಳಿಂದ ಬಹಳ ದೂರ ನಡೆದಿದೆ.

ಮುಖ್ಯವಾಗಿ ಇಂಥ ಸಂದರ್ಭಗಳಲ್ಲಿಯೇ ಮಾವೋ ಹಾಗೂ ಮಾವೋನಂತಹ ವ್ಯಕ್ತಿಗಳ ಯೋಜನೆಗಳು ಮತ್ತು ಕಾರ್ಯಶೈಲಿ ಪ್ರಸ್ತುತವಾಗುತ್ತವೆ. ವೈಜ್ಞಾನಿಕ ಸಮಾಜವಾದವನ್ನು ತನ್ನ ಪರಿಸರಕ್ಕೆ ಅನುಗುಣವಾಗಿ ಅರ್ಥೈಸಿ ಅದನ್ನು ಕಾರ್ಯರೂಪಕ್ಕೆ ಇಳಿಸಿದ ಮಾವೋನ ಪ್ರಯತ್ನವು ಸಮಾಜವಲ್ಲಿ ಕೇವಲ ಹಣದ ಸಂಸ್ಕೃತಿಯನ್ನು ಹರಡಿ ಮಾನವನನ್ನು ಕೇಂದ್ರ ಸ್ಥಾನದಿಂದ ತೊಲಗಿಸುವ ಬಂಡವಾಳಶಾಹಿ ಸಿದ್ಧಾಂತ ತನ್ನ ಆಕ್ಟೋಪಸ್ ರೂಪವನ್ನು ಪ್ರದರ್ಶಿಸುತ್ತಿರುವ ಇಂದಿನ ಸಂದರ್ಭದಲ್ಲಿ ಭಾರತವೂ ಸೇರಿದಂತೆ ಹಲವು ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಅಪ್ರಸ್ತುತತೆ ಇನ್ನೂ ಹೆಚ್ಚು. ಮಾರ್ಕ್ಸ್‌ವಾದವನ್ನು ರಷ್ಯಾದ ಪರಿಸ್ಥಿತಿಗೆ ಹೊಂದಿಸಿ ಅದರ ಮೂಲಕ ರಷ್ಯ ಮಹಾಕ್ರಾಂತಿಯನ್ನು ಸಂಘಟಿಸಿದ ಲೆನಿನ್ ನಂತರ ಈ ಇಬ್ಬರು ಚಿಂತಕರ ಸಿದ್ಧಾಂತವನ್ನು ಚೀನಾಕ್ಕೆ ಅನ್ವಯವಾಗುವಂತೆ ಅರ್ಥೈಸಿ ಅದನ್ನು ಕಾರ್ಯಗತ ಮಾಡಿದ ಮಾವೋನ ಸಿದ್ಧಾಂತವು ಆರ್ಥಿಕ, ರಾಜಕೀಯ ಸಾಮಾಜಿಕ, ಸಾಹಿತ್ಯ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಎಂದಿಗೂ ತನ್ನ ಪ್ರಾಮುಖ್ಯತೆಯನ್ನು, ಹೊಸತನವನ್ನು ಉಳಿಸಿಕೊಳ್ಳುತ್ತವೆ. ಈ ಕಾರಣದಿಂದಾಗಿಯೇ ಜಗತ್ತಿನ ಹಲವೆಡೆ ಇಂದು ಮಾರ್ಕ್ಸ್-ಲೆನಿನ್-ಮಾವೋ ವಾದವು ಸಮಾಜವಾದಿ ಒಲವುಗಳುಳ್ಳ ಜನರ ನಡುವೆ ಹೆಚ್ಚು ಪ್ರಚಲಿತವಾಗುತ್ತಿವೆ.

ಅನುಬಂಧ ೧

ಮಾವೋ ಕವಿತೆ

ಮಾವೋ ಬರೆದ ಕವನಗಳು ಅವನ ಪ್ರತ್ಯಕ್ಷ ಅನುಭವದಿಂದ ಮೂಡಿಬಂದಂಥವು. ಅದರಲ್ಲೂ ಹಲವು ಕ್ರಾಂತಿಕಾರಿ ಚಳುವಳಿಯ ಸಂದರ್ಭವಲ್ಲಿ ಶತ್ರುವಿನ ವಿರುದ್ಧ ಹೋರಾಟ ನಡೆಸುತ್ತಿರುವಾಗ ಆ ಹೋರಾಟಕ್ಕೆ ಸ್ಪಂದಿಸಿದಾಗಿನ ಅಭಿವ್ಯಕ್ತಿಯ ರೂಪ. ಆದ್ದರಿಂದ ಮಾವೋನ ಕವಿತೆಗಳಲ್ಲಿ ಪ್ರಮುಖವಾಗಿ ನಾವು ಕಾಣುವ ಗುಣವೆಂದರೆ ಪ್ರಾಮಾಣಿಕತೆ. ಅಂಥ ಕೆಲವು ಕವನಗಳ ಕನ್ನಡ ಅನುವಾದವನ್ನು ಇಲ್ಲಿ ಕೊಡಲಾಗಿದೆ. ಈ ಕವನಗಳ ಅನುವಾದಕರು ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ.

೧. ಮಹಾ ಮುನ್ನಡೆ (The Long March)

[ದೀರ್ಘ ಪಯಣದ ಕಾಲದಲ್ಲಿ ಭಯಂಕರವಾಗಿ ಭೋರ್ಗರೆವ ಟಾಟು ನದಿ ಸೇತುವೆಗಿದ್ದ ಹಲಗೆಗಳನ್ನು ಚಿಯಾಂಗ್ ಕೈಷೇಕ್ ಸೈನ್ಯವು ತೆಗೆದುಬಿಟ್ಟಿತ್ತು. ಆ ನದಿಯನ್ನು ದಾಟಿದರೆ ನಂತರ ಉತ್ತರದ ಕಡೆ ಕೆಂಪು ಸೈನ್ಯ ನಿರಾತಂಕವಾಗಿ ನಡೆಯಬಹುದಿತ್ತು. ಆ ನದಿಯನ್ನು ದಾಟುವ ಯತ್ನದಲ್ಲಿ ಹಲವಾರು ಯೋಧರು ಬಲಿಯಾದರು. ಅವರ

ಬಲಿದಾನದೊಂದಿಗೆ ಟಾಟೂ ನದಿಯನ್ನು ದಾಟುವಲ್ಲಿ ಕೆಂಪು ಸೈನ್ಯವು ಯಶಸ್ವಿಯಾಯಿತು. ಇಲ್ಲದಿದ್ದರೆ ಇಡೀ ಕೆಂಪು ಸೈನ್ಯ ನಾಶವಾಗುವ ಅಪಾಯವಿತ್ತು.]

ಮಹಾಮನ್ನಡೆ ಯಾತ್ರೆಯ ಯಾತನೆಗಳ ಲೆಕ್ಕಿಸುವುದಿಲ್ಲ ಕೆಂಪು ಸೈನ್ಯ
ಹತ್ತು ಸಾವಿರ ಹೆಬ್ಬಂಡೆಯನ್ನೂ ಪ್ರವಾಹಗಳನ್ನೂ ಹಗುರಾಗಿ
ದಾಟುತ್ತದೆ
ಐದು ಶಿಖರಾಗ್ರಗಳು ನಯವಾಗಿ ತೂಗುತ್ತವೆ ತೆರೆಗಳಂತೆ
ಘನವಂತವೂ ಮೆಂಗ್ ಸರಿಯುತ್ತಿದೆ ಸುಣ್ಣನೆ ಮಣ್ಣ ಹನಿಗಳಾಗಿ
ಬಂಗಾರ ಮರಳ ತೀರದ ನೀರು ತೊಯ್ದಿದ
ಕೋಡಗಳಲ್ಲಿಳಿಜಾರುಗಳು ಒಣಗತೊಡಗಿವೆ
ಟಾಟೂ ನದಿಗೆ ಬೇಲಿಯಾದ ಕಬ್ಬಿಣದ ಸರಪಳಿಗಳು
ತಣ್ಣಗೆ ಕೊರೆಯುತ್ತಿವೆ
ಮಿನ್‌ಶಾನ್‌ನ ಸಾವಿರಲೀಗುಗಳ ಹಿಮವ ಖುಷಿಯಾಗಿ ಕ್ರಮಿಸಿ
ಮೂರು ಸೈನ್ಯಗಳು ಮುನ್ನಡೆದಿವೆ
ಪ್ರತಿಯೊಂದು ಮುಖವೂ ಮಿನುಗುತ್ತಿದೆ.

– ೧೯೩೫

೨. ಕುನ್ ಲುನ್

ನೆಲದಿಂದ ನೀಲಿ ಆಕಾಶಕ್ಕೆ ಚಾಚಿಕೊಂಡಿರುವ
ಓ ಮಹಾಕಾಯ ಕುನ್ ಲುನ್
ಮನುಷ್ಯ ಲೋಕದಲ್ಲಿ ಅತ್ಯಂತ ಸುಂದರವಾದದ್ದನ್ನೆಲ್ಲ ಕಂಡಿರುವೆ
ನೀನು
ನಿನ್ನ ಮೂವತ್ತು ಲಕ್ಷ ಬೆಳ್ಳನೆಯ ಜೇಡ ಡ್ರಾಗನ್‌ಗಳು
ಓಟ ಕಿತ್ತುವಾಗ ಕೊರೆವ ಚಳಿ ಹಬ್ಬಿಸಿ ಆಕಾಶವನ್ನು
ಹೆಪ್ಪುಗಟ್ಟಿಸುತ್ತವೆ
ಬೇಸಿಗೆಯ ದಿನಗಳಲ್ಲಿ ಕರಗುವ ನಿನ್ನ ನಿರ್ಝರಗಳು

ಮನುಷ್ಯರನ್ನೆ ಮೀನು ಆಮೆಗಳನ್ನಾಗಿ ಮಾರ್ಪಡಿಸಿ
ನದಿ ಝರಿಗಳಿಗೆ ನುಗ್ಗಿ ಪ್ರವಹಿಸುತ್ತವೆ
ಈ ಸಾವಿರದ ಶರತ್ಕಾಲಗಳಲ್ಲಿ ನೀನು ಎಸಗಿರುವ
ಒಳ್ಳೆಯದು ಹಾಗೂ ಕೆಟ್ಟದರ ಮೇಲೆ
ನಿರ್ಣಯ ನೀಡುವರಾರು ?

ಓ ಕುನ್ ಲುನ್
ಈಗ ನಾನು ನಿನಗೆ ಹೇಳುವೆ ಕೇಳು
ನಿನ್ನ ಅಷ್ಟೆಲ್ಲ ಎತ್ತರವೂ ಬೇಕಿಲ್ಲ
ನಿನ್ನ ಅಷ್ಟೆಲ್ಲ ಹಿಮವೂ ಬೇಕಿಲ್ಲ
ನಾನು ಸ್ವರ್ಗದ ಮೇಲೇರಿ ನಿಂತು
ನನ್ನ ಖಡ್ಗ ಒರೆಯಿಂದ ಹೊರಗೆಳೆದನೆಂದರೆ
ಮುಗಿಯಿತು

ನಿನ್ನನ್ನು ಮೂರು ಚೂರಾಗಿ ಸೀಳಿ ಹಾಕುವೆ
ಯೂರೋಪಿಗೆ ಒಂದು ತುಂಡೆಸೆವೆ
ಅಮೇರಿಕಕ್ಕೆ ಒಂದು ತುಂಡೆಸೆವೆ
ಇನ್ನೊಂದು ತುಂಡನ್ನು ಪೌರ್ವಾತ್ಯದಲ್ಲೇ ಇಟ್ಟುಕೊಳ್ಳುವೆ
ಆಗ ಶಾಂತಿ ನೆಲೆಸುವುದು
ಪ್ರಪಂಚದಾದ್ಯಂತ
ಸಮಶಾಖ ಸಮಶೀತ ನೆಲೆಸುವುದು
ಭೂಗೋಳದೆಲ್ಲ ಕಡೆ.

– ೧೯೩೫

೩. ಲಿಯೂಪಾನ್ ಪರ್ವತ

[ಮಹಾ ಪ್ರಸ್ಥಾನದ ಕಾಲದಲ್ಲಿ ದಾಟಿದ ಒಂದು ಪರ್ವತ. ಹಗ್ಗಗಳ ಹಿಡಿದೇ ಆ ದುರ್ಗಮಶಿಖರ ಹತ್ತಬೇಕಿತ್ತು. ಕೆಂಪು ಸೈನ್ಯದ ಉದ್ದನೆಯ. ಸಾಲು ಹಲವಾರು ಮೈಲಿಗಳಿತ್ತು. ಹಿಂದಿನ ತಂಡ ಆ ಪರ್ವತವನ್ನು

ದಾಟಲು ಸಜ್ಜಾಗುವ ಹೊತ್ತಿಗೆ ಹಲವಾರು ಸಲ ಆವಾಗಲೇ ಬಳಸಿದ್ದ ಹಗ್ಗ ಮಂಜಿನಲ್ಲಿ ಮುಳುಗಿ ಹೋಗುತ್ತಿತ್ತು. ಮನುಷ್ಯರು, ವಸ್ತುಗಳು ಹಾಗೂ ಪ್ರಾಣಿಗಳು–ಈ ಎಲ್ಲವನ್ನೂ ಆ ಶಿಖರ ಹಾದು ದಾಟಿಸಲಾಯಿತು.]

ಆಕಾಶ ಬಹಳ ಮೇಲಿದೆ, ಮೋಡಗಳು ಬಿಳಿಚಿಕೊಂಡಿವೆ
ಕಾಡುಬಾತುಗಳು ಮಾಯವಾಗುತ್ತಿರುವ ದಕ್ಷಿಣಕ್ಕೆ ಕಣ್ಣಾಗಿದ್ದೇವೆ
ಈಗಾಗಲೇ ಇಪ್ಪತ್ತು ಸಾವಿರ ಲೀಗುಗಳ ಅಳೆದು ಹಾಕಿರುವ ನಾವು
ಮಹಾಗೋಡೆ ಮುಟ್ಟಲು ಸೋತರೆ, ಗಂಡಸರೆ ಅಲ್ಲ.

ಲಿ ಯೂ ಪಾನ್ ಪರ್ವತದ ಎತ್ತರದ ಶಿಖರದ ಮೇಲೆ
ಕೆಂಬಾವುಟಗಳು ಹಾರಾಡುತ್ತಿವೆ ಸ್ವಚ್ಛಂದ ಪಡುವಣ ಗಾಳಿಯಲ್ಲಿ
ಉದ್ದಾನುದ್ದ ಹಗ್ಗವ ಕೈಯಲ್ಲಿ ಹಿಡಿದು ನಿಂತಿದ್ದೇವೆ ಇವತ್ತು
ಆ ಬೂದು ಬಣ್ಣದ ಡ್ರಾಗನ್ನನ್ನು ಹೆಡಮುರಿಗೆ ಕಟ್ಟುವುದು
ಯಾವುತ್ತು?

–೧೯೩೫

೪. ಹಿಮ

[ಮಹಾ ಪ್ರಸ್ಥಾನದ ನಂತರ ಶೆನ್ಸಿ ನೆಲೆಗೆ ಬಂದು ತಲುಪಿದ ಕೆಂಪು ಸೈನ್ಯವು ಅಲ್ಲಿಯೇ ತನ್ನ ಸ್ಥಾವರವನ್ನು ಸ್ಥಾಪಿಸಿತು. ಈ ಯೆನಾನ್ ನೆಲೆಯ ಅನುಭವ ಚೀನಾ ಕಮ್ಯುನಿಸ್ಟ್ ಪಕ್ಷಕ್ಕೆ ತುಂಬಾ ಮುಖ್ಯವಾದದ್ದು.]

ಉತ್ತರ ದೇಶದ ದೃಶ್ಯ :
ಬರ್ಫದಲ್ಲಿ ಬಿಗಿದುಕೊಂಡ ನೂರು ಲೀಗುಗಳು
ಮುರಗಾಳಿ ಹಿಮದ ಇನ್ನೂ ನೂರು ಲೀಗುಗಳು
ಮಹಾಗೋಡೆಯ ಎರಡೂ ಸೈಡುಗಳು
ಒಂದಗಾಧ ಬೆಳ್ಳಂಬಿಳಿಯ ಏಕಾಕಾರ

ಹಳದಿ ನದಿಯ ರಭರಭಸದ ಸೆಳೆತ ನಿಶ್ಚಲವಾಗಿದೆ ತುದಿಯಿಂದ
ತುದಿಗೆ

ಪರ್ವತಗಳು ನರ್ತಿಸುತ್ತಿವೆ ಬೆಳ್ಳಿ ಸರ್ಪಗಳ ಹಾಗೆ
ಶೆನ್ಸಿ–ಶಾನ್ಸಿ ಗುಡ್ಡಗಾಡು ಮೇಣ ಬಣ್ಣದ ಆನೆದಂಡಿನಂತೆ ನುಗ್ಗಿ
ಬರುತ್ತಿದೆ

ಆಕಾರದಲ್ಲಿ ಆಕಾಶದೊಡನೆ ಸ್ಪರ್ಧಿಸುತ್ತ
ಒಂದು ಸುಂದರ ದಿವಸ
ಭೂಮಿ ಬಿಳಿ ಉಡುಗೆ ತೊಟ್ಟು, ಕೆಂಪು ಮುಡಿದು
ಇನ್ನೂ ಸುಂದರವಾಗುತ್ತದೆ.

ಇಷ್ಟೊಂದು ಸಂಪತ್ತು ಸೌಂದರ್ಯ ತುಂಬಿರುವ ಈ ನಾಡು
ಎಷ್ಟೊಂದು ವೀರರು ಗೌರವದಿಂದ ತಲೆ ಬಾಗಿದ್ದಾರೆ ಈ ನಾಡಿಗೆ
ಆದರಯ್ಯೋ! ಚಿನ್ ಶಿ ಹುವಾಂಗ್, ಹ್ಯಾನ್‌ವೂಟಿ ಇಬ್ಬರಿಗೂ
ಸಾಹಿತ್ಯದ ಚೆಲುವು ಗೊತ್ತೇ ಇರಲಿಲ್ಲ
ತಾಂಗ್ ತಾಯ್ ತ್ಸುಂಗ್, ತುಂಗ್ ತಾಯ್ತ್ಸುಗಳ ಆತ್ಮದಲ್ಲಿ
ಕಾವ್ಯವಿರಲಿಲ್ಲ

ಚೆಂಗಿಜ್‌ಖಾನನೋ ಒಂದೆ ದಿನ ಮಿನುಗಿದ ಸ್ವರ್ಗದ ಹೆಮ್ಮೆಯ
ಪುತ್ರ
ಬಿಲ್ಲೆತ್ತಿ ಹಿಡಿದರೂ ಬರಿ ಹದ್ದುಗಳ ಹೊಡೆಯುವುದರಲ್ಲೆ ಆಯಿತು
ಎಲ್ಲರು ಗತಕಾಲದವರು ಎಲ್ಲರು ನಡೆದು ಹೋಗಿದ್ದಾರೆ
ನಿಜವಾದ ಮಹಾ ಮಾನವರಿಗಾಗಿ
ನಮ್ಮ ಯುಗದಲ್ಲೆ ಹುಡುಕಿ ನೋಡಿ

–೧೯೩೬

೫. ಶಾವೋಶಾನ್‌ಗೆ ಮತ್ತೆ ಹೋದಾಗ

ನೆನೆಸಿಕೊಂಡೆ ಮಸುಮಸುಕು ಕನಸಿನ ಹಾಗೆ
ಮೂವತ್ತೆರಡು ವರ್ಷಗಳ ಹಿಂದಿನ ಪುಟ್ಟೂರ ಮಣ್ಣನ್ನು
ಶಪಿಸಿದೆ ದೂರ ಓಡಿರುವ ಗತಕಾಲವನ್ನು
ಸರ್ವಾಧಿಕಾರಿಯ ಕಪ್ಪು ಕುಂಜಗಳು ಚಾಟಿ ಹಿಡಿದಿದ್ದಂತೆಯೇ
ಬಡಿದೆಬ್ಬಿಸಿತು ಕೆಂಬಾವುಟ ಭರ್ಜಿ ಹಿಡಿದ ಜೀತದಾಳನ್ನು
ಘೋರ ಬಲಿದಾನ ಬೆಂಬಲಿಸುತ್ತದೆ ಧೀರ ತೀರ್ಮಾನವನ್ನು
ಹೊಸ ಆಕಾಶದಲ್ಲಿ ಹೊಳೆವಂತೆ ಮಾಡುತ್ತದೆ ಸೂರ್ಯ ಚಂದ್ರರನ್ನು

ಖುಷಿಯಾಗುತ್ತದೆ ನನಗೆ ಅಲೆಗಳ ಮೇಲೆ
ಅಲೆಗಳಂಥ ಭತ್ತ ಹುರುಳಿಗಳ ಹಸಿರು ಹಾಳೆಗಳ ನೋಡಿ
ಸುತ್ತಮುತ್ತಲು ಗೆದ್ದ ವೀರರು
ಸಂಜೆಗೆ ಮನೆಗೆ ಮುಖ ಮಾಡಿ ಬರುತ್ತಿದ್ದಾರೆ.

–೧೯೫೯

೬. ಚಾಂಗ್ ಶಾ

ನಿಂತಿರುವೆ ಏಕಾಕಿ ಶಿಶಿರದ ಚಳಿಯಲ್ಲಿ
ಕಿತ್ತಳೆ ದ್ವೀಪದ ತುತ್ತ ತುದಿಯಲ್ಲಿ
ಸಿಯಾಂಗ್ ನದಿ ಉತ್ತರಕ್ಕೆ ಹರಿವಲ್ಲಿ
ದಟ್ಟ ಹಸುರಿನ ದಟ್ಟ ಕಾಡುಗಳ ಬದಿಯಲ್ಲಿ

ಸಾವಿರದ ಬೆಟ್ಟಗಳು ಕಡುಗೆಂಪು ಒಳಗು ಹೊರಗು
ತಿಳಿ ನೀಲಿ ರಸದ ನೀರ ಹಾಳೆಯ ಮೇಲೆ
ನಾ ಮುಂದು ತಾ ಮುಂದು ಓಡುವ
ನಾಡ ದೋಣಿ ನೂರು
ನದಿಯಾಳದ ನಿರಾಳದಲ್ಲಿ ಸುಳಿದಾಡುವ ಮೀನುಗಳು

ಗರುಡಗಳು ಸೀಳುತ್ತಿವೆ ಗಾಳಿಯನ್ನು
ಹೆಪ್ಪುಗಟ್ಟಿರುವ ಆಕಾಶದಡಿ
ಜೀವ ಕೋಟಿಗಳ ಸ್ವಾತಂತ್ರ್ಯ ಹೋರಾಟ
ಇಷ್ಟೆಲ್ಲ ಅಗಾಧತೆಯ ಮೆಲುಕು ಹಾಕುತ್ತ
ಕೇಳಿಕೊಳ್ಳುವೆ ನಾನು ಈಸೀ ಮಾತೀತ ಸೀಮೆಯಲ್ಲಿ
ಮಾನವನ ಹಣೆಬರಹ ಆಳುವವನಾರು ?

ಅಸಂಖ್ಯಾತ ಸಂಗಾತಿಗಳ ಜೊತೆ ನಾನಿಲ್ಲಿ ಬಂದಿದ್ದೆ
ಅವಸರದ ಆ ತಿಂಗಳು ವರ್ಷಗಳ ನೆನಪು ಅಚ್ಚಳಿದಿಲ್ಲ
ಯುವಕರಿದ್ದೆವು ನಾವೆಲ್ಲ ಸಹಪಾಠಿಗಳು
ಪೂರ್ಣ ಹೂವಾಗರಳಿ ಬದುಕು ಬಿರಿಯುವ ವಯಸ್ಸು
ತುಂಬಿತ್ತು ನಮ್ಮೊಳಗೆ ವಿದ್ಯಾರ್ಥಿಗಳಿಗೆ ಹೇಳಿಸಿದ ಉತ್ಸಾಹ

ಕಿತ್ತೊಗೆದೆವು ಅಡೆತಡೆಗಳನ್ನೆಲ್ಲ ದಿಟ್ಟರಾಗಿ
ಕೈಚಾಚಿ ನಮ್ಮ ಬೆಟ್ಟ ನದಿಗಳ ಕಡೆಗೆ
ನಮ್ಮ ಮಾತಿಂದಲೇ ಹೊತ್ತಿಸುತ್ತಿದ್ದೆವು
ಜನರಲ್ಲಿ ಹೋರಾಟದ ಬೆಂಕಿ

ದೊಡ್ಡ ಶಕ್ತಿಗಳೆಲ್ಲ ನಮ್ಮ ಪಾಲಿಗೆ
ಬರಿ ದಡ್ಡ ಮಡ್ಡಿಗಳಾಗಿದ್ದರು
ನೆನಪಿದೆಯಾ ಇನ್ನೂ
ಮಧ್ಯ ಪ್ರವಾಹದಲ್ಲಿ ನಮ್ಮ
ರಟ್ಟೆಗಳು ನೀರ ಬಗೆದದ್ದು ?
ಓಡುವ ದೋಣಿಗಳಿಗೆ ಪ್ರತಿ
ಅಲೆಯೂ ಆಸರೆಯಾದದ್ದು ?

–೧೯೨೫

೭. ಹಳದಿ ಕ್ರೇನ್ ಟವರ್

ಒಂಬತ್ತು ಹೊಳೆಗಳು ಹರಿಯುತ್ತಿವೆ ನಾಡಿನುದ್ದಗಲಕ್ಕೂ
ಕಪ್ಪು ಕಪ್ಪು ಸಾಲು ಹಣೆದುಕೊಂಡಿದೆ ದಕ್ಷಿಣದಿಂದ ಉತ್ತರಕ್ಕೆ
ಮಸುಮಸುಕಾಗಿದೆ ಮಂಜು ಮಳೆಯ ದಟ್ಟ ಮಬ್ಬಿನಲ್ಲಿ
ಮಹಾನದಿಯನ್ನು ಅಡ್ಡಗಟ್ಟಿ ತರುಬಿದೆ ಆಮೆ ಮತ್ತು ಹಾವು.

ಹಳದಿ ಕೊಕ್ಕರೆ ಹಾರಿ ಹೋಗಿದೆ ಯಾರಿಗೆ ಗೊತ್ತು ಎಲ್ಲಿಗೆ?
ಬರಿ ಗೋಪುರ ಉಳಿದಿದೆ ಪ್ರವಾಸಿಗರ ಪಾಲಿಗೆ
ನನ್ನ ಪಾಲಿನ ದ್ರಾಕ್ಷಾರಸದ ಉಕ್ಕಿ ಹರೆವ ಪ್ರವಾಹಕ್ಕೆ ಸುರಿದೆ
ಅಲೆಗಳ ಜೊತೆ ಉಕ್ಕುತ್ತದೆ ನನ್ನೆದೆಯ ಪ್ರವಾಹ.

—೧೯೨೭

೮. ಡಬಲ್ ನೈನ್ತ್

ಮನುಷ್ಯನಿಗೆ ಸುಲಭವಾಗಿ ವಯಸ್ಸಾಗುತ್ತದೆ, ನಿಸರ್ಗಕ್ಕೆ
ಆಗುವುದಿಲ್ಲ
ವರ್ಷದಿಂದ ವರ್ಷಕ್ಕೆ ಮರಳಿ ಬರುತ್ತದೆ ಡಬಲ್ ನೈನ್ತ್ ದಿನ
ರಣರಂಗದಲ್ಲಿ ಬೆಳೆದ ಹಳದಿ ಹೂಗಳ ವಾಸನೆ ಹೆಚ್ಚುತ್ತದೆ
ಈ ಡಬಲ್ ನೈನ್ತಿನ ದಿನ.

ಪ್ರತಿ ಮಳೆಗಾಲದಲ್ಲೂ ಗಾಳಿ ಭೀಕರವಾಗಿ ಬೀಸುತ್ತದೆ
ವಸಂತದ ವೈಭವಕ್ಕೆ ವಿರುದ್ಧವಾಗಿ
ಆದರೂ ನೋಡಿರಿ ಅಲ್ಲಿ ಮಂಜು ಮುಸುಕಿದಾಕಾಶ
ಅನಂತ ಆಕಾಶದ ನೀರ ವಿಸ್ತಾರ
ವಸಂತದ ವೈಭವವನ್ನು ಮೀರಿಸುವ ಹಾಗೆ

—೧೯೨೯

೯. ತಪೋತಿ

ಕೆಂಪು ಕಿತ್ತಳೆ ಹಳದಿ ಹಸಿರು ನೀಲಿ ನೀಲ ನೇರಳೆ
ಬಣ್ಣಗಳ ರಿಬ್ಬನ್ನುಗಳ ಆಕಾಶಕ್ಕೆ ಝುಳಝುಳಪಿಸುತ್ತ
ಕುಣಿಯುತ್ತಿರುವವರಾರು ?
ಮಳೆನಿಂತ ನಂತರ ಓರೆಯಾಗಿ ಸೂರ್ಯ ವಾಪಸು ಬಂದಿದ್ದಾನೆ
ಬೆಟ್ಟ ಕಣಿವೆಗಳು ಇನ್ನಷ್ಟು ಕಡು ನೀಲಿಯಾಗಿವೆ.

ಇಲ್ಲೊಮ್ಮೆ ನಡೆದಿತ್ತು ಒಂದು ಭೀಕರ ಯುದ್ಧ
ಹಳ್ಳಿ ಗೋಡೆಗಳು ಗುಂಡು ಗಾಯಗಳಿಂದ ತುಂಬಿದ್ದವು
ಈಗ ಅದೆ ಗೋಡೆಗಳು ಕಣಿವೆ ಬೆಟ್ಟಗಳ ಅಲಂಕರಿಸಿವೆ
ಅವುಗಳನ್ನು ಚೆಲುವಾಗಿಸಿವೆ ಮತ್ತಷ್ಟು.

–೧೯೩೩

೧೦. ಚಿಂಗ್ ಕಾಂಗ್ ಶಾನ್

ನಮ್ಮ ಬಾವುಟಗಳು ಫಲಕಗಳು ಹಾರಾಡುತ್ತವೆ ಬೆಟ್ಟಗಳ
ಬುಡದಲ್ಲಿ
ನಮ್ಮ ಭೇರಿ ಕಹಳೆಗಳು ಮೊರೆಯುತ್ತವೆ ಬೆಟ್ಟಗಳ ತುದಿಯಲ್ಲಿ
ನಮ್ಮನ್ನು ಸುತ್ತುವರೆದಿವೆ ಸಾವಿರ ಸಾವಿರ ಸಂಖ್ಯೆಯ ಶತೃ ಸೈನ್ಯ
ನಾವು ನಿಂತಿದ್ದೇವೆ ಗಟ್ಟಿಯಾಗಿ ಪಟ್ಟುಬಿಡದೆ ನೆಲಬಿಟ್ಟು ಕೊಡದೆ.

ನಮ್ಮ ರಕ್ಷಕ ಪಡೆಗಳು ಕಬ್ಬಿಣದ ಕವಚ ಧರಿಸಿ ಸಿದ್ಧವಾಗಿದೆ
ನಮ್ಮ ಇಚ್ಛಾ ಶಕ್ತಿ ಭದ್ರ ಕೋಟೆಯಂತೆ ಅಭೇದ್ಯವಾಗಿದೆ
ಹುಯಾಂಗ್ ಯಾಂಗ್ ಬೇಹ್ ಕಡೆಯಿಂದ ಫಿರಂಗಿಗಳು
ಗುಡುಗುತ್ತಿವೆ
ಇದೀಗ ಬಂದ ಸುದ್ದಿ: ಶತೃ ಸೈನ್ಯ ಕಾಲು ಕಿತ್ತುತ್ತದೆ,
ಕತ್ತಲಲ್ಲಡುಗುತ್ತದೆ.

ಅನುಬಂಧ ೨

ವಿವಿಧ ವಿಷಯಗಳ ಬಗ್ಗೆ ಮಾವೋನ ಅಭಿಪ್ರಾಯಗಳು:

'ಸಾಮಾಜಿಕ ಕಾರ್ಯದಲ್ಲಿ ನಿರತನಾಗಿರುವ ಪ್ರತಿಯೊಬ್ಬ ಕಮ್ಯುನಿಸ್ಟ್‌ನೂ ಎಲ್ಲಾ ಬಗೆಯ ಪಕ್ಷಪಾತ ಧೋರಣೆಯಿಂದಲೂ ದೂರವಿದ್ದು ಇತರರಿಗೆ ಮಾದರಿಯಾಗಬಹುದಾದ ಚಾರಿತ್ರ್ಯವನ್ನು ಹೊಂದಿರಬೇಕು. ಜನರ ನಡುವೆ ಕೆಲಸ ಮಾಡುವ ಕಮ್ಯುನಿಸ್ಟ್ ಕಾರ್ಯಕರ್ತ ತಾನು ಜನರ ಯಜಮಾನ ಅಥವಾ ನಾಯಕ ಎಂಬಂತೆ ಅಲ್ಲದೆ ಅವರಲ್ಲಿ ಒಬ್ಬನಾಗಿ, ಅವರ ಗೆಳೆಯನಾಗಿ ದುಡಿಯಬೇಕು. ತನ್ನ ಹಿತಕ್ಕಿಂತಲೂ ಜನರ ಹಿತವೇ ಮುಖ್ಯವೆನ್ನುವುದು ಅವನ ನಂಬಿಕೆಯಾಗಿರಬೇಕು. ಸ್ವಾರ್ಥರಾಹಿತ್ಯ, ಕರ್ತವ್ಯ ನಿಷ್ಠೆ, ಸಾಮಾಜಿಕ ಕಾರ್ಯಕ್ಕೆ ಸ್ವಯಂ ಸಮರ್ಪಣೆ–ಇವು ಅವನನ್ನು ಗೌರವಾನ್ವಿತ ವ್ಯಕ್ತಿಯನ್ನಾಗಿ ಮಾಡುವವು.'

'ಮಾರ್ಕ್ಸ್‌ವಾದ– ಲೆನಿನ್ ವಾದಗಳು ಸಾರ್ವತ್ರಿಕವಾದವು. ಅವುಗಳನ್ನು ಕುರುಡು ಸಿದ್ಧಾಂತಗಳೆಂಬಂತೆ ಅಲ್ಲದೆ ನಮ್ಮ ಕಾರ್ಯಕ್ಕೆ ಮಾರ್ಗದರ್ಶಕ ಸೂತ್ರಗಳೆಂದು ತಿಳಿದು ಅಧ್ಯಯನ ಮಾಡಬೇಕು.'

'ಒಂದು ಸಮಾಜದ ಸಂಸ್ಕೃತಿಯು ಆ ಸಮಾಜದ ರಾಜಕೀಯ, ಆರ್ಥಿಕ ಸ್ಥಿತಿಗಳ ಸೈದ್ಧಾಂತಿಕ ಪ್ರತಿಫಲನವೇ ಆಗಿದೆ. (ಆ ಸಮಾಜದಲ್ಲಿನ) ಸಾಂಸ್ಕೃತಿಕ ಕ್ರಾಂತಿಯೂ ಸಹ ಆ ಸಮಾಜದ

ರಾಜಕೀಯ, ಆರ್ಥಿಕ ಕ್ರಾಂತಿಯ ಸೈದ್ಧಾಂತಿಕ ಪ್ರತಿಫಲನವಾಗಿರುತ್ತವೆ; ಮತ್ತು ಅವುಗಳಿಗೆ ಅಧೀನವಾಗಿರುತ್ತವೆ.'

'ಮಾರ್ಕ್ಸ್‌ವಾದವನ್ನು ಕೇವಲ ತಾತ್ವಿಕ ದೃಷ್ಟಿಯಿಂದ ನೋಡಿ ಮೀರಲಾರದ ಒಂದು ಸಿದ್ಧಾಂತವೆಂದು ಬಗೆಯುವುದು ಸೂತ್ರಾಂಧತೆ ಎನಿಸಿಕೊಳ್ಳುತ್ತದೆ. ಮಾರ್ಕ್ಸ್‌ವಾದದ ಮೂಲಭೂತ ಸೂತ್ರಗಳನ್ನು ಅಲ್ಲಗಳೆಯುವುದು ಪರಿಷ್ಕರಣವಾದವೆನ್ನಿಸಿಕೊಳ್ಳುತ್ತದೆ.

'ಮಾರ್ಕ್ಸ್‌ವಾದವು ಒಂದು ವೈಜ್ಞಾನಿಕ ಸಿದ್ಧಾಂತವಾದ್ದರಿಂದ ಅದು ವಿಮರ್ಶೆಗೆ ಹೆದರಬೇಕಾಗಿಲ್ಲ. ಹಾಗೇನಾದರು ಹೆದರಿದ್ದೇ ಆದರೆ ಅಥವಾ ವಿಮರ್ಶೆಯ ಮೂಲಕ ಅದನ್ನು ಅಲ್ಲಗೆಳೆಯಬಹುದಾದರೆ ಅದಕ್ಕೆ ಯಾವುದೇ ಬೆಲೆಯನ್ನು ಕೊಡಬೇಕಾಗಿಲ್ಲ.'

'ವರ್ಗ ರಾಜಕೀಯವೇ, ಜನರ ರಾಜಕೀಯವೇ ನಿಜವಾದ ರಾಜಕೀಯ. ಕ್ರಾಂತಿಕಾರಿಯಾಗಲಿ ಕ್ರಾಂತಿ ವಿರೋಧಿಯಾಗಲಿ ಎರಡು ವರ್ಗಗಳ ನಡುವಿನ ಸಂಘರ್ಷವೇ ರಾಜಕೀಯವೆನಿಸಿಕೊಳ್ಳುತ್ತದೆ. ಅಷ್ಟೇ ಹೊರತು ಕೆಲವು ವ್ಯಕ್ತಿಗಳ ವೈಯಕ್ತಿಕ ಚಿತಾವಣೆಗಳು ರಾಜಕೀಯವಾಗುವುದಿಲ್ಲ.'

'ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಮತ್ತು ಸ್ಟಾಲಿನ್‌ರ ಪ್ರತಿಭೆ ಎಷ್ಟೇ ಇರಲಿ, ಅವರು ವರ್ಗ ಸಂಘರ್ಷದ ಬಗ್ಗೆ ಸ್ಪಷ್ಟ ತಿಳುವಳಿಕೆಯನ್ನು ಹೊಂದಿದ್ದುದಕ್ಕೆ ಕಾರಣವೆಂದರೆ ಅವರು ತಮ್ಮ ಕಾಲದಲ್ಲಿನ ವರ್ಗ ಸಂಘರ್ಷದಲ್ಲಿ ಹಾಗೂ ತಮ್ಮ ಯೋಜನೆಗಳ ಶಾಸ್ತ್ರೀಯ ಪ್ರಯೋಗದ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಅವಕಾಶ ಅವರಿಗೆ ಒದಗಿದ್ದು. ಈ ಪರಿಸ್ಥಿತಿಯಲ್ಲಿಯೇ ಇಲ್ಲದಿದ್ದರೆ ಎಂಥ ಪ್ರತಿಭಾವಂತನಾದರೂ ಏನನ್ನೂ ಸಾಧಿಸಲಾರ.'

'ಒಂದು ಭಾವನೆಯಾಗಿ ಪ್ರೀತಿ ಆಚರಣೆಯ ಪರಿಣಾಮವಾಗಿ ಅಸ್ತಿತ್ವದಲ್ಲಿರುವಂಥದು....... ಕಾರಣವಿಲ್ಲದ ಪ್ರೀತಿ ಅಥವಾ ದ್ವೇಷ ಈ ಪ್ರಪಂಚದಲ್ಲಿ ಸಾಧ್ಯವಿಲ್ಲ. ಒಟ್ಟಾರೆ ಮಾನವ ಸಮಾಜದ ಬಗ್ಗೆ ಪ್ರೀತಿ

ಎನ್ನುವುದೂ ಸಾಧ್ಯವಿಲ್ಲ. ಹಿಂದಿನಿಂದಲೂ ಆಳುವ ವರ್ಗಗಳು ಇವರ ಬಗ್ಗೆ ಹೇಳುತ್ತಲಿವೆ, ಜ್ಞಾನಿಗಳೆನಿಸಿಕೊಂಡವರೂ ಅದೇ ಮಾತನ್ನೇ ಜಪಿಸುತ್ತಿದ್ದಾರೆ. ಆದರೆ ಯಾರು ಇದುವರೆಗೂ ಅದನ್ನು ಆಚರಣೆಗೆ ತಂದಿದ್ದಿಲ್ಲ. ಈ ವರ್ಗ ಸಮಾಜದಲ್ಲಿ ಅದು ಸಾಧ್ಯವಿಲ್ಲ. ಎಲ್ಲ ವರ್ಗಗಳೂ ಅದೃಶ್ಯವಾಗಿ ವರ್ಗರಹಿತ ಸಮಾಜ ಸೃಷ್ಟಿಯಾದಾಗ ಮಾತ್ರ ಇಂಥ ಪ್ರೀತಿ ಸಾಧ್ಯ.’

‘ಮಾರ್ಕ್ಸ್‌ವಾದವನ್ನು ಅಧ್ಯಯನ ಮಾಡವುದೆಂದರೆ ಗತಿತಾರ್ಕಿಕ ಭೌತವಾದ ಹಾಗೂ ಚಾರಿತ್ರಕ ಭೌತವಾದಗಳ ಬುನಾದಿಯ ಮೇಲೆ ನಿಂತು ನಮ್ಮ ಸಮಾಜವನ್ನು, ಸಾಹಿತ್ಯ ಕಲೆಗಳನ್ನು ಅರ್ಥಮಾಡಿ ಕೊಳ್ಳುವುದು ಎಂದು ಅರ್ಥ. ಸಾಹಿತ್ಯದ ಹೆಸರಿನಲ್ಲಿ ಸಿದ್ಧಾಂತ ಪ್ರಬಂಧಗಳನ್ನು ಬರೆಯುವುದು ಎಂದಲ್ಲ. ಮಾರ್ಕ್ಸ್‌ವಾದವು ಸಾಹಿತ್ಯ ಹಾಗೂ ಕಲೆಗಳ ಸೃಷ್ಟಿಯಲ್ಲಿ ಭಾಗಿಯಾಗಬಹುದೇ ಹೊರತು ಅದೇ ಅವುಗಳ ಜಾಗವನ್ನು ಆಕ್ರಮಿಸಲಾಗದು’.

‘ತಪ್ಪು ರಾಜಕೀಯ ದೃಷ್ಟಿಕೋನ ಹೊಂದಿರುವ ಬರಹ, ಅಥವಾ ಕೇವಲ ಘೋಷಣೆಯ ಮಟ್ಟವಲ್ಲಿಯೇ ಉಳಿದುಬಿಟ್ಟು ರಾಜಕೀಯವಾಗಿ ಸರಿಯಾದ ದೃಷ್ಟಿಕೋನವಿದ್ದರೂ ಕಲೆಯ ಸತ್ವವಿಲ್ಲದ ಬರಹ–ಈ ಎರಡು ರೀತಿಯ ಬರಹಗಳನ್ನೂ ವಿರೋಧಿಸಬೇಕು.’

‘ಲೇಖಕನೊಬ್ಬನು ಜನರಿಗಾಗಿ ಬರೆಯುವುದರ ಮೂಲಕ ಅವರನ್ನು ಚೈತನ್ಯಶೀಲರನ್ನಾಗಿ ಮಾಡಬಲ್ಲ; ಅವರ ವಿದ್ಯಾರ್ಥಿಯಾಗಿದ್ದಾಗ ಮಾತ್ರ ಅವರ ಅಧ್ಯಾಪಕನಾಗಬಲ್ಲ.’

‘ಕಲೆಗಾಗಿ ಕಲೆ ಎನ್ನುವುದಾಗಲಿ, ಅದು ವರ್ಗ ಹಾಗೂ ರಾಜಕೀಯಗಳಿಗೆ ಅತೀತವಾಗಿರುತ್ತವೆ ಎನ್ನುವುದಾಗಲೀ ಸುಳ್ಳು;....... ಕಲೆ ಹಾಗೂ ಸಾಹಿತ್ಯ ರಾಜಕೀಯಕ್ಕೆ ಅಧೀನವಾಗಿರುತ್ತವೆ ಮತ್ತು ರಾಜಕೀಯವನ್ನು ಪ್ರಭಾವಿತಗೊಳಿಸುತ್ತವೆ.’

'ಸಾಹಿತ್ಯವನ್ನು ಜನಪ್ರಿಯಗೊಳಿಸುವುದೆಂದರೆ ಜನರಿಗಾಗಿ ಜನಪ್ರಿಯಗೊಳಿಸುವುದು ಎಂದೂ, ಮತ್ತು ಅದರ ಮಟ್ಟವನ್ನು ಹೆಚ್ಚಿಸುವುದೆಂದರೆ ಜನರಿಗಾಗಿ ಹೆಚ್ಚಿಸುವುದೆಂದೂ ಅರ್ಥ. ಸಾಹಿತ್ಯದ ಮಟ್ಟವು ಜನಪ್ರಿಯಗೊಳ್ಳುವ ಪ್ರಕ್ರಿಯೆಯನ್ನು ಅವಲಂಬಿಸಿರುತ್ತದೆ ಮತ್ತು ಅದರ ದಿಕ್ಕನ್ನೂ ಸೂಚಿಸುತ್ತದೆ.'

'ಕಲೆ ಮತ್ತು ಸಾಹಿತ್ಯದಲ್ಲಿ ಚಿತ್ರಿತವಾಗಿರುವ ಜೀವನವು ನಿಜ ಜೀವನಕ್ಕಿಂತಲೂ ಎತ್ತರದ ಸ್ತರದಲ್ಲಿ ಇರಬಲ್ಲದು; ಮತ್ತು ಹಾಗೆ ಇರಲೇ ಬೇಕು. ಅದು ಹೆಚ್ಚು ಗಾಢವಾಗಿ, ಪ್ರಾತಿನಿಧಿಕವಾಗಿ ಇರುವುದರಿಂದ ನಮ್ಮ ಆದರ್ಶಗಳಿಗೆ ಅತಿ ಹತ್ತಿರದಲ್ಲಿರುತ್ತದೆ. ಹೀಗಾಗಿ ಆ ಜೀವನ ನಿಜ ಜೀವನಕ್ಕಿಂತಲೂ ಸಾರ್ವತ್ರಿಕವಾಗಿರುವುದು ಸಾಧ್ಯ. ಆದ್ದರಿಂದಲೇ ಜನ ಸಾಮಾನ್ಯರು ನಿಜ ಜೀವನದಿಂದ ಮಾತ್ರವೇ ತೃಪ್ತಿಗೊಳ್ಳದೇ ಸಾಹಿತ್ಯ ಮತ್ತು ಕಲೆಗಳಲ್ಲಿಯೂ ಆಸಕ್ತರಾಗುವರು !

'ನಾವು ಯಾರಿಗಾಗಿ ಬರೆಯುತ್ತೇವೆ ಎನ್ನುವುದು ಒಂದು ಮೂಲಭೂತ ಪ್ರಶ್ನೆ. ಹಾಗೂ ಅದು ಸಿದ್ಧಾಂತಕ್ಕೆ ಸಂಬಂಧಪಟ್ಟದ್ದು.'

'ಒಂದು ಸಮಾಜದ ಸಾಹಿತ್ಯವು ಅದರ ಸದಸ್ಯರ ಬುದ್ಧಿಯಲ್ಲಿ ಪ್ರತಿಫಲನಗೊಳ್ಳುವ ಪ್ರಕ್ರಿಯೆಯ ಪರಿಣಾಮವಾಗಿಯೇ ಸಾಹಿತ್ಯ ಮತ್ತು ಕಲೆಗಳು ರೂಪುಗೊಳ್ಳುತ್ತವೆ.'

'ಹಲವರು ಲೇಖಕರು ಮತ್ತು ಕಲಾವಿದರು ದುಡಿಯುವ ವರ್ಗದಿಂದ ದೂರ ಉಳಿದು ಅರ್ಥಹೀನ ಜೀವನವನ್ನು ನಡೆಸುವುದರಿಂದ ಅವರ ಜನ ಸಾಮಾನ್ಯರ ಭಾಷೆಯು ಅವರಿಗೆ ಅಪರಿಚಿತವಾಗಿಯೇ ಉಳಿದುಬಿಡುತ್ತದೆ.'

'ಪ್ರಾಚೀನ ಸಾಹಿತ್ಯ ಮತ್ತು ಸಾಹಿತ್ಯ ಪ್ರಕಾರಗಳನ್ನು ಸಾರಾಸಗಟಾಗಿ ತಿರಸ್ಕರಿಸುವುದು ಸರಿಯಲ್ಲ; ಬದಲಾಗಿ ಅವುಗಳಿಗೆ ಹೊಸರೂಪವನ್ನು ಕೊಟ್ಟು, ಹೊಸ ವಸ್ತು, ಚೈತನ್ಯಗಳನ್ನು ತುಂಬಿ

ಮಾವೋ ತ್ಸೆ ತುಂಗ್

... ಸುವುದು ನಮ್ಮ ಉದ್ದೇಶವಾಗಿರಬೇಕು.'

'ನಮ್ಮ ಪೂರ್ವಜರ ಹಾಗೂ ವಿದೇಶೀಯರ ಬರಹಗಳನ್ನು–ಅವು ಫ್ಯೂಡಲ್ ಅಥವಾ ಬೂರ್ಜ್ವಾ ವರ್ಗಗಳ ಕೊಡುಗೆಗಳಾಗಿದ್ದರೂ ಸಹ–ನಾವು ತಿರಸ್ಕರಿಸಬಾರದು; ಅವುಗಳಿಂದ ಕಲಿಯಬೇಕು.'

'ಮನುಷ್ಯ ಸ್ವಭಾವವೆನ್ನುವುದು ಅಮೂರ್ತವಾಗಿದ್ದು ಶೂನ್ಯದಿಂದ ಬಂದಿದ್ದಲ್ಲ; ಒಂದು ವರ್ಗ ಸಮಾಜದಲ್ಲಿನ ಜನರ ಸ್ವಭಾವವು ಅವರ ವರ್ಗಗಳಿಗೆ ಅನುಗುಣವಾಗಿಯೇ ಇರಲು ಸಾಧ್ಯ; ವರ್ಗಾತೀತವಾದ ಮನುಷ್ಯ ಸ್ವಭಾವವೆನ್ನುವುದು ಸಾಧ್ಯವಿಲ್ಲ.'

●

ಆಧಾರ ಗ್ರಂಥಗಳು

Mao: Frederick King Poole: Franklin Watts (1982).

Red China Today: Edgar Snow: Penguin Books (1974).

The Far East: Paul H. Clyde; Burton F. Beers; Prentice Hall of India Pvt. Ltd., (1976).

Mao Tse Tung–Selected Writings: National Book Agency Pvt. Ltd., Calcutta (1967).

Mao Tse Tung–Poems: Foreign Languages Press, Peking (1976).

The Great Reversal: William Hinton: Monthly Review Press (1990).


ಸಾಮಾಜಿಕ ಚಿಂತನ ಮಾಲೆ